ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

16 ಜುಲೈ 2014 ಪುಟ 20 ರೂ. 15/-



ಕವಿಯತ್ರಿಯ ಮುತ್ತಿನ ಪದ್ಯ



ಕಾಶಪ್ಪನ ಲೀಲೆ!

ಚಿತ್ರದುರ್ಗ ಬಿದರಿ ಮತ್ತೆ ಬಿದ್ರಲ್ರಿ....!

ಹೇಳೋದು ವೇದಾಂತ ಇಕ್ಕೋದು ಗಾಳ




ಬಳ್ಳಾರಿ ದಲಿತರ ಭೂ ಹೋರಾಟ



ಕಣ್ಣೀರಿಟ್ಟ ಶೃತಿ ಚಂದ್ರಚೂಡನ ಕಲಾಟ





ನೆಟ್‌ವರ್ಕ್ 18 ಮಾಲೀಕತ್ವ ಹಸ್ತಾಂತರ

ಮುಖೇಶ್ ಅಂಬಾನಿ ಕೊಂಡಿದ್ದು ಏನನ್ನು

ಸುಮಾರು ಒಂದೂವರೆ ವರ್ಷಗಳ ಹಿಂದೆ ಈ ಅಂಕಣಕಾರನು ಕಾರ್ಯಕರ್ತನಾಗಿರುವ ಕಾರ್ಮಿಕ ಸಂಘಟನೆಯಲ್ಲಿ ಒಂದು ಚರ್ಚೆ ನಡೆಯಿತು. ಆಗತಾನೇ ತಾತ್ಕಾಲಿಕವಾಗಿ ಮುಚ್ಚಿಕೊಂಡಿದ್ದ ಟಿವಿ ಚಾನೆಲ್‌ವೊಂದರ ಸಿಬ್ಬಂದಿಯನ್ನು ಸಂಘಟಿಸಿ, ಅವರಿಗೆ ಚಾನೆಲ್‌ನಿಂದ ಕಾನೂನುಪ್ರಕಾರ ಬರಬೇಕಿದ್ದ ಪರಿಹಾರ ಇತ್ಯಾದಿ ತಲುಪುವಂತೆ ಮಾಡಲು ಹಾಕಬೇಕಾದ ಪ್ರಯತ್ನವನ್ನು ಬಹಳ ಗಂಭೀರವಾಗಿ ಮಾಡಬೇಕೇಬೇಡವೇ? ಎಂಬುದು ಆ ಚರ್ಚೆ. ಇದು ಒಂದು ಚರ್ಚೆಯ ರೂಪ ತಾಳಲು ಕಾರಣವಿತ್ತು. ಸದರಿ ಸಿಬ್ಬಂದಿ, ಒಮ್ಮೆ ಕಾರ್ಮಿಕ ಸಂಘಟನೆಯತ್ತ ಮುಖ ಮಾಡಿದರೆ, ಇನ್ನೊಮ್ಮೆ ಆ ಚಾನೆಲ್‌ಗೆ ಪುನಶ್ಚೇತನ ನೀಡುತ್ತಾರೆಂದು ನಂಬಲಾಗಿದ್ದ ಅಬಕಾರಿ ಉದ್ಯಮಿ ಕಂ ರಾಜಕಾರಣಿಯ ಮನೆಯತ್ತ ಎಡತಾಕುತ್ತಿದ್ದರು. ತಮಗೆ ಕನಿಷ್ಠ ಕಾರ್ಮಿಕ ಕಾನೂನುಗಳನ್ನೂ ಅನ್ವಯಿಸದೇ ಅನ್ಯಾಯವೆಸಗಿದ್ದಾರೆಂದು ಒಂದು ದಿನ ಕೂಗಾಡುತ್ತಿದ್ದ ಅವರು, ಮರುದಿನ ಹೇಗಾದರೂ ಕೆಲಸ ಉಳಿದೀತೇ ಎಂಬ ನಿರೀಕ್ಷೆಯಲ್ಲಿ ರಾಜಿಗಳಿಗೆ ಸಿದ್ಧರಾಗಿ ನಿಲ್ಲುತ್ತಿದ್ದರು.

ಅಷ್ಟು ಸುಶಿಕ್ಷಿತರಲ್ಲದ ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವಷ್ಟು ಸುಲಭವಾಗಿ, ಈ ಕೆನೆಪದರದ ಜನರನ್ನು ಸಂಘಟಿಸುವುದು ಸಾಧ್ಯವಿರಲಿಲ್ಲ. ಈ ಚಾನೆಲ್‌ನ ಬೆಳವಣಿಗೆಗಳು ಯಾವ ದಿನಪತ್ರಿಕೆಗಳಲ್ಲೂ ಸುದ್ದಿಯಾಗುತ್ತಿರಲಿಲ್ಲ. ಇಂತಹ ಸುದ್ದಿಗಳಿಗೆ ಇತರ ಮಾಧ್ಯಮಗಳು ಒಂದು ಅಘೋಷಿತ ನಿಷೇಧವನ್ನು ಹೇರಿಕೊಂಡಿದ್ದವು. ಈ ವಿದ್ಯಮಾನ ನಡೆಯುವ ಕೆಲವೇ ದಿನಗಳಿಗೆ ಮುಂಚೆ ಮತ್ತೊಂದು ಟಿವಿ ಚಾನೆಲ್‌ನ ಪ್ರಮುಖ ವರದಿಗಾರರ ಜೊತೆ ಇಂತಹುದೇ ಮಾತುಕತೆ ನಡೆದಿತ್ತು. 'ಬೇರೆಲ್ಲಾ ವಿದ್ಯಮಾನಗಳು ನಿಮಗೆ ಅಷ್ಟೊಂದು ಮುಖ್ಯವೆನಿಸುತ್ತದೆ. ಆದರೆ ನೀವು ಬಯಸುವಂತಹ ಸುದ್ದಿ ಮೌಲ್ಯ (news value) ಇದ್ದರೂ, ಪೌರ ಕಾರ್ಮಿಕರ ಈ ಹೋರಾಟದ ಬಗ್ಗೆ ಸಣ್ಣದೊಂದು ಕಾರ್ಯಕ್ರಮವನ್ನೂ ನೀವ್ಯಾಕೆ ಮಾಡುತ್ತಿಲ್ಲ?'. ಏಕೆಂದರೆ ಆ ಸಂದರ್ಭದಲ್ಲಿ ಬೆಂಗಳೂರಿನಾದ್ಯಂತ ಕಸ ತುಂಬಿಕೊಂಡಿತ್ತು. ಮಂಡೂರು ಹಾಗೂ ಮಾವಳ್ಳಿಪುರದ ಜನರ ಪ್ರತಿಭಟನೆಯ ಕಾರಣಕ್ಕೆ ಕಸ ವಿಲೇವಾರಿ ಆಗುತ್ತಿರಲಿಲ್ಲ. ಅದೇ ಹೊತ್ತಿನಲ್ಲಿ ಪೌರಕಾರ್ಮಿಕರೂ 3 ತಿಂಗಳಿಂದ ಸಂಬಳ ಕೊಟ್ಟಿಲ್ಲ, ಇಎಸ್‌ಐ ಮತ್ತು ಪಿಎಫ್ ನೀಡಿಲ್ಲ ಎಂಬ ಕಾರಣಕ್ಕೆ ಕೆಲಸ ಬಂದ್ ಮಾಡಿದರೆ, ಅದಕ್ಕೊಂದು ಸುದ್ದಿ ಮೌಲ್ಯ ಪ್ರಾಪ್ತವಾಗಿಯೇ ತೀರುತ್ತದೆ ಎಂಬುದು ನಮ್ಮ ನಂಬಿಕೆಯಾಗಿತ್ತು.


ಆಗ ಆ ಪ್ರಮುಖ ವರದಿಗಾರ ನೀಡಿದ ಉತ್ತರ ಸತ್ಯದ ದರ್ಶನ ಮಾಡಿಸಿತ್ತು. 'ಅದನ್ನೇನೋ ಸುದ್ದಿ ಮಾಡಬಹುದು. ಆದರೆ ನಾಳೆ ನಮ್ಮ ಟಿವಿ ಚಾನೆಲ್‌ನಲ್ಲಿ ಇದೇ ರೀತಿ ಅತಂತ್ರರಾಗಿರುವ ಸಿಬ್ಬಂದಿಯೂ ಕೆಲಸದ ಭದ್ರತೆ, ಪಿಎಫ್, ನಿಯಮಿತ ಸಂಬಳಕ್ಕಾಗಿ ಪ್ರತಿಭಟಿಸಿದರೆ, ನೀವು ಅವರ ಜೊತೆ ಝುಂಡಾ ಹಿಡಿದುಕೊಂಡು ಬಂದು ಕೂರುವುದಿಲ್ಲ ಅಂತ ಏನು ಗ್ಯಾರಂಟಿ?'

ಕಾರ್ಮಿಕರನ್ನು ಅತಂತ್ರರನ್ನಾಗಿಟ್ಟಷ್ಟೂ, ಅವರಿಂದ ಹೆಚ್ಚಿನ ಪ್ರತಿರೋಧವಿಲ್ಲದೇ, ಹೆಚ್ಚಿನ ಕೆಲಸ ತೆಗೆಯಬಹುದು ಎಂಬುದು ಉದ್ದಿಮೆಯಲ್ಲಿ ಚಾಲ್ತಿಯಲ್ಲಿರುವ ಒಂದು ಉಪಾಯ. ಅದನ್ನು ನಮ್ಮ ಮಾಧ್ಯಮ ಸಂಸ್ಥೆಗಳೂ ಬಳಸುತ್ತಿವೆ. ಹೆಚ್ಚುಕಡಿಮೆ ಪೊಲೀಸ್ ಇಲಾಖೆಯಲ್ಲಿರುವ ಪ್ರಮಾಣದಲ್ಲೇ ಶ್ರೇಣೀಕರಣ ಹಾಗೂ ಮೇಲಿನವರನ್ನು ಪ್ರಶ್ನಿಸಬಾರದು ಎನ್ನುವ ಕೆಲಸದ ಸಂಸ್ಕೃತಿಯನ್ನು ಅಲ್ಲಿ ಬಲವಾಗಿ ಚಾಲ್ತಿಯಲ್ಲಿಡಲಾಗಿದೆ.

ಜುಲೈ 1ರಂದು ಕರ್ನಾಟಕದಲ್ಲಿ ಪತ್ರಿಕಾ ದಿನಾಚರಣೆ ನಡೆಯುತ್ತಿದೆ ಎನ್ನುವ ಕಾರಣಕ್ಕೆ ಮಾತ್ರ ಈ ಮಾತುಗಳನ್ನು ಬರೆಯುತ್ತಿಲ್ಲ. ಭಾರತದ ಮಾಧ್ಯಮ ಕ್ಷೇತ್ರದಲ್ಲಿ ಮಹತ್ತರ ಬೆಳವಣಿಗೆಯೊಂದು ಕಳೆದ ತಿಂಗಳು (ಮೇ 27) ಹೆಚ್ಚು ಸದ್ದಿಲ್ಲದೇ ನಡೆದುಹೋಗಿರುವುದು ಯಾರಲ್ಲೂ ದೊಡ್ಡ ಆತಂಕ ಸೃಷ್ಟಿಸುತ್ತಿಲ್ಲ ಎನ್ನುವ ಕಾರಣಕ್ಕೆ ಬರೆಯಬೇಕಾಗಿ ಬಂದಿದೆ. ನೆಟ್‌ವರ್ಕ್ 18 ಎಂದು ಕರೆಯಲಾಗುತ್ತಿರುವ ಮಾಧ್ಯಮ ಸಮೂಹವನ್ನು ದೇಶದ ನಂ.1 ಕುಬೇರ ಮುಖೇಶ್ ಅಂಬಾನಿ ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಂಡಿದ್ದಾನೆ. ಈ ಬದಲಾವಣೆ ಇದ್ದಕ್ಕಿದ್ದಂತೆ ನಡೆದ ವಿದ್ಯಮಾನವೇನೂ ಅಲ್ಲವಾದರೂ, ಸಂಪೂರ್ಣ ಹಿಡಿತವನ್ನು ಆತ ನೇರವಾಗಿ ತೆಗೆದುಕೊಂಡಿದ್ದು ಕಳೆದ ತಿಂಗಳಷ್ಟೇ.

ನಷ್ಟದಲ್ಲಿದ್ದ ನೆಟ್‌ವರ್ಕ್ 18ರಲ್ಲಿ ದೊಡ್ಡ ಪ್ರಮಾಣದ ಹೂಡಿಕೆಯನ್ನು ಅಂಬಾನಿಯ ರಿಲೆಯನ್ಸ್ ಕಂಪೆನಿಯು ಮಾಡಿದ್ದುದರ ಪರಿಣಾಮವನ್ನು ಅದರ ಸಿಬ್ಬಂದಿಯು ಕಳೆದ ಆಗಸ್ಟ್‌ನಲ್ಲೇ ಅನುಭವಿಸಿದ್ದರು. ಆಗಸ್ಟ್ 16ರ ಶುಕ್ರವಾರವನ್ನು ಅವರು 'ಕರಾಳ ಶುಕ್ರವಾರ (Black Friday)' ಎಂದು ಕರೆದಿದ್ದರು. ಏಕೆಂದರೆ ಆ ದಿನ, ಒಂದೇ ದಿನದಲ್ಲಿ ನೆಟ್‌ವರ್ಕ್‌ನ 350 ಸಿಬ್ಬಂದಿಯನ್ನು ಕೆಲಸದಿಂದ ತೆಗೆದುಹಾಕಲಾಗಿತ್ತು. ಎಲ್ಲೂ ಒಂದೇ ಒಂದು ಪ್ರತಿಭಟನೆಯ ಸದ್ದು ಕಾಣಲಿಲ್ಲ. ಭಾರತದ ಮಾಧ್ಯಮ ಸಂಸ್ಥೆಯ 3ನೇ

Network 18 Enable Enlighten Entertain



ಅತಿ ದೊಡ್ಡ ಸಮೂಹದ ಅತ್ಯಂತ ಸುಶಿಕ್ಷಿತ ಸಿಬ್ಬಂದಿ ಮರುಮಾತನಾಡದೇ ರಾಜೀನಾಮೆ ನೀಡಿ, ಬೇರೆ ಕಡೆ ಕೆಲಸ ಹುಡುಕುವುದರಲ್ಲಿ ನಿರತರಾಗಿದ್ದರು. ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಕರೆಯಲ್ಪಡುವ ಮಾಧ್ಯಮರಂಗದಲ್ಲಿ ಪ್ರಜಾತಂತ್ರಕ್ಕೆ ಯಾವ ಸ್ಥಾನವೂ ಇರಲಿಲ್ಲ. ಅತ್ಯಂತ ಅಪ್ರಜಾತಾಂತ್ರಿಕ ರೀತಿಯಲ್ಲಿ ಅವರನ್ನು ಹೊರಗೆಸೆಯಲಾಗಿತ್ತು.

ಆ ಹೊತ್ತಿಗೆ ನೆಟ್‌ವರ್ಕ್ 18ರ ಒಟ್ಟು ಮಾರುಕಟ್ಟೆ ಮೌಲ್ಯ 1.1 ಬಿಲಿಯನ್ ಡಾಲರ್‌ಗಳಾಗಿತ್ತು (ಸುಮಾರು). ಒಟ್ಟು 11 ಭಾಷೆಗಳಲ್ಲಿ 27 ಚಾನೆಲ್‌ಗಳನ್ನು ಅದು ನಡೆಸುತ್ತಿತ್ತು. ಅದರ ಜೊತೆಗೆ ಫೋರ್ಬ್ಸ್ ಇಂಡಿಯಾ ಎನ್ನುವ ಬಿಸಿನೆಸ್ ನಿಯತಕಾಲಿಕ, ಫಸ್ಟ್‌ಪೋಸ್ಟ್ ಎಂಬ ವೆಬ್‌ಸೈಟ್ ಇತ್ಯಾದಿಗಳೂ ಇದೇ ನೆಟ್‌ವರ್ಕ್‌ನ ಮಾಲೀಕತ್ವದಲ್ಲಿವೆ. ರಾಘವ್ ಬೆಹ್ಲ್ ಎನ್ನುವ ಒಬ್ಬ ಮಾಜಿ ಪತ್ರಕರ್ತ, ಬಿಸಿನೆಸ್ ಪತ್ರಿಕೋದ್ಯಮದ ರುಚಿ ಹತ್ತಿಸಿಕೊಂಡು ಬೆಳೆಸಿದ ದೊಡ್ಡ ಸಂಸ್ಥೆ ಇದಾಗಿದೆ. 80ರ ದಶಕದಲ್ಲಿ ಸರ್ಕಾರೀ ದೂರದರ್ಶನದಲ್ಲಿ ಒಬ್ಬ ವರದಿಗಾರನಾಗಿ ಸೇರಿಕೊಂಡ ಈ ವ್ಯಕ್ತಿ 'ನ್ಯೂಸ್‌ಟ್ರಾಕ್' ಎನ್ನುವ ಒಂದು ಕಾರ್ಯಕ್ರಮದ ನಿರೂಪಣೆ ಮಾಡುತ್ತಿದ್ದ. ಅದಾದನಂತರ ಬಿಸಿನೆಸ್ ಕಾರ್ಯಕ್ರಮಗಳನ್ನು ಮಾಡುತ್ತಾ 1990ರ ನಂತರ ಖಾಸಗಿ ಟಿವಿ ಚಾನೆಲ್‌ಗಳ ಯುಗ ಆರಂಭವಾದ ಮೇಲೆ ನೆಟ್‌ವರ್ಕ್ 18ನ್ನು ಆರಂಭಿಸಿ, ವಿಸ್ತರಿಸುತ್ತಾ ಹೋದ.

ಸಾಮ್ರಾಜ್ಯ ವಿಸ್ತರಣೆ ಆಗುತ್ತಲೇ ಇದ್ದರೂ, ಅದರ ಮೇಲೆ ಸಾಲದ ಹೊರೆಯೂ ಸಾಕಷ್ಟಿತ್ತು. ಅವೆಲ್ಲದರ ಹೊರತಾಗಿಯೂ 2007ರಲ್ಲಿ ಅದರ ಷೇರು ಮೌಲ್ಯ ಸಾಕಷ್ಟು ಏರಿತ್ತು. ಅಲ್ಲಿಂದಾಚೆಗೆ ವಿಸ್ತರಿತ ಸಾಮ್ರಾಜ್ಯದ ಹೊರೆ ತಡೆದುಕೊಳ್ಳಲಾಗದೇ ಅದರ ಷೇರು ಮೌಲ್ಯವು ತೀವ್ರವಾಗಿ (ಶೇ.95ರಷ್ಟು!) ಕುಸಿಯಲಾರಂಭಿಸಿದಾಗ ಅಂಬಾನಿಯ ನೆರವಿನ ಹಸ್ತ ಅದಕ್ಕೆ ಒದಗಿಬಂದಿತು. ಜನವರಿ 2012ರಲ್ಲಿ ರಿಲೆಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ತಾನು ನೆಟ್‌ವರ್ಕ್ 18ರಲ್ಲಿ ದೊಡ್ಡ ಮೊತ್ತದ ಹೂಡಿಕೆಯನ್ನು ಮಾಡಲಿರುವುದಾಗಿ ಘೋಷಿಸಿತು. ಎರಡೇ ದಿನಗಳಲ್ಲಿ ಷೇರು ಮೌಲ್ಯ ಶೇ.27ರಷ್ಟು ಹಿಗ್ಗಿತು. ಇದರಿಂದ ಸಂಸ್ಥೆಯ ಸಿಬ್ಬಂದಿಯೂ ಖುಷಿಗೊಂಡರು. ಇದರ ಜೊತೆಗೇ ರಾಘವ್ ಬೆಹ್ಲ್ ಮತ್ತು ಸಿಎನ್‌ಎನ್-ಐಬಿಎನ್‌ನ ಮುಖ್ಯಸ್ಥ ರಾಜ್‌ದೀಪ್ ಸರ್ದೇಸಾಯಿ ತಾವು 'ಸ್ವತಂತ್ರ ಮಾಧ್ಯಮ (independent media)' ವಾಗಿ ಉಳಿದುಕೊಳ್ಳುವುದಾಗಿಯೂ ಘೋಷಿಸಿದರು.

ಉದ್ದಿಮೆಪತಿಗಳು ಪತ್ರಿಕೆಗಳನ್ನು ನಡೆಸುವುದು ಹೊಸದೇನೂ ಅಲ್ಲ. ಭಾರತದ ಸ್ವಾತಂತ್ರ್ಯ ಚಳವಳಿಯ ಕಾಲದಲ್ಲೂ ದೆಹಲಿ, ಇಸ್ಲಾಮಾಬಾದ್‌ಗಳಿಂದ ಹೊರಬರುತ್ತಿದ್ದ ದೊಡ್ಡ ಪತ್ರಿಕೆಗಳ ಮಾಲೀಕರು ಉದ್ದಿಮೆಪತಿಗಳೇ ಆಗಿದ್ದರು. ಉದಾಹರಣೆಗೆ, ಬಿರ್ಲಾ ಮಾಲೀಕತ್ವದಲ್ಲಿ ಹದಿನಾರು ವೃತ್ತಪತ್ರಿಕೆಗಳಿದ್ದವು. ಅವು ಇಂದಿಗೂ ಮುಂದುವರೆದಿವೆ ಮತ್ತು ಬಿರ್ಲಾ ಈ ದೇಶದ ವಿವಿಧ ಉದ್ದಿಮೆಗಳ ಮೇಲೆ ಹೊಂದಿರುವ ಹಿಡಿತ ಎಲ್ಲರಿಗೂ ಪರಿಚಿತ. ಅದೇ ರೀತಿ ಆ ಕಾಲದಿಂದಲೂ ಬಿರ್ಲಾನಿಗೆ ಪ್ರತಿಸ್ಪರ್ಧಿಯಾಗಿದ್ದ ಸೇಠ್ ದಾಲ್ಮಿಯಾನ ಒಡೆತನದಲ್ಲಿ ಟೈಮ್ಸ್ ಆಫ್ ಇಂಡಿಯಾ ಮತ್ತು ಪಾಕಿಸ್ತಾನದ ಪತ್ರಿಕೆ ದಿ ಸಿವಿಲ್ ಅಂಡ್ ಮಿಲಿಟರಿ ಗೆಜೆಟ್ ಇದ್ದವು.

ಅಂದರೆ ಈ ಯಾವ ಪತ್ರಿಕೆಗಳೂ ಇಂಡಿಪೆಂಡೆಂಟ್ (ಸ್ವತಂತ್ರ) ಆಗಿರಲಿಲ್ಲ. ಸೇಠ್ ದಾಲ್ಮಿಯಾ ಸಿಮೆಂಟ್, ಏರ್‌ಲೈನ್ಸ್, ರೈಲ್ವೇ, ವಿದ್ಯುತ್ ಕಂಪೆನಿಗಳು, ರಾಸಾಯನಿಕ ಕಾರ್ಖಾನೆಗಳು, ಪ್ಲೈವುಡ್, ಕಲ್ಲಿದ್ದಲು ಗಣಿಗಳು, ಸಕ್ಕರೆ, ಸೋಪು, ಮಾರ್ಗರಿನ್, ಟೆಕ್ಸ್‌ಟೈಲ್ಸ್, ಬ್ಯಾಂಕುಗಳು ಮತ್ತು ಇನ್‌ಶೂರೆನ್ಸ್ ಕ್ಷೇತ್ರಗಳ ಕಂಪೆನಿಗಳ ಒಡೆತನ ಹೊಂದಿದ್ದನು. ಇವೆಲ್ಲದರಲ್ಲಿ ನಡೆಸಬಹುದಾದ ಅವ್ಯವಹಾರಗಳನ್ನು ಆ ಪತ್ರಿಕೆಗಳು ಬಯಲಿಗೆಳೆಯುತ್ತಿದ್ದವು ಎಂದು ನಂಬಲು ಯಾವ ಕಾರಣಗಳೂ ಇಲ್ಲ. ಆದರೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಈ ಪತ್ರಿಕೆಗಳು ತಮ್ಮ ಮಾಲೀಕರ ವ್ಯವಹಾರ ಮತ್ತು ಅವ್ಯವಹಾರಗಳನ್ನು ಬೆಂಬಲಿಸುವುದು ಅನಿವಾರ್ಯವಾಗಿದ್ದವು ಅಥವಾ ಅವರ ಅವ್ಯವಹಾರಗಳನ್ನು ಸಚ್ಛ ವ್ಯವಹಾರವೆಂದು ಬಿಂಬಿಸುವುದು ಅವುಗಳ ಕರ್ತವ್ಯವೂ ಆಗಿರುತ್ತವೆ.

ಹೀಗೆಲ್ಲಾ ಇದ್ದೂ, ಈ ದೇಶದ ಮಾಧ್ಯಮಗಳು ಸಾಕಷ್ಟು ಉತ್ತಮವಾದ ಕೆಲಸಗಳನ್ನೂ ಮಾಡುತ್ತಾ ಬಂದಿವೆ. ಜನರಿಗೆ ಒಂದಷ್ಟು ಸತ್ಯವನ್ನಾದರೂ ಹೇಳಿವೆ. ಹಾಗಾಗಿಯೇ ದೊಡ್ಡ ಉದ್ದಿಮೆಪತಿಗಳ ಒಡೆತನದ ಮಾಧ್ಯಮಗಳಲ್ಲೂ ಅತ್ಯುತ್ತಮ ಪತ್ರಕರ್ತರು ಕೆಲಸ ಮಾಡಲು ಸಾಧ್ಯವಾಗಿತ್ತು. ಇಂದು ಆ ರೀತಿ ನಡೆಯುವುದು ಸಾಧ್ಯವೇ ಎಂಬ ಪ್ರಶ್ನೆ ನಮ್ಮೆದುರಿಗಿದೆ. ಆದರೂ ತಮ್ಮದು ಇಂಡಿಪೆಂಡೆಂಟ್ ಮೀಡಿಯಾ ಆಗಿ ಉಳಿದಿರುತ್ತದೆ ಎಂಬಂತೆ ರಾಘವ್ ಬೆಹ್ಲ್ ಮತ್ತು ರಾಜ್‌ದೀಪ್ ಸರ್ದೇಸಾಯಿ ವರ್ತಿಸಲು ಇದ್ದಿರಬಹುದಾದ ಒಂದೇ ಕಾರಣವೆಂದರೆ, ನೆಟ್‌ವರ್ಕ್ 18ಅನ್ನು ಕೊಂಡುಕೊಳ್ಳುವಾಗ ಅಂಬಾನಿ ಬಳಸಿದ ಆತನ ಸಂಸ್ಥೆಯ ಹೆಸರು 'ಇಂಡಿಪೆಂಡೆಂಟ್ ಮೀಡಿಯಾ ಟ್ರಸ್ಟ್'. ಅಂದರೆ ಇಂಡಿಪೆಂಡೆನ್ಸ್, ಮೀಡಿಯಾ ಮತ್ತು ಟ್ರಸ್ಟ್ ಎಲ್ಲವನ್ನೂ ಅಂಬಾನಿ ಕೊಂಡಾಗಿತ್ತು!

ಸರಿಯಾಗಿ ಈ ಸಂದರ್ಭದಲ್ಲೇ ಅಂಬಾನಿ ನೆಟ್‌ವರ್ಕ್ 18ಅನ್ನು ಸಂಪೂರ್ಣವಾಗಿ ಕೊಂಡುಕೊಳ್ಳಲು ಇರಬಹುದಾದ ಮುಖ್ಯ ಕಾರಣ 'ಗ್ಯಾಸ್ ಡೀಲ್'. ಗೋದಾವರಿ ಕಣಿವೆಯ ನೈಸರ್ಗಿಕ ಅನಿಲದ ನಿಕ್ಷೇ[...] ಪುಡಿಗಾಸಿಗೆ ತನ್ನ ಸ್ವಂತದ ಆಸ್ತಿಯನ್ನಾಗಿಸಿಕೊಂ[...] ಅಂಬಾನಿಯ ವಿರುದ್ಧ ಆಮ್‌ಆದ್ಮಿ ಪಕ್ಷವು ದೆಹಲಿ [...] ನಡೆಸಿದ ಕಡೆಯ ದಿನದಂದು ಎಫ್‌ಐಆರ್ ಸಹ [...] ಅಂತಹ ಆಮ್‌ಆದ್ಮಿ ಪಕ್ಷಕ್ಕೆ ಯಾವ ಕವರೇಜ್ [...] ನೀಡಬಾರದು ಎಂಬ ತನ್ನ ಸೂಚನೆಯನ್ನು, ರಿಲೆ[...] ಪರೋಕ್ಷ ನಿಯಂತ್ರಣದಲ್ಲಿದ್ದ ಸಿಎನ್‌ಎನ್-ಐಬಿ[...] ಉಲ್ಲಂಘಿಸಿತ್ತು. ಹಾಗಾಗಿ ಪರೋಕ್ಷ ನಿಯಂತ್ರಣದ ಬ[...] ಪ್ರತ್ಯಕ್ಷ ನಿಯಂತ್ರಣಕ್ಕೆ ಅದು ಕೈ ಹಾಕಿತು.

ಕ್ರೋನಿ ಕ್ಯಾಪಿಟಲಿಸಂ ವಿರುದ್ಧ ಕೇಜ್ರಿವಾಲ್ ಗು[...] ಹಾಕುತ್ತಿದ್ದಾಗ, ಕ್ರೋನಿ ಜರ್ನಲಿಸಂ ಸಹ ತಲೆ [...] ಏಕೆಂದರೆ, ನೆಟ್‌ವರ್ಕ್ 18ನ್ನು ತನ್ನದಾಗಿಸಿಕೊಂಡ [...] ಸಂದರ್ಭದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ [...] ಎಕ್ಸ್‌ಅನ್ನೂ ನಿಯಂತ್ರಣಕ್ಕೆ ತೆಗೆದುಕೊಳ್ಳಲು ರಿಲೆ[...] ಕಂಪೆನಿ ಪ್ರಯತ್ನ ಪಡುತ್ತಿತ್ತು. ನ್ಯೂಸ್ ಎಕ್ಸ್‌ಅನ್ನು ನಡ[...] ಕಂಪೆನಿಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಕಾನ[...] ಉಲ್ಲಂಘಿಸಿ ಕೆಲವು ಅವ್ಯವಹಾರಗಳನ್ನು ರಿಲೆ[...] ನಡೆಸಿದೆಯೆಂದು ಗಂಭೀರ ವಂಚನೆಯನ್ನು ತನಿಖೆ ಮ[...] ಸಂಸ್ಥೆ (ಕಾರ್ಪೊರೇಟ್ ವ್ಯವಹಾರಗಳ ಸಚಿವಾಲ[...] ಬರುವ ಸರ್ಕಾರೀ ಸಂಸ್ಥೆ)ಯು ಆಪಾದಿಸಿದೆ.

ಅಂದರೆ, ಅಂಬಾನಿ ಕೊಂಡಿರುವುದು ಭ[...] ಯಾವುದೋ ಒಂದು ಮಾಧ್ಯಮ ಗುಂಪನ್ನು ಮಾ[...] ಬದಲಿಗೆ ಭಾರತದ ಜನರ ಅಭಿಪ್ರಾಯಗಳನ್ನು ರೂ[...] ಯಂತ್ರಾಂಗದ ಮೇಲೆ ಆತ ಹಿಡಿತ ಸಾಧಿಸು[...] ಒಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ[...] ಆಕ್ರಮಣಕಾರಿ ಗುಣದಿಂದ ಕರ್ನಾಟಕದ [...] ಪತ್ರಿಕೆಗಳೆಲ್ಲದರ ಸ್ವರೂಪವನ್ನೇ ಬದಲಿಸಿಬಿಟ್ಟಿತು. [...] ಸಂಕೇಶ್ವರರು ಹಣ ಸುರಿದು ಆರಂಭಿಸಿದ ಪತ್ರಿಕೆ[...] ಪತ್ರಿಕೆಗಳ ಸ್ವರೂಪವನ್ನು ಬದಲಿಸಿತು. ಆದರೂ [...] ಇನ್ನೂ ಒಂದು ಮಟ್ಟಿಗಿನ ಆರೋಗ್ಯಕರ ಪತ್ರಿಕೋ[...] ಸ್ವಲ್ಪವಾದರೂ ಉಳಿದುಕೊಂಡಿದೆ. ಅದು ಮಾಧ್ಯಮ [...] 'ಸ್ವತಂತ್ರ'ವೆಂದು ಕಾಣದಿದ್ದರೆ ವಿಶ್ವಾಸಾರ್ಹತೆ [...] ಉಳಿಯದು ಎಂಬ ಕಾರಣಕ್ಕೂ ಹೌದು; ಎ[...] ರಾಜಿ ಮಾಡಿಕೊಂಡು ಬಡಲು ತಯಾರಿಲ್ಲದ ಪ[...] ನಿಲುವಿನ ಕಾರಣಕ್ಕೂ ಹೌದು. ಆದರೆ ಭಾರತದ ಮ[...] ಕ್ಷೇತ್ರಕ್ಕೆ ಅಂಬಾನಿಯ ದೊಡ್ಡ ಮಟ್ಟದ ಪ್ರವೇಶವ[...] ವಿಶ್ವಾಸಾರ್ಹತೆಗೂ ಅಪಾಯವನ್ನು ತಂದಿಟ್ಟಿದೆ.

ಮೆಸ್ಸಿ ಎಂಬ ಅದ್ಭುತ ಕ್ರೀಡಾಪಟು



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

...ದು ಅರ್ಜೆಂಟೀನಾ ದೇಶದ ಒಂದು ಸಾಮಾನ್ಯ ...ಟುಂಬ. ಗಂಡ ಸ್ಟೀಲ್ ಫ್ಯಾಕ್ಟರಿಯೊಂದರಲ್ಲಿ ...ಲಿ ಕೆಲಸಗಾರ. ಹೆಂಡತಿ ಬೇರೆಯವರ ಮನೆಯಲ್ಲಿ ... ತಿಕ್ಕುತ್ತಿದ್ದಳು. ರೋಸಾರಿಯೋ ಎಂಬ ಊರಲ್ಲಿ ... ಜೀವನ ನಡೆಸುತ್ತಿದ್ದ ಆ ದಂಪತಿಗಳಿಗೆ ನಾಲ್ಕು ... ಮೂವರು ಪುತ್ರರಲ್ಲಿ ಕೊನೆಯವನು ...ರಂಭಿಸಿದಾಗಿನಿಂದಲೇ ಫುಟ್‌ಬಾಲ್ ಕ್ರೀಡೆ ಬಗ್ಗೆ ...ಳೆಸಿಕೊಂಡ. ಅವನು ತನ್ನ ಐದನೆ ಹುಟ್ಟುಹಬ್ಬ ...ಕೊಳ್ಳುವ ಹೊತ್ತಿಗೆ ಗ್ರಾಂಡೋಲಿ ಎಂಬ ಕ್ಲಬ್‌ಗೆ ...ರಂಭಿಸಿದ. ಆತ ಎಷ್ಟು ಚೆನ್ನಾಗಿ ಆಡುತ್ತಿದ್ದನೆಂದರೆ ... ಎಂಟು ವರ್ಷ ತುಂಬುವ ಮುನ್ನವೇ ನ್ಯುವೆಲ್ಸ್ ...ತನನ್ನು ತನ್ನ ತಂಡಕ್ಕೆ ಸೇರಿಸಿಕೊಂಡಿತು. ಆ ... ಇದ್ದ ನ್ಯುವೆಲ್ಸ್ ತಂಡ ಸ್ಥಳೀಯ ಫುಟ್‌ಬಾಲ್ ...ಲ್ಲಿ ಅದೆಷ್ಟು ಚೆನ್ನಾಗಿ ಆಡುತ್ತಿತ್ತೆಂದರೆ ನಾಲ್ಕು ... ಅವಧಿಯಲ್ಲಿ ಒಂದು ಬಾರಿ ಮಾತ್ರ ತನ್ನ ... ತಂಡದ ಮುಂದೆ ಸೋತಿತ್ತು. ಆ ತಂಡದಲ್ಲಿದ್ದ ... 1987ರಲ್ಲಿ ಜನಿಸಿದ್ದರಿಂದ ಅದನ್ನು '87ರ ...' ಎಂದೇ ಸ್ಥಳೀಯರು ಕರೆಯಲಾರಂಭಿಸಿದ್ದರು. ...ಹುಡುಗನಿಗೆ 13 ವರ್ಷ ವಯಸ್ಸಾದಾಗ ಒಂದು ...ಎದುರಾಯಿತು. ಹಾರ್ಮೋನ್‌ನಲ್ಲಿ ಅದೆಂತಹದ್ದೋ ... ಇದ್ದುದ್ದರಿಂದ ಹುಡುಗನ ದೈಹಿಕ ಬೆಳವಣಿಗೆ ...ಹೋಗುವ ಅಪಾಯ ಎದುರಾಯಿತು. ಅದಕ್ಕೆ ...ಚಿಕಿತ್ಸೆ ನೀಡಿದರೆ ಮಾತ್ರ ಆ ಹುಡುಗ ಇತರರಂತೆ ...ತ್ತಾನೆ ಎಂದು ವೈದ್ಯರು ಹೇಳಿದರು. ಅದೂ ... ಚಿಕಿತ್ಸೆ? ವರ್ಷಾನುಗಟ್ಟಲೆ ಕಾಲ ಪ್ರತಿದಿನ ...ಳಿಗೆ ಇಂಜೆಕ್ಷನ್ ಕೊಡುವುದು. ಅದಕ್ಕೆಂದು ಪ್ರತಿ ... ಖರ್ಚು ಮಾಡಬೇಕಾಗಿದ್ದದ್ದು ಬರೋಬ್ಬರಿ ... ಡಾಲರ್‌ಗಳು.

...ವೆಲ್ಸ್ ಕ್ಲಬ್ ಈ ಚಿಕಿತ್ಸೆಯ ವೆಚ್ಚವನ್ನು ...ವುದಾಗಿ ಆ ಹುಡುಗನ ತಂದೆಗೆ ಭರವಸೆ ...ದರೂ ಹಣ ಬಿಚ್ಚಲಿಲ್ಲ, ಆಗ ಅಪ್ಪ ಮತ್ತು ... ಎಲ್ಲೆಲ್ಲಿಂದಲೋ ಹಣ ಹೊಂದಿಸಿ ಮಗನಿಗೆ ... ಕೊಡಿಸಲು ಪ್ರಾರಂಭಿಸಿದರು.

...ಕಿತ್ಸೆ ಪಡೆದರೆ ಮಾತ್ರ ತಾನು ತನ್ನ ಪ್ರಿಯವಾದ ...ಬಾಲ್ ಕ್ರೀಡೆ ಆಡಲು ಸಾಧ್ಯ ಎಂದರಿತ ಆ ಪುಟ್ಟ ...ಗ ಕೆಲವೇ ದಿನಗಳಲ್ಲಿ ತನಗೆ ತಾನೇ ಇಂಜೆಕ್ಷನ್ ...ಕೊಳ್ಳುವುದನ್ನು ಕಲಿತ. ಒಂದು ವಾರ ಒಂದು ... ಮುಂದಿನ ವಾರ ಮತ್ತೊಂದು ಕಾಲಿಗೆ ತಾನೇ ...ಂಡು, ಯಾತನಾಮಯವಾದ ನೋವನ್ನು ಹಲ್ಲು ...ದು ಸಹಿಸಿಕೊಳ್ಳುತ್ತಿದ್ದ.

...ಕಿತ್ಸೆ ಏನೋ ಪ್ರಾರಂಭವಾಗಿತ್ತು, ಆದರೆ ಅದನ್ನು ...ನುಗಟ್ಟಲೆ ಮುಂದುವರೆಸುವ ಆರ್ಥಿಕ ಶಕ್ತಿ ಆತನ ...ಯಿಗೆ ಇರಲಿಲ್ಲ, ಅದು 2000ರ ಇಸವಿ. ...ಹೊತ್ತಿಗೆ ಯೂರೋಪ್‌ನಲ್ಲಿ ಫುಟ್‌ಬಾಲ್ ಅಪಾರ ...ವ ಕ್ರೀಡೆಯಾಗಿ ಪರಿವರ್ತನೆಗೊಂಡಿತ್ತು, ಸ್ಪೇನ್ ...ಲ್ಲಿ ಬಾರ್ಸಿಲೋನ ಎಂಬ ಕ್ಲಬ್ ದೊಡ್ಡದಾಗಿ ...ಯುತ್ತಿತ್ತು, ದೂರದ ಅರ್ಜೆಂಟೀನಾ ದೇಶದ ...ರಿಯೋ ನಗರದಲ್ಲಿ ಚೆನ್ನಾಗಿ ಫುಟ್‌ಬಾಲ್ ಆಡುತ್ತಿದ್ದ ...ವರ್ಷ ವಯಸ್ಸಿನ ಹುಡುಗನ ಬಗ್ಗೆ ಅದ್ಯಾರೋ ...ಲೋನಾ ಕ್ಲಬ್‌ನ ನಿರ್ದೇಶಕರಿಗೆ ಹೇಳಿದರು. ಆತ ...ಹುಡುಗ ಮತ್ತು ತಂದೆಯನ್ನು ಸ್ಪೇನ್ ದೇಶಕ್ಕೆ ...ಸಿದ.

...ಗ ಆ ಬಡ ಕುಟುಂಬಕ್ಕೆ ಬಿಕ್ಕಟ್ಟು ಎದುರಾಯಿತು. ... ಬಾರ್ಸಿಲೋನಾ ಕ್ಲಬ್‌ನಲ್ಲಿ ಆಡುವುದಕ್ಕೆ ಅವಕಾಶ ... ಹುಡುಗನಿಗೆ ಅತ್ಯಗತ್ಯವಾಗಿದ್ದ ಚಿಕಿತ್ಸೆ ...ಸಿಗುತ್ತದೆ. ಇನ್ನೊಂದೆಡೆ ಆ ಕುಟುಂಬದ ಇಬ್ಬರು ... ದೇಶದಲ್ಲಿ, ಮಿಕ್ಕವರೆಲ್ಲ ಇನ್ನೊಂದು ದೇಶದಲ್ಲಿ ...ಕಾಗುತ್ತದೆ. ಯಾರಿಗೇ ಆಗಲಿ ಇದು ಕಠಿಣ ...ಯೇ. ಕೊನೆಗೆ ಏನಾದರಾಗಲಿ, ಒಂದು ಪ್ರಯತ್ನ ... ನೋಡಿದರಾಯಿತು ಎಂದು ಆ ತಂದೆ 13 ತನ್ನ ವರ್ಷ ವಯಸ್ಸಿನ ಪುತ್ರನನ್ನು ಕರೆದುಕೊಂಡು ಸ್ಪೇನ್ ದೇಶಕ್ಕೆ ಹೋದ.

ಟ್ರಯಲ್ ಆಟದಲ್ಲಿ ಆ ಹುಡುಗ ಅದೆಷ್ಟು ಚೆನ್ನಾಗಿ ಆಡಿದನೆಂದರೆ ಬಾರ್ಸಿಲೋನಾ ಕ್ಲಬ್‌ನ ನಿರ್ದೇಶಕ ಸ್ಥಳದಲ್ಲೇ ಹುಡುಗನ ತಂದೆಯೊಂದಿಗೆ ಒಂದು ಕರಾರನ್ನು ಮಾಡಿಕೊಳ್ಳಲು ಮುಂದಾದ. ಆದರೆ ಆ ಸಮಯದಲ್ಲಿ ಯಾರ ಬಳಿಯೂ ಖಾಲಿ ಕರಾರಿನ ಪತ್ರ ಇರಲಿಲ್ಲ, ಆಗ ನಿರ್ದೇಶಕನ ಕೈಗೆ ಸಿಕ್ಕ ಪೇಪರ್ ನ್ಯಾಪ್ಕಿನ್ ಮೇಲೆಯೇ ಒಂದು ಒಪ್ಪಂದವನ್ನು ಬರೆಸಿಕೊಂಡ. ಆ ಒಪ್ಪಂದದ ಪ್ರಕಾರ 'ಬಾರ್ಸಿಲೋನಾ ಕ್ಲಬ್ ಆ ಹುಡುಗನ ಚಿಕಿತ್ಸೆ ವೆಚ್ಚವನ್ನು ಸಂಪೂರ್ಣವಾಗಿ ಭರಿಸುತ್ತದೆ; ಅದಕ್ಕೆ ಪ್ರತಿಯಾಗಿ ಆ ಹುಡುಗ ಸ್ಪೇನ್ ದೇಶಕ್ಕೆ ವಲಸೆ ಬಂದು ಕ್ಲಬ್ ಪರವಾಗಿ ಫುಟ್‌ಬಾಲ್ ಸ್ಪರ್ಧೆಗಳಲ್ಲಿ ಆಡಬೇಕು.'

ಹೀಗೆ ಬಡತನದಿಂದ ಮತ್ತು ಅಸಹಾಯಕತೆಯಿಂದ ವಿಧಿ ಇಲ್ಲದೆ ಪ್ರತಿಷ್ಠಿತ ಬಾರ್ಸಿಲೋನಾ ಕ್ಲಬ್ ಸೇರಿಕೊಂಡ ಆ ಹುಡುಗ ಈಗ ಜಗತ್ತಿನಲ್ಲೇ ಅತಿ ಶ್ರೇಷ್ಠ ಫುಟ್‌ಬಾಲ್ ಆಟಗಾರ ಎನಿಸಿಕೊಂಡಿದ್ದಾನೆ, ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾನೆ, ಬಿಲಿಯನ್‌ಗಟ್ಟಲೆ ಆಸ್ತಿಯನ್ನು ಸಂಗ್ರಹಿಸಿದ್ದಾನೆ.

ಬಡತನದ ಹಿನ್ನೆಲೆಯಿಂದ ಬಂದಿದ್ದರೂ ಇವತ್ತು ಜಗತ್ತಿನಾದ್ಯಂತ ಖ್ಯಾತಿ ಪಡೆದಿರುವ ಆ ಯುವಕ ಹಾಲಿ ಅರ್ಜೆಂಟೀನಾ ದೇಶದ ಫುಟ್‌ಬಾಲ್ ತಂಡದ ಕ್ಯಾಪ್ಟನ್ ಲಿಯೊನೆಲ್ ಮೆಸ್ಸಿ.

ಆರಂಭದ ಮೂರು ವರ್ಷಗಳ ಕಾಲ ಬಾರ್ಸಿಲೋನಾ ಕ್ಲಬ್ಬಿನ ಬಾಲಕರ ತಂಡದಲ್ಲಿ ಆಡಿದ ಮೆಸ್ಸಿ ತನ್ನ 16 ನೇ ವಯಸ್ಸಿಗೆ ಹಿರಿಯರ ತಂಡವನ್ನು ಸೇರಿಕೊಂಡ. ಅದರ ಮಾರನೆ ವರ್ಷವೇ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಲಾರಂಭಿಸಿದ. ಇಪ್ಪತ್ತೊಂದನೆ ಹುಟ್ಟುಹಬ್ಬ ಆಚರಿಸಿಕೊಳ್ಳುವ ಹೊತ್ತಿಗೆ ಆತ ಪ್ರಥಮ ಬಾರಿಗೆ ಗೋಲ್ಡನ್ ಬಾಲ್‌ಅನ್ನು ಗೆದ್ದಿದ್ದ. ಅಷ್ಟೇ ಅಲ್ಲ, ಅದಾದ ನಂತರದ ಮೂರು ವರ್ಷಗಳಲ್ಲೂ ಗೋಲ್ಡನ್ ಬಾಲ್ ಅನ್ನು ಸತತವಾಗಿ ತನ್ನದಾಗಿಸಿಕೊಂಡ. ಫೀಫಾ 2009ರಲ್ಲೇ ಈತನನ್ನು 'ಜಗತ್ತಿನ ಅತಿ ಶ್ರೇಷ್ಠ ಆಟಗಾರ' ಎಂದು ಗೌರವಿಸಿತು. ಈಗ ಮೆಸ್ಸಿ ಬಾರ್ಸಿಲೋನಾ ಕ್ಲಬ್ ಪರವಾಗಿ ಅತಿಹೆಚ್ಚು ಗೋಲ್ ಪಡೆದಿರುವ ಆಟಗಾರನಾಗಿದ್ದಾನೆ.

ತನ್ನ ಕಷ್ಟದ ಕಾಲದಲ್ಲಿ ತನಗೆ ನೆರವು ಒದಗಿಸಿದ ಬಾರ್ಸಿಲೋನಾ ಕ್ಲಬ್‌ಗೆ ಮೆಸ್ಸಿ ಕೃತಜ್ಞ. ಆದ್ದರಿಂದಲೇ ಆತ ಆ ಕ್ಲಬ್ ತೊರೆದು ಬೇರೆ ಕ್ಲಬ್‌ಗೆ ತನ್ನನ್ನು ಹೆಚ್ಚು ಬೆಲೆಗೆ ಮಾರಿಕೊಂಡಿಲ್ಲ. ಆದರೆ ಆತ ತನ್ನ ಮೂಲ ದೇಶ ಅರ್ಜೆಂಟೀನಾ ಎಂಬುದನ್ನು ಮರೆತಿಲ್ಲ. ಸ್ಪೇನ್ ದೇಶದ ಪೌರತ್ವವನ್ನು ಪಡೆದ ಈತ ನಂತರ ತನ್ನ ದೇಶದ ಪರವಾಗಿ ವಿಶ್ವಕಪ್ ಪಂದ್ಯದಲ್ಲಿ ಆಡಬೇಕೆಂದು ಅವನನ್ನು ಸ್ಪೇನ್ ಕೋರಿತು. ಆಗ ಆತನಿಗೆ ಅರ್ಜೆಂಟೀನಾ ದೇಶದ ಪರವಾಗಿ ಆಡಲು ಯಾವುದೇ ಆಹ್ವಾನವೂ ಬಂದಿರಲಿಲ್ಲ. ಆದರೂ ಅಂತಹ ಆಹ್ವಾನಕ್ಕಾಗಿ ಕಾಯಲು ನಿರ್ಧರಿಸಿದ ಮೆಸ್ಸಿ ಸ್ಪೇನ್ ದೇಶದ ಕೋರಿಕೆಯನ್ನು ತಿರಸ್ಕರಿಸಿದ. ಇದಾದ ಒಂದು ವರ್ಷದ ನಂತರ ಅರ್ಜೆಂಟೀನಾ ಅವನನ್ನು ಆಹ್ವಾನಿಸಿದಾಗ ಮೆಸ್ಸಿ ಹೆಮ್ಮೆಯಿಂದಲೇ ಆ ದೇಶದ ನೀಲಿ ಮತ್ತು ಬಿಳಿ ಪಟ್ಟಿಯ ಟಿ-ಶರ್ಟ್ ಧರಿಸಿದ.

ಕಳೆದ ಒಂದು ದಶಕದಲ್ಲಿ ಮೆಸ್ಸಿ ಹಲವಾರು ಯಶಸ್ಸುಗಳನ್ನು ಕಂಡಿದ್ದಾನೆ. ಅದರ ಜೊತೆಜೊತೆಗೆ ಹಲವಾರು ಬಾರಿ ಗಾಯಗೊಂಡು ತಿಂಗಳಾನುಗಟ್ಟಲೆ ಫುಟ್‌ಬಾಲ್ ಆಟದಿಂದಲೇ ದೂರ ಉಳಿದಿದ್ದಾನೆ. ಆದರೆ ಪ್ರತಿಬಾರಿ ಆತ ಹಿಂದಿಗಿಂತಲೂ ಉತ್ತಮ ಆಟಗಾರನಾಗಿ ಮೈದಾನಕ್ಕೆ ವಾಪಸ್ ಬಂದಿದ್ದಾನೆ.

ಬಾಲಕನಾಗಿದ್ದಾಗ ಉಂಟಾಗಿದ್ದ ಹಾರ್ಮೋನ್ ಕೊರತೆಗೆ ಚಿಕಿತ್ಸೆ ಸಿಕ್ಕಿತಾದರೂ ಮೆಸ್ಸಿ ಈಗಲೂ ಇತರೆ ಫುಟ್‌ಬಾಲ್ ಆಟಗಾರರಿಗಿಂತ ಸ್ವಲ್ಪ ಕುಳ್ಳ. (ಆತನ ಎತ್ತರ ಐದು ಅಡಿ ಏಳು ಇಂಚುಗಳು ಮಾತ್ರ.) ಆದರೆ ಅದೇ ಈಗ ಆತನ ಆಟಕ್ಕೆ ನೆರವಾಗಿದೆ. ಯಾಕೆಂದರೆ ಹೆಚ್ಚು ಎತ್ತರವಿಲ್ಲದ ಮೆಸ್ಸಿ ಶೀಘ್ರಗತಿಯಲ್ಲಿ ಬಾಲ್‌ಅನ್ನು ಸುತ್ತುವರಿಯುತ್ತಾನೆ. ಆಟದ ಸಮಯದಲ್ಲಿ ಬಾಲ್ ಮೇಲೆ ಮೆಸ್ಸಿಗೆ ಅದೆಷ್ಟು ನಿಯಂತ್ರಣ ಇರುತ್ತದೆಂದರೆ ಆತನ ವಿರೋಧಿಗಳೂ "ಒಮ್ಮೆ ಮೆಸ್ಸಿ ವಶಕ್ಕೆ ಬಾಲ್ ಹೋಯಿತೆಂದರೆ ಆತನನ್ನು ತಡೆಯುವುದೇ ಕಷ್ಟ" ಎಂದು ಒಪ್ಪಿಕೊಳ್ಳುತ್ತಾರೆ.

ಎಲ್ಲರಿಗೂ ಗೊತ್ತಿರುವಂತೆ ಅರ್ಜೆಂಟೀನಾದ ಖ್ಯಾತ ಫುಟ್‌ಬಾಲ್ ಕ್ರೀಡಾ ಪಟು ಮರಡೋನ. ಮೆಸ್ಸಿ ಮತ್ತು ಮರಡೋನ ನಡುವೆ ಹಲವಾರು ಸಾಮ್ಯತೆಗಳಿವೆ. ದೈಹಿಕವಾಗಿ ಇಬ್ಬರೂ ಸ್ವಲ್ಪ ಕುಳ್ಳ, ಇಬ್ಬರೂ ಎಡಗಾಲಿಗರು, ಆಟದ ಶೈಲಿಯೂ ಒಂದೇ ತರಹದ್ದು. ಈ ಕಾರಣಗಳಿಗೆ ಕೆಲವು ಮಾಧ್ಯಮಗಳು ಮೆಸ್ಸಿಗೆ 'ಮೆಸ್ಸಿಡೋನ' ಎಂದು ಹೆಸರಿಟ್ಟಿವೆ. ಮರಡೋನ ಕೂಡ ಪ್ರಥಮ ಬಾರಿಗೆ ಮೆಸ್ಸಿ ಆಟವನ್ನು ನೋಡಿದಾಗ "ಅರ್ಜೆಂಟೀನಾ ಫುಟ್‌ಬಾಲ್ ತಂಡದಲ್ಲಿ ಇಂದು ನಾನು ನನ್ನ ಉತ್ತರಾಧಿಕಾರಿಯನ್ನು ಕಂಡೆ" ಎಂದು ಘೋಷಿಸಿದ್ದ!

ಮೆಸ್ಸಿಗೆ ಹತ್ತೊಂಬತ್ತು ವರ್ಷ ವಯಸ್ಸಾಗಿದ್ದಾಗಲೇ ಆತ ಪ್ರಥಮಬಾರಿಗೆ ಅರ್ಜೆಂಟೀನಾ ಪರವಾಗಿ 2006ರಲ್ಲಿ ನಡೆದ ವಿಶ್ವಕಪ್ ಫುಟ್‌ಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಿ ಒಂದು ಗೋಲನ್ನೂ ಹೊಡೆದಿದ್ದ. 2010ರ ಸ್ಪರ್ಧೆಯಲ್ಲೂ ಭಾಗವಹಿಸಿದ್ದ ಮೆಸ್ಸಿ ಆ ವರ್ಷ ಒಂದೇ ಒಂದು ಗೋಲನ್ನು ಹೊಡೆದಿರಲಿಲ್ಲವಾದರೂ ತನ್ನ ತಂಡ ಬಾರಿಸಿದ ಎಲ್ಲ ಗೋಲ್‌ಗಳಲ್ಲೂ ಮುಖ್ಯ ಪಾತ್ರ ವಹಿಸಿದ್ದ.

ಈಗ ನಡೆಯುತ್ತಿರುವ ವಿಶ್ವಕಪ್ ಪಂದ್ಯಗಳಲ್ಲಿ ಮೆಸ್ಸಿ ಮೂರನೆ ಬಾರಿಗೆ ಭಾಗವಹಿಸುತ್ತಿದ್ದಾನೆ. ಅದೂ ಅರ್ಜೆಂಟೀನಾ ತಂಡದ ಕಡುವೈರಿ ದೇಶವಾದ ಬ್ರೆಜಿಲ್‌ನಲ್ಲಿ. ಇಲ್ಲಿಯತನಕ ಬ್ರೆಜಿಲ್ ಮತ್ತು ಅರ್ಜೆಂಟೀನಾ ಪರಸ್ಪರ ಎದುರಾಗಿಲ್ಲ, ಸೆಮಿಫೈನಲ್ ಅಥವಾ ಫೈನಲ್ ಪಂದ್ಯದಲ್ಲಿ ಇವೆರಡೂ ತಂಡಗಳು ಎದುರಾಗುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ಅಂತಹದೊಂದು ಪಂದ್ಯ ಏರ್ಪಟ್ಟರೆ ಮೆಸ್ಸಿಗೆ ದೊಡ್ಡ ಪರೀಕ್ಷೆ ಕಾದಿದೆ. ಇವತ್ತು ಮೆಸ್ಸಿಯೇ ಅರ್ಜೆಂಟೀನಾ ತಂಡದ ಮುಖ್ಯ ಆಟಗಾರನಾಗಿದ್ದಾನೆ. ಆತನ ಆಟದ ಶ್ರೇಷ್ಠತೆಯನ್ನು ಅರಿತಿರುವ ಬ್ರೆಜಿಲ್ ಫುಟ್‌ಬಾಲ್ ಅಭಿಮಾನಿಗಳು ಆತ ಮೈದಾನಕ್ಕೆ ಕಾಲಿಡುತ್ತಿದ್ದಂತೆ ಚೀರಾಟ ಪ್ರಾರಂಭಿಸುತ್ತಾರೆ, ನಿಂದಿಸುತ್ತಾರೆ, ಆತನ ಏಕಾಗ್ರತೆಯನ್ನು ಕದಡಲು ಎಲ್ಲ ತರಹದ ಪ್ರಯತ್ನಗಳನ್ನು ಮಾಡುತ್ತಾರೆ. ಅವೆಲ್ಲವನ್ನು ಎದುರಿಸಿ, ಅರ್ಜೆಂಟೀನಾ ತಂಡದಷ್ಟೇ ಬಲಶಾಲಿ ಯಾಗಿರುವ ಬ್ರೆಜಿಲ್ ತಂಡವನ್ನು ಸೋಲಿಸಬೇಕೆಂದರೆ ಮೆಸ್ಸಿ ತನ್ನ ಜೀವಿತದಲ್ಲೇ ಅತಿ ಶ್ರೇಷ್ಠ ಆಟವನ್ನು ಆಡಬೇಕಾಗುತ್ತದೆ.

ಆದರೆ ಮೆಸ್ಸಿ ಎಂತಹ ಮನುಷ್ಯನೆಂದರೆ ಆತನಿಗೆ ವೈಯಕ್ತಿಕವಾದ ಪ್ರತಿಷ್ಠೆ ಪ್ರಶಸ್ತಿ ಇತ್ಯಾದಿಗಳು ಮುಖ್ಯವಲ್ಲ. ಆತ ಹೇಳುತ್ತಾನೆ: "ನಾನು ಎಷ್ಟು ಗೋಲ್‌ಗಳನ್ನು ಹೊಡೆದೆ ಎನ್ನುವುದಕ್ಕಿಂತ ನನ್ನ ತಂಡಕ್ಕೆ ನಾನೆಷ್ಟು ನೆರವಾದೆ ಎಂಬುದೇ ನನಗೆ ಮುಖ್ಯ. ಫುಟ್‌ಬಾಲ್ ನನಗೆ ಪ್ರಿಯವಾದ ಆಟ ಹೌದು. ಅದಿಲ್ಲದಿದ್ದರೆ ನನ್ನ ಬದುಕು ಹೇಗಿರುತ್ತಿತ್ತು ಎಂದು ಊಹಿಸಿಕೊಳ್ಳುವುದೂ ನನಗೆ ಕಷ್ಟ. ಆದರೂ ಜನ ನನ್ನನ್ನು ಓರ್ವ ಫುಟ್‌ಬಾಲ್ ಆಟಗಾರನಾಗಲ್ಲದೆ ಓರ್ವ ಒಳ್ಳೆಯ ವ್ಯಕ್ತಿ ಎಂದು ನೆನಪಿಸಿಕೊಳ್ಳಬೇಕು ಎಂಬುದೇ ನನ್ನ ಬಯಕೆ."

ಈಗ 27 ವರ್ಷ ವಯಸ್ಸಾಗಿರುವ ಮೆಸ್ಸಿ ಇಂದು ಜಗತ್ತಿನ ಅತಿ ಶ್ರೀಮಂತ ಕ್ರೀಡಾಪಟುಗಳಲ್ಲಿ ಒಬ್ಬ. ಬಾರ್ಸಿಲೋನಾ ಕ್ಲಬ್ ಆತನಿಗೆ ಕೊಡುವ ವಾರ್ಷಿಕ ಪಗಾರವೇ 20 ಮಿಲಿಯನ್ ಡಾಲರ್‌ಗಳಿಗಿಂತಲೂ ಹೆಚ್ಚು. ಇನ್ನು ಜಾಹೀರಾತು, ಇತ್ಯಾದಿಗಳಿಂದಲೂ ಆದಾಯ ಇದ್ದೇ ಇರುತ್ತದೆ. ಇಷ್ಟೆಲ್ಲ ಇದ್ದರೂ ಮೆಸ್ಸಿ ತಲೆ ತಿರುಗಿಲ್ಲ. ಇವತ್ತಿಗೂ ಆತನ ಹತ್ತಿರದ ಸ್ನೇಹಿತರು ಆತನೊಂದಿಗೆ '87ರ ಮೆಷೀನ್' ತಂಡ ಎಂದು ಕರೆಸಿಕೊಂಡಿದ್ದ ಬಾಲ್ಯದ ಸ್ನೇಹಿತರೇ. ಅನಾರೋಗ್ಯ ಪೀಡಿತ ಮಕ್ಕಳಿಗೆ ನೆರವಾಗಲು ಮೆಸ್ಸಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಆರ್ಥಿಕ ನೆರವು ನೀಡುತ್ತಿದ್ದಾರೆ. ತನ್ನ ದೇಶ ಮತ್ತು ನಗರ ಮುಖ್ಯ ಎಂದು ನಂಬಿರುವ ಮೆಸ್ಸಿ ತಾನು ರೊಸಾರಿಯೋದಲ್ಲಿ ವಾಸವಿದ್ದ ಮನೆಯನ್ನೂ ಖರೀದಿಸಿದ್ದಾರೆ. ಸಾಧ್ಯವಾದಷ್ಟು ಸಮಯವನ್ನು ತನ್ನ ತಂದೆತಾಯಿ, ಒಡಹುಟ್ಟಿದವರು, ಗೆಳತಿ ಮತ್ತು ಆಕೆಗೆ ಹುಟ್ಟಿರುವ ತನ್ನ ಮಗನೊಂದಿಗೆ ಕಳೆಯುತ್ತಾರೆ. ಅವರ ಇಂತಹ ಗುಣಗಳಿಂದಾಗಿಯೇ ಇವತ್ತು ಅವರ ಅಭಿಮಾನಿಗಳಲ್ಲಿ ಪುಟ್ಟ ಮಕ್ಕಳೂ ಇದ್ದಾರೆ.

ಈ ಮೆಸ್ಸಿ ಬಗ್ಗೆ ಒಂದು ಕುತೂಹಲಕರ ವಿಷಯ ಹೇಳಿ ಇದನ್ನು ಮುಗಿಸುತ್ತೇನೆ. ಜಪಾನಿನಲ್ಲೂ ಈಗ ಫುಟ್‌ಬಾಲ್ ಜನಪ್ರಿಯ ಆಟವಾದ್ದರಿಂದ ಅಲ್ಲೂ ಮೆಸ್ಸಿ ಅಭಿಮಾನಿಗಳಿಗೆ ಬರವಿಲ್ಲ. ಎರಡು ವರ್ಷಗಳ ಹಿಂದೆ ಸುನಾಮಿಯೊಂದು ಜಪಾನನ್ನು ಅಪ್ಪಳಿಸಿದ್ದು ಎಲ್ಲರಿಗೂ ಗೊತ್ತು. ಆಗ ಸುನಾಮಿಯಿಂದ ನಿರಾಶ್ರಿತರಾದವರಿಗೆ ನೆರವಾಗಲು ಆಭರಣಕಾರನಾದ ಗಿಂಜಾ ಟನಾಕಾ ಎಂಬಾತ ಒಂದು ವಿಶಿಷ್ಟ ಯೋಜನೆಯನ್ನು ಹಮ್ಮಿಕೊಂಡ: ಅದೇನೆಂದರೆ ಮೆಸ್ಸಿಯ ಎಡ ಪಾದದ ಪಡಿಯಚ್ಚನ್ನು ಚಿನ್ನದಲ್ಲಿ ರೂಪಿಸಿ ಹರಾಜು ಹಾಕುವುದು. ಆ ಯೋಜನೆಗೆ ಮೆಸ್ಸಿ ಸ್ಪಂದಿಸಿ ತನ್ನ ಎಡ ಪಾದದ ಅಚ್ಚನ್ನು ಕೊಟ್ಟ.


25 ಕೆಜಿ ಚಿನ್ನದಲ್ಲಿ ಮೆಸ್ಸಿಯ ಪಾದದ ಪಡಿಯಚ್ಚನ್ನು ತಯಾರಿಸಲಾಯಿತು. ಅದು ಮಾರಾಟವಾಗಿದ್ದು ಎಷ್ಟು ಹಣಕ್ಕೆ ಗೊತ್ತಾ? 5.25 ಮಿಲಿಯನ್ ಡಾಲರ್‌ಗಳಿಗೆ!!





















ಅಡಿಕೆ ಬೆಳೆಗಾರರ "ರಕ್ಷಕ"ರಿಗಿದು ಗೊತ್ತಾ?

ಅಡಿಕೆ ಮಾನ ಒಂದೇ ಸಮನೆ ಏರುತ್ತಿದೆ. ಕಳೆದೆರಡು ತಿಂಗಳಿಂದ ದಿನ-ದಿನವೂ ಅಡಿಕೆ ತೇಜಿ.... ತೇಜಿ.... ತೇಜಿ!! ಇದು ಅಡಿಕೆ ಬೆಳೆಗಾರರಲ್ಲಿ ಆಶ್ಚರ್ಯ- ಆನಂದದ ಜೊತೆಗೆ ಆತಂಕವನ್ನು ಮೂಡಿಸಿಬಿಟ್ಟಿದೆ. ತೋಟಿಗರು ಕನಸು-ಮನಸಿನಲ್ಲೂ ಎಣಿಸದ ಬೆಲೆ ಈ ಸಲ ಬಂದಿದೆ. ಇದು ಸಹಜವಾಗೇ ಅತಂತ್ರ ಸ್ಥಿತಿಯಲ್ಲಿದ್ದ ಅಡಿಕೆ ಬೆಳೆಗಾರರಿಗೆ ಖುಷಿ ಪಡಿಸಿದೆ. ಆದರೆ ಈ ಬೆಲೆ ಏರಿಕೆ ಕೃತಿಮ ಎಂಬ ಅನುಮಾನವೂ ಅಮಾಯಕ ರೈತರನ್ನು ಕಾಡಲಾರಂಭಿಸಿದೆ. ಅಡಿಕೆ ಬೇಡಿಕೆಯಷ್ಟು ಬೆಳೆ ಭಾರತದಲ್ಲಿಲ್ಲ ಎಂಬ ಗುಲ್ಲೆಬ್ಬಿಸಿ ದೋನಂಬರ್ ದಂಧೆಗೆ ಕಾಳಸಂತೆಕೋರರು ಸ್ಕೆಚ್ ಹಾಕಿದ್ದಾರೆ. ಬೆಲೆಯೇರಿಕೆ ಭೂತ ರೈತರ ಭವಿಷ್ಯಕ್ಕೆ ಮಾರಕವಾಗಿದೆ.

ಕಳೆದ ಮಳೆಗಾಲದಲ್ಲಿ ರಾಜ್ಯದ ಅಡಿಕೆ ಬೆಳೆಯ ಎಲ್ಲ ಏರಿಯಾದಲ್ಲೂ ಕೊಳೆ ರೋಗ ದೊಡ್ಡ ಪ್ರಮಾಣದಲ್ಲಿ ಬಂದಿತ್ತು. ಹೀಗಾಗಿ ಉತ್ಪಾದನೆ ಕಡಿಮೆಯಾಗಿತ್ತು. ಈ ಖೋತಾ ಪರಿಸ್ಥಿತಿಯಲ್ಲಿ ಕೆಂಪಡಿಕೆ ಮತ್ತು ಬಿಳಿ ಚಾಲಿ ಅಡಿಕೆ ಬೆಲೆ ಒಂಥರಾ ಸ್ಥಿರತೆ ಕಂಡಿತು. ಹೊಸ ಬೆಳೆ ಬರುವ ನಾಲ್ಕು ತಿಂಗಳ ಮೊದಲೇ ಉತ್ಪಾದಕ ಪೇಟೆಯಿಂದ ಖಾಲಿಯೂ ಆಯ್ತು; ಇದ್ದೆಲ್ಲ ಅಡಿಕೆ ವ್ಯಾಪಾರ ಸಂಗ್ರಾಹಕರ ಗೋದಾಮು ಸೇರಿ ಬಳಕೆದಾರನಿಗೆ ಕೈಗೆಟುಕದಂತಾಗಿದೆ.

ಚಾಲಿ ಅಡಿಕೆ ಮಾರ್ಕೆಟ್‌ನಲ್ಲಿ ಸಾಕಷ್ಟಿದೆ. ಹಾಗಂತ ಕೆಂಪಡಿಕೆಯಿಲ್ಲ, ಎರಡು ವಾರದಿಂದ ಅಡಿಕೆ ಆವಕ ಇದ್ದರೂ ಬೆಲೆ ಮಾತ್ರ ಅಕಾರಣವಾಗಿ ನಾಗಾಲೋಟದಲ್ಲಿ ಹೆಚ್ಚುತ್ತಿದೆ. ಹಿಂದಿನ ಎರಡು ವರ್ಷದಲ್ಲಿ ಚಾಲಿ ರೇಟು ಕ್ವಿಂಟಾಲಿಗೆ 15 ಸಾವಿರದ ಆಚೀಚೆ ಇದ್ದರೆ, ಕೆಂಪಡಿಕೆ ಬೆಲೆ 18 ಸಾವಿರದ ಸುತ್ತ ನಿಂತಿತ್ತು. ಆದರೆ ಈ ವರ್ಷ ಕೆಂಪಡಿಕೆ ಬರೋಬ್ಬರಿ ಅರ್ಧ ಲಕ್ಷ ಪ್ರತಿ ಕ್ವಿಂಟಾಲಿಗೆ ತೂಗುತ್ತಿದೆ; ಬಿಳಿ ಚಾಲಿ 33 ಸಾವಿರ ಅಭೂತಪೂರ್ವ ಮಾನ ಕಂಡಿದೆ.

ಯುಪಿಎ ಸರ್ಕಾರ ಅಡಿಕೆ ನಿಷೇಧಿತ ಆಹಾರ ವಸ್ತು ಪಟ್ಟಿಯಲ್ಲಿ ಸೇರಿಸಿದೆ ಎಂದು ಸುಳ್ಳು ಗುಲ್ಲೆಬ್ಬಿಸಿ ರಾಜಕೀಯ ಲಾಭ ಮಾಡಿಕೊಂಡ ಬಿಜೆಪಿಯ ಶೋಕಾಲ್ಡ್ ಅಡಿಕೆ ಬೆಳೆಗಾರರ ಹಿತರಕ್ಷಕರೂ ನಿರಾಕರಿಸದ ದೊಡ್ಡ ಅನುಕೂಲ ಒಂದೆರಡು ವರ್ಷದಲ್ಲಿ ಅಡಿಕೆ ಬೆಳೆಗಾರರಿಗಾಗಿದೆ. ಯುಪಿಎ ಸರ್ಕಾರ ಕಳ್ಳ ಅಡಿಕೆ ಆಯಾತ ಆಗದಂತೆ ಕಟ್ಟುನಿಟ್ಟಾಗಿ ವಾಣಿಜ್ಯ ನೀತಿ ರೂಪಿಸಿದ್ದರಿಂದ ದೇಶಿಯ ಅಡಿಕೆ ಮಾರು ಕಟ್ಟೆಯಲ್ಲಿ ಬೆಲೆ ಸ್ಥಿರತೆ ಕಂಡಿತು. ಕಳ್ಳ ಸಾಗಾಣಿಕೆ ದಾರರು ಕೋಲ್ಕತ್ತಾ ಬಂದರಿನಲ್ಲಿ ತೆರಿಗೆ ತಪ್ಪಿಸಿ ಆಮದು ಮಾಡಿಕೊಂಡಿದ್ದ ಹಡಗುಗಟ್ಟಲೆ ಅಡಿಕೆಯನ್ನೂ ಜಪ್ತು ಮಾಡಿಕೊಂಡಿತ್ತು ಹಿಂದಿನ ಕೇಂದ್ರ ಸರ್ಕಾರ. ಅಲ್ಲದೆ ಕಳ್ಳಸಂತೆಕೋರರನ್ನು ಜೈಲಿಗೂ ಹಾಕಿತ್ತು. ಇದರಿಂದ ದೋನಂಬರಿ ಅಡಿಕೆ ಆಯಾತಕ್ಕೆ ಶಾಶ್ವತ ತಡೆಬಿದ್ದಿತ್ತು. ಇದು ದಕ್ಷಿಣ ಭಾರತದ ಅಡಿಕೆ ಅವಲಂಬಿತ ಸಂಸಾರಗಳಲ್ಲಿ ನೆಮ್ಮದಿ ತಂದಿತ್ತು; ಅಡಿಕೆ ಬೆಲೆಗೊಂದು ಸ್ಥಿರತೆ ಬಂದಿತ್ತು.

ಆಮದು ನೀತಿಯಲ್ಲಿ ಬಿಗುವಿಲ್ಲದಿದ್ದಾಗ ಅಡಿಕೆ ಬೆಳೆಗಾರ ಅತಂತ್ರನಾಗಿ ಒದ್ದಾಡುವುದು ಸಾಮಾನ್ಯವಾಗಿತ್ತು. ಕಾಳಸಂತೆಕೋರರ ಕರಾಮತ್ತಿಗೆ ಬಲಿಯಾಗಿ ಅನೇಕ ಸಲ ನಿಕೃಷ್ಟ ಬೆಲೆಗೆ ಅಡಿಕೆ ಮಾರಿಕೊಳ್ಳಬೇಕಾಗಿತ್ತು. ಕಷ್ಟ-ನಷ್ಟದ ಜೀವನ ತೋಟಗರದಾಗಿತ್ತು. ವರ್ಷವಿಡೀ ಜತನದಿಂದ ಬೆಳೆದ ಬೆಳೆಗೆ ಸರಿಯಾದ ಬೆಲೆಯೇ ಸಿಗುತ್ತಿರಲಿಲ್ಲ. ಈ ದುರಂತ ಸ್ಥಿತಿಯ ಕರಿ ನೆರಳ ನೆನಪಲ್ಲಿ ಈಗಿನ ವಿಪರೀತ ಬೆಲೆ ಏರಿಕೆ ವಿಶ್ಲೇಷಿಸಬೇಕಾಗಿದೆ. ಅಡಿಕೆ ಮಾರ್ಕೆಟ್‌ನಲ್ಲಿ ಆಗುತ್ತಿರುವ ವಿಪ್ಲವ ಸೂಕ್ಷ್ಮವಾಗಿ ಗಮನಿಸಿದರೆ, ಇದರಲ್ಲಿ ಕಾಳಸಂತೆಕೋರರ ಮಸಲತ್ತು ಅಡಗಿರುವುದು ಅರ್ಥವಾಗುತ್ತದೆ.

ಅಡಿಕೆ ಬೆಳೆ ಉತ್ಪಾದನೆಯಲ್ಲಿ ಕಡಿಮೆ ಆಗಿರುವುದರಿಂದಲೇ ಬೆಲೆ ಭರ್ಜರಿ ಏರಿದೆ; ಅಡಿಕೆ ದಾಸ್ತಾನು ಕಡಿಮೆಯಿದೆ. ದಿನನಿತ್ಯದ ಬಳಕೆ ಬೇಕಾದಷ್ಟು ಸಿಗುತ್ತಿಲ್ಲ-ಎಂದೆಲ್ಲ ಹುಯಿಲೆಬ್ಬಿಸಿ ತಮ್ಮ ದೋಖಾ ದಂಧೆಗೆ ಕೇಂದ್ರ ಸರ್ಕಾರದಿಂದ ಮತ್ತೆ ಪರವಾನಗಿ ಪಡೆಯುವ ಸಂಚು ಕಳ್ಳ ವ್ಯಾಪಾರಿಗಳು ಹೆಣೆದಿದ್ದಾರೆ. ಈಗಿರುವ ಆಯಾತ ನಿರ್ಬಂಧ ಸಡಿಲಿಸಿಕೊಂಡು, ಆಯಾತ ಭರಪೂರ ಮಾಡಿಕೊಳ್ಳುವ ಕುತಂತ್ರವಿದು. ಕಡಿಮೆ ದರದಲ್ಲಿ ಅಡಿಕೆ ಬಳಕೆದಾರರಿಗೆ ಪೂರೈಸಲು ಆಮದು ಅನಿವಾರ್ಯವೆಂದು ಕೇಂದ್ರ ವಾಣಿಜ್ಯ ಇಲಾಖೆಗೆ ಯಾಮಾರಿಸಲು ಹೀಗೆ ಕೃತಕವಾಗಿ ಅಭಾವ-ವಿಪರೀತ ಬೆಲೆ ಹೆಚ್ಚಳದ ಆಟ ನಡೆಸಲಾಗಿದೆ. ಆನಂತರ ಬಳಕೆದಾರನ ಕೊಳ್ಳುವ ಸಾಮರ್ಥ್ಯಕ್ಕೆ ದರ ಹೊಂದಿಸಲು ಆಯಾತ ತೆರಿಗೆ ಕಡಿತ ಗೊಳಿಸುವಂತೆ ಕೇಂದ್ರ ಸರ್ಕಾರದ ಮೇಲೆ ಕಳ್ಳರ ಲಾಬಿ ಒತ್ತಡ ತರುತ್ತದೆ. ಅಲ್ಲಿಗೆ ಜೀವನಾಧಾರ ಅಡಿಕೆ ಬೆಳೆ ಉಪಕಸುಬಿನ ತೋಟಿಗರ ಬದುಕಿನ ಬೆಂಕಿ ಇಕ್ಕಿದಂತಾಗುತ್ತದೆ!!


ಆಗ ಮತ್ತೆ ಅಡಿಕೆ ದರ ಬಿದ್ದು ಹೋಗುತ್ತದೆ. ಪ್ರತಿ ಕ್ವಿಂಟಾಲಿಗೆ 8-10 ಸಾವಿರ ರೂ.ಗೆ ಬೆಲೆ ಸ್ಥಿರವಾಗುತ್ತದೆ. ಕಳ್ಳ ವ್ಯಾಪಾರಿಗಳು ಕೇಳಿದಷ್ಟು ರೇಟಿಗೆ ಮಹಸೂಲು ಬಿಕರಿ ಮಾಡುವ ದುಸ್ಕಾಲ ಬರುತ್ತದೆ. ಹಾಗಾಗದಂತೆ ತಡೆಯುವ ಹೊಣೆಗಾರಿಕೆ ಇರುವುದು ಇಷ್ಟು ದಿನ ತಾವು ಮಾತ್ರ ಅಡಿಕೆ ಬೆಳೆಗಾರರ ಹಿತರಕ್ಷಣೆಯ ಪೋಸು ಕೊಟ್ಟು ದುರ್ಲಾಭ ಪಡೆದಿರುವ ಕೇಂದ್ರದ ಆಳುವ ಬಿಜೆಪಿಯ ಖೂಳ ಎಂಪಿ-ಎಮ್ಮೆಲ್ಲೆ-ಮಂತ್ರಿಗಳ ಮೇಲೆ. ಅಡಿಕೆ-ಬೆಳೆಗಾರರ ಪ್ರದೇಶದ ಸಂಸದರಾದ ಮಂತ್ರಿ ಸದಾನಂದ ಗೌಡ, ಸಿದ್ದೇಶ್, ಅನಂತಕುಮಾರ್ ಹೆಗಡೆ, ಶೋಭಾ ಕರಂದ್ಲಾಜೆ, ನಳಿನ್‌ಕುಮಾರ್ ಕಟೀಲ್ ಒಂದೆಡೆ ಕುಳಿತು ಕಾಳಸಂತೆಕೋರರು ಹೂಡಿರುವ ಹುನ್ನಾರ ವಿಫಲ ಮಾಡಲು ಪ್ಲಾನ್ ಹಾಕಬೇಕಿದೆ. ಕೇಂದ್ರ ಸರ್ಕಾರದ ಮಟ್ಟದಲ್ಲಿ ದೋಖಾ ದಂಧೆದಾರರ ಒತ್ತಡ-ಮಸಲತ್ತು ನಡೆಯದಂತೆ ನೋಡಿಕೊಳ್ಳಬೇಕಿದೆ; ಅಡಿಕೆ-ಬೆಳೆಗಾರರು ಸಾರಾಸಗಟಾಗಿ ತಮಗೆ ಮತಹಾಕಿ ಸಂಸದ-ಮಂತ್ರಿ ಮಾಡಿರುವ ಋಣ ತೀರಿಸಬೇಕಿದೆ. ಇದು ಬಿಜೆಪಿ ಮಂತ್ರಿ-ಸಂಸದ-ಶಾಸಕರ ಸತ್ವ ಪರೀಕ್ಷೆಯ ಕಾಲ!

ಹಾಗೆಯೇ ಸಂಘ ಪರಿವಾರದ ಸರದಾರ ಕಂಕೋ[ಡಿ] ಪದ್ಮನಾಭನೆಂಬ "ಕ್ಯಾಂಪ್ಕೋ" ಅಧ್ಯಕ್ಷನಿಗೂ ಅಡಿಕೆ-ಬೆಳೆಗಾ[ರರ] ಕಾಪಾಡುವ ದೊಡ್ಡ ಜವಾಬ್ದಾರಿ ಇದೆ. ಈತ ಇಲೆಕ್ಷ[ನ್] ಹೊತ್ತಲ್ಲಿ ಅಡಿಕೆ-ಬೆಳೆಗಾರ ಕಷ್ಟಕ್ಕೆಲ್ಲ ಯುಪಿಎ ಸರ್ಕಾರ[ವೇ] ಕಾರಣವೆಂದು ಸುಳ್ಳುಗಳನ್ನು ಪುಂಖಾನು-ಪುಂಖವಾ[ಗಿ] ಬೊಗಳಿದಾತ. ಈತನ ಯಜಮಾನಿಕೆಯಲ್ಲಿರುವ ಪುತ್ತೂ[ರು] ಕೇಂದ್ರಿತ ಕ್ಯಾಂಪ್ಕೋ ಇವತ್ತು ಅಡಿಕೆ ಪೇಟೆಯಲ್ಲಿರು[ವ] ಕೃತ್ರಿಮ ಬೆಲೆ ಏರಿಕೆ ನಿಯಂತ್ರಿಸುವ ಕೆಲಸ ಮಾಡಬೇಕಿ[ದೆ]. ದೇಶದಾದ್ಯಂತ ಹಬ್ಬಿರುವ ಕ್ಯಾಂಪ್ಕೋದ 40 ಅಡಿಕೆ ಮಾರಾ[ಟ] ಮಳಿಗೆಗಳ ಮೂಲಕ ಬಳಕೆದಾರರಿಗೆ ನಿಗದಿತ ದರದ[ಲ್ಲಿ] ಅಡಿಕೆ ಪೂರೈಸಲು ಯೋಜನೆ ಹಾಕುವ ಜರೂರಿ[ದೆ]. ಹಾಗೆಯೇ ಅಡಿಕೆ ಖರೀದಿ-ವಿಕ್ರಿ ಮಾಡುವ ಬೇರೆ-ಬೇ[ರೆ] ಮಾರಾಟ ಸಹಕಾರಿ ಸಂಘಗಳನ್ನು ಜೊತೆ ಸೇರಿಸಿಕೊಂ[ಡು] ಸ್ಥಿರ ಬೆಲೆಗೆ ಪ್ರಯತ್ನಿಸಬೇಕಿದೆ.

ಒಂದಂತೂ ನಿಜ. ಅಡಿಕೆ ಬೆಳೆ ಪ್ರದೇಶದಲ್ಲಿ ಬ[...] ತರಗಲೆಯ ಚಾಲಿ ಅಡಿಕೆ ಸಾಕಷ್ಟಿವೆ. ಹೊಸ ಬ[ೆಳೆ] ಬರುವವರೆಗೆ ಬಳಕೆದಾರರಿಗೆ ಪೂರೈಸುವ ಮಟ್ಟಿಗಂ[ತೂ] ಭಾರತ ಅಡಿಕೆ-ಉತ್ಪಾದನೆಯಲ್ಲಿ ಸ್ವಾವಲಂಬಿ ಆಗಿದೆ. ತೆ[ರಿಗೆ] ತಪ್ಪಿಸಿ ಅಡಿಕೆ ದಾಸ್ತಾನು ಮಾಡುವ ದೆಹಲಿ, ಲಕ್[ನೋ], ಮುಂಬೈ, ಅಹಮದಾಬಾದ್, ನಾಗಪುರ... ಮುಂತಾದೆಡೆ[ಯ] ಕಳ್ಳರ ಗೋದಾಮುಗಳ ಮೇಲೆ ಆಯಾತಕರ ಅಧಿಕಾರಿ[ಗಳು] ಮತ್ತು ಆಯಾ ರಾಜ್ಯದ ಮಾರಾಟಕರ ಅಧಿಕಾರಿ[ಗಳು] ದಾಳಿ ಮಾಡಬೇಕಾಗಿದೆ. ಇದೆಲ್ಲ ಅಡಿಕೆ ಬೆಳೆಗಾರ ಗು[...] ಪಡೆದಂತೆ ಹಾರಾಡುವ ಸದಾನಂದ ಗೌಡ, ಅನಂತ[...] ಶೋಭಕ್ಕ, ಸಿದ್ದೇಶ್‌ನಂಥವರ ಖಾಲಿ ಬುರು[ಡೆಗೆ] ಹೊಳೆದೀತಾ?

ಅಡಿಕೆ ಬೆಳೆಗಾರರ ಭವಿಷ್ಯ ಬಿಜೆಪಿ ಸರ್ಕಾರದ ಬೊ[...] ಭೂಪರ ಕೈಲಿದೆ!!

● ನಹು[...]



ಮುಟ್ಟಿನ ಪಾಠ

ಡೊಮಿನಿಕ್ ಕ್ರಿಸ್ಟೀನ ಅಮೆರಿಕಾದ ಶಿಕ್ಷಕಿ, ಕವಿ, ಹೋರಾಟಗಾರ್ತಿ. ಕಪ್ಪು ಜನರ ನಾಗರಿಕ ಹಕ್ಕಿಗಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿದ್ದ ಕುಟುಂಬದಿಂದ ಬಂದ ಕ್ರಿಸ್ಟೀನ ತನ್ನ ವಿಚಾರಗಳಲ್ಲೂ, ಮಾತಿನಲ್ಲೂ ದಿಟ್ಟೆ. 'ಸಾಭಿನಯ ಕಾವ್ಯವಾಚನ' (Performance Poetry) ಕಲೆಯಲ್ಲಿ ನುರಿತರಾಗಿರುವ ಅವರ ಕಾವ್ಯ ವಾಚನ ಕಾರ್ಯಕ್ರಮಗಳು ಜನಪ್ರಿಯ. ತಮ್ಮ 13 ವರ್ಷದ ಮಗಳು ಋತುಮತಿಯಾದಾಗ, ಆಗಬಾರದ್ದುಆದ ಮುಜುಗರದಲ್ಲಿ ಬಚ್ಚಲ ಕಡೆ ನಡೆದದ್ದನ್ನು ಕಂಡು ಅಮ್ಮ ಕ್ರಿಸ್ಟೀನಾಳ ಕರುಳು ಚುರ್ ಅಂದಿತು. ಮಗಳಿಗೆ, ಇದು ದೇಹ ಸಹಜವಾದದ್ದು, ಇಂಥದ್ದರ ಬಗ್ಗೆ ತಲೆ ತಗ್ಗಿಸದೇ ಮಹಿಳೆಯ ಸ್ವಾಭಿಮಾನದ ದಿಟ್ಟತೆಯಲ್ಲಿ ನಿಭಾಯಿಸಿಕೊಳ್ಳಲು ಕಲಿಸಬೇಕು ಅನಿಸಿತು. ಆ ಇರಾದೆಯಿಂದ ಮಗಳು ಋತುಮತಿಯಾದ ಸಂಭ್ರಮಾಚರಣೆ ಏರ್ಪಡಿಸಿದರು, ಮನೆಯನ್ನೆಲ್ಲ ಕೆಂಪು ರಂಗಿನಲ್ಲಿ ಸಿಂಗರಿಸಿ, ಮುಟ್ಟಿನ ಬಗೆಗೆ ಮಗಳಲ್ಲಿ ವಿಶ್ವಾಸ ಹುಟ್ಟಿಸಿದರು. ಇಷ್ಟಾಗಿ, ಕ್ರಿಸ್ಟೀನ ಕಾರ್ಯಕ್ರಮವೊಂದಕ್ಕೆ ಪರ ಊರಿಗೆ ಹೋಗಿದ್ದಾಗ, ಮಗಳು ಅವರಿಗೆ ಮೇಲ್‌ನಲ್ಲಿ ಮುಟ್ಟಿನ ಕುರಿತು ಕೆಟ್ಟ ಧೋರಣೆಯ ಟ್ವೀಟ ಸಾಮಾಜಿಕ ತಾಣದ ಪೋಸ್ಟಿಂಗ್ ಒಂದನ್ನು ಕಳಿಸಿದಳು. ಅದನ್ನೋದಿ, ಕ್ರಿಸ್ಟೀನಾಗೆ ಉರಿದುಹೋಯಿತು: ತಾನು ಮಗಳಲ್ಲಿ ತುಂಬಿದ ಆತ್ಮವಿಶ್ವಾಸವನ್ನು ಈ ಬೇನಾಮಿ ಟ್ವೀಟ್ ಬುಡಮೇಲು ಮಾಡಿದ್ದನ್ನು ಕಂಡು ರೇಗಿತು. ಆ ಸಂದರ್ಭ ಬರೆದ ಪದ್ಯವಿದು.

ಟ್ವೀಟರ್‌ನಲ್ಲಿ ಪಡ್ಡೆ ಹೇಳುತ್ತೆ: "ನನ್ನ ಹುಡುಗಿಯನ್ನ ಸಂಭೋಗಿಸೋ ಹೊತ್ಗೇ ಅವ್ಳು ಮುಟ್ಟಾದ್ಲು, ಆ ಸೂಳೇನ ಅಲ್ಲೇ ಬಿಟ್ಟೆದ್ದೆ."

ಲೇ! ಬೇನಾಮಿ ಟ್ವೀಟರ್: ನನ್ನ ಮಗ್ಳು ಮುಟ್ಟಾದಾಗ ಸತ್ತೋದಂಗೆ ಕಣ್ಣೀರು ಹಾಕಿದ್ದಕ್ಕೆ ನೀನೇ ಕಾರಣ ಕಣಲೇ. ಪುಟ್ಟ ಹುಡುಗಿರೆಲ್ಲಾ ಹೈಸ್ಕೂಲ್ ಕಟ್ಟೆ ಇಳಿಯೋ ಹೊತ್ಗೆ ಸಹಜವಾಗಿ ಎದೆಕೊಡೋ ಸಂಗತಿಗೆ ಒಮ್ಮೆಲೇ ಎದೆಕುಸಿಯೋಂಗೆ ಮಾಡೋದು ನಿನ್ನಂಥೋರ ಹೇವರಿಕೆ ಕಣೋ. ಇಲ್ಲಿಂದ ಶುರುವಾಗುತ್ತೆ ಕಣ್ಲಾ ಮಹಿಳಾವಾದದ ಕೆಚ್ಚಿಂದ ಕೂಡಿದ ಅಂಗರಚನೆಯ ಪಾಠ, ಏ! ದ್ರಾಬೆ.

ಗರ್ಭ ಅಂತೊಂದು ಇರುತ್ತೆ, ಅದು 28 ದಿನಕ್ಕೊಮ್ಮೆ ರಕ್ತ ಸುರಿಸುತ್ತೆ, ನಾನು ವಾಳ್ಗೆ ಉಗಿದೋಳಾದ್ರಿಂದ ನಂಗೆ 23ನೇ ದಿನಕ್ಕೆ ಸುರಿಯುತ್ತೆ ಇದು ದೇಹರಚನೆಯ ಪಾಠದ ಭಾಗ ಕಣ್ಲಾ, ಈಗ ಮುಂದೆ ಹೋಗಾಣ.

ಈಗ ಮಹಿಳಾವಾದ ಪಾಠಕ್ಕೆ, ಬಾ ಕಣ್ಲಾ, ಹೆಂಗಸಿಗೆ ಬಿಟ್ಟುಕೊಡೋದು ಹ್ಯಾಗೆ ಅಂತ ಗೊತ್ತು, ಸಾಯುತ್ತಿರೋದನ್ನು ಕಳ್ಕೋದು ಹ್ಯಾಗೆ ಅಂತ ಗೊತ್ತು, ಹೊಸದಾಗೋದು ಗೊತ್ತು ಮತ್ತೇ ಹುಟ್ಟೋದು ಗೊತ್ತು, ಚಂದ್ರನ ಹಾಗೆ ಅಲೆಯುಬ್ಬರಗಳ ಹಾಗೆ ಏರಿ ಇಳಿಯೋದೂ ಗೊತ್ತು, ಇದೆಲ್ಲಾ ನಿನ್ನ ತೆವಲಿಗೆ ಕುಮ್ಮಕ್ಕು ಕಣ್ಲೇ, ಈಗ ಒಂಚೂರು ಬೇರೆ ಮಾತಾಡೋಣ.

ಹೆಣ್ಣಿಗೆ ಯೋನಿ ಇದೆ, ನಮ್ಮೊಳಗೇ ನಾವು ಮಾತಾಡಿಕೊಳ್ಳುವ ಅಂಗವದು, ಅರ್ಥಾತ್ ಗೆಳತಿಯರು, ಅಕ್ಕತಂಗಿಯರು, ಅಮ್ಮಂದಿರ ಜೊತೆಗೂಡಿದಾಗ ನಮ್ಮ ಋತುಸ್ರಾವ ಚಕ್ರದಲ್ಲೇ ನಾವು ಸಂಭೋಗ ಸುಖಿಸಬಲ್ಲೆವು. ನನ್ನ ಯೋನಿಯಾಳದ ಕೊನೆಯಂತೂ ಚಂದುಳ್ಳಿ, ನನಗೆ ಪ್ರಿಯರಾದವರೆಲ್ಲಾ ನನ್ನೊಡನೆ ಸ್ರವಿಸುವರು. ಮುಚ್ಕೊಂಡು ಕೇಳು, ಇಲ್ಲೊಂದು ಪ್ರತಿಮೆ ಇದೆ.

ಮುಚ್ಕೊಂಡು ಕೇಳು. ನಿನ್ನ ಅಮ್ಮ ನಿನ್ನನ್ನು ಹೊಟ್ಟೇಲ್ಲಿ ಇಟ್ಕೊಂಡಿದ್ದಾಗ, ಅವಳ ಒಡಲ ಸಾಗರದಲ್ಲಿ ನೀನು ತೇಲುತ್ತಿದ್ದೆ ಕಣೋ, ಹಾಗಾಗಿ ನೀನಿವತ್ತು ಇದ್ದೀಯ. ಅವಳ ಗರ್ಭದ ಹಸಿ, ಸಮೋಷ್ಣಗಳನ್ನುಂಡು ಅವಳ ಗರ್ಭದಿಂದ ನೀನು ಹೊರಬಂದ ಗಳಿಗೆಯ ರುಚಿ ನಿನ್ನ ನಾಲಿಗೆಯಲ್ಲಿನ್ನೂ ಇದೆ. ಆ ದೇಹದ ಸಂಚಲನವನ್ನೇ ಸೋಷಿಯಲ್ ಮಿಡಿಯಾದಲ್ಲಿ ಹೀಗಳಿಯುತ್ತೀಯಾ? ಆ ದೇಹ, ಮಂತ್ರಸದೃಶವಾಗಿ ನಿನ್ನನ್ನು ಪೊರೆಯಿತು, ರಕ್ತಕಣದ ಜೀವಾಂಶಗಳ ನೇಯ್ದು ಲಾಲಿ ಹಾಡಿತು, ಅಷ್ಟಿಲ್ಲದಿದ್ದರೆ ಇವತ್ತು ನಿನಗೆ ಟ್ವೀಟರ್ ಖಾತೆ ಕೂಡ ಇರುತ್ತಿರಲಿಲ್ಲ ಹಡಬೆ. ಬಾ ಮುಂದೆ ಹೋಗೋಣ.

ನೋಡಲೇ, ಮತ್ತೆ ಮತ್ತೆ ನಮ್ಮಲ್ಲಿ ಸ್ರವಿಸುವ ರಕ್ತದಿಂದಾಗಿ ನಮಗೆ ಈ ಜಗ ಚೆನ್ನಾಗಿ ಗೊತ್ತು, ನಮ್ಮ ಬಿಳಿ ಲಂಗಗಳನ್ನು ಅದು ಕಲೆ ಮಾಡುತ್ತದೆ, ಸಮಾರಂಭಗಳಲ್ಲಿ ಹೇಳದೆಕೇಳದೆ ಕಾಣಿಸಿಕೊಳ್ಳುತ್ತದೆ, ಮುಟ್ಟಿನ ನೆತ್ತರಿಗೆ ಆ ಗುಣವಿದೆ. ನಾವು ತಯಾರಿಲ್ಲದಾಗ ಅದು ಹರಿಯುತ್ತದೆ; ಮುಟ್ಟಿನ ನೆತ್ತರಿಗೆ ಆ ಚಾಳಿ ಇದೆ. ರಕ್ತ ಬಲು ದೊಡ್ಡ ಎಚ್ಚರಿಕೆಯ ಗಂಟೆ, ರಕ್ತ ಉಧಾಳ ನಮಗೆ ಗೊತ್ತು, ಅದು ಸೂಚನೆಗೆ ಕಾಯೋದಿಲ್ಲ 'ಸುಸ್ವಾಗತ' ಕೋರುವ ಕಮಾನಿನ ಹಂಗಿಲ್ಲ, ಹೀಗೆ ರಕ್ತದೊಡನೆ ಮತ್ತೆ ಮತ್ತೇ ಏಗುವ ನಮ್ಮನ್ನು ರಕ್ತ ಸಮರಧೀರೆಯನ್ನಾಗಿಸುತ್ತದೆ.

ಜಾಣ ದಂಡನಾಯಕರು ತಮ್ಮ ಸಮರಯೋಜನೆಗಳನ್ನು ಶತ್ರುಗಳಿಗೆ ಹೇಳೊದಿಲ್ಲ, ಇದು ನಿನಗೆ ಗೊತ್ತಿಲ್ಲ, ಹೆಸರು ಹೇಳಿಕೊಳ್ಳುವ ಎದೆಯಿಲ್ಲದ ಬೇನಾಮಿ ಟ್ವೀಟರ್, ಈ ಲೋಕದಲ್ಲಿ ಸಮತೋಲ ಎನ್ನುವುದೇನಾದರೂ ಇದ್ದಲ್ಲಿ ನೀನು ಮಗಳನ್ನೇ ಪಡೆಯುವೆ. ಇದು ಹರಕೆ.

ಪದೋತ್ಪತ್ತಿಯಲ್ಲಿ ಹರಕೆ ಅಂತ ಉತ್ಪತ್ತಿಯಾಗಿರೋ[ದು] ಹರಿ(ಸುರಿ) ಎಂಬ ಪದದಿಂದ. ನೋಡ್ದೆಯಾ ನಿಂಗೆ ನಾ[ನು] ಭಾಷಾಶಾಸ್ತ್ರವನ್ನೂ ಕಲಿಸುತ್ತಿರುವೆ. ಅರ್ಥಾತ್ ಹರಿಯ[ುವ] ರಕ್ತ ಮಾತಾಡಬಲ್ಲುದು, ಇದು ಪಾಠ ಕೇಳು. ಬೆಳದಿಂ[ಗಳ] ಚೆಲುವು ಮತ್ತು ಕರಾಳತೆಯಿಂದಾದ ಹೆಂಗಸರು ರ[ಕ್ತದ] ರುಚಿ ಏನು ಎನ್ನೋದನ್ನು ಎಲ್ಲಾ ಗಂಡಸರಿಗೂ ಅರಿಸು[ತ್ತಾರೆ] ಎಂಬ ಪಾಠವನ್ನು ನಿನ್ನ ಮಗಳು ನಿನಗೆ ಕಲಿಸುತ್[ತಾಳೆ]. ನೀವು ಹಾಸಿದ ಪ್ರತಿ ವಸ್ತ್ರಾಸನಗಳ ಮೇಲೆಲ್ಲಾ ನಾವು ಹರಿಸುತ್ತೇವೆ, ನಮಗದು ಅಸಾಧ್ಯವೇನಲ್ಲ, ನಮ್ಮೊಳಗಿನದ[ನ್ನು] ನಿನಗೆ ಪರಿಚಯಿಸುತ್ತೇವೆ, ಒಂದೊಂದು ಸಾರಿ ನ[...] ಎಚ್ಚರ ವಹಿಸದ ಹಾಗೆ ನೀನೂ ಎಚ್ಚರ ತಪ್ಪಿದವನಾ[ದರೆ] ನಿನ್ನನ್ನು ಮುಟ್ಟಿನ ರಕ್ತದಲ್ಲಿ ಮುಳುಗಿಸಿ, ಕಲೆ ತೊಳ[ೆದು] ಹೋಗದ ಹಾಗೆ ಮಾಡಿಬಿಡುತ್ತೇವೆ.

ಇಂತಿರುವಾಗ ನನ್ನ ಮಗಳೇ: ಯಾರಾದರೂ ನಿನ್ನ ದೇಹದ ಅಪೌರುಷೇಯ ಭೂಗೋಳವ[ನ್ನು] ಆಕ್ರಮಿಸಲು ಹವಣಿಸಿದರೆ, ತೋಳದ ಹಾಗೆ, ಮಾಟಗಾ[ತಿಯ] ಹಾಗೆ ರಕ್ತದ ಬುಗ್ಗೆ ಹರಿಸಿಬಿಡು. ಆ ರಕ್ತಕ್ಕೆ, ಅಭಿ[...] ಕಲ್ಲು, ಮಣ್ಣುಗಳಿಗೆ ಸಮನಾದ ಸ್ತೋತ್ರನಾಮದ, ಪ[...] ಮೊದಲ ಪ್ರತಿರೋಧದ, ಇಂದು ಮುಂಜಾವಷ್ಟೇ [...] ಯೋನಿಯನ್ನು ಹರಿದುಕೊಂಡ ದಮನಿತ ಹುಡುಗಿ[ಯ] ಹೆಸರನ್ನು ಹಚ್ಚು.

ರಕ್ತಕ್ಕೆ ಪವಿತ್ರವಾದ, ಅಜೇಯವಾದ, ಭಾಷೆಯ[ನ್ನು] ಮೀರಿದ, ಚಿತ್ರಕವಾದ, ಪ್ರಳಯಾಂತಕ ದನಿ ಇ[ರುವ] ಹೆಸರೊಂದನ್ನು ಕೊಡು. ನಿನ್ನ ತೊಡೆಗಳ ನಡುವಿನ ಸುವ[...] ಹೆಸರಿನ್ನಿಡು, ಯಾವ ಹೆಂಗಸೂ ಅಜ್ಞಾತವಾಗಿ ಹೋಗು[...] ಹೆಸರನ್ನು ಇಡು. ಏನಾದರೂ ಆಗಲಿ ರಕ್ತವನ್ನು ಸುರಿ[ಸು], ಎಲ್ಲಾ ಸಭ್ಯ ಕುರ್ಚಿ ಮೇಜುಗಳ ಮೇಲೆ ನಿನ್ನ ರಕ್ತ[...] ಹರಡು. ಸುರಿಸು, ಹರಿಸು, ಅವನು ಪ್ರೀತಿಸುವ ಎ[...] ಮೇಲೆ ನುಗ್ಗು, ಮುಟ್ಟಿನ ರಕ್ತವೇ.

ಅನುವಾದ: ಫೈಜೂಲ್ ರ[...]

ತ್ರದುರ್ಗ: ಮೋದಿಗೆ ಜೈ ಎಂದ ಬಿದ್ರಿ ಮತ್ತೆ ಬಿದ್ರೂರೀ...

ಮಾಜಿ ಪೊಲೀಸ್ ಅಧಿಕಾರಿ ಶಂಕರ್ ಬಿದರಿಯ
ಷ್ಕೆ ಇನ್ನೂ ತೆರೆಬಿದ್ದಂತೆ ಕಾಣುತ್ತಿಲ್ಲ. ಖಾಕಿ ಕಳಚಿಟ್ಟ
ಂದ ಇಲ್ಲಿಯವರೆಗೂ ಬಿದರಿ ಸಾಹೇಬರು
ಕಲ್ ಕಾರ್ಟೂನ್ ಆಗಿದ್ದು ಬಿಟ್ಟರೆ ಸಾಧನೆ ಅಂತ
ಮ್ಮ ಅಷ್ಟಕ್ಕಷ್ಟೆ. ಕಂಡಕಂಡ ಪಕ್ಷಗಳಿಗೆ ಗುಳೆ ಹೋಗಿ,
ದಕ್ಕದೆ ಕೊನೆಗೆ ತನ್ನದೇ ಸ್ವಂತ 'ಜನಶಕ್ತಿ' ಎನ್ನುವ
ಪಾರ್ಟಿಯೊಂದಕ್ಕೆ ಜನ್ಮನೀಡಿ ಮಕಾಡೆ ಮಲಗಿದ್ದ
ಈಗ ಹೊಸ ಎಪಿಸೋಡು ಶುರು
ಕೊಂಡಿದ್ದಾರೆ. ಅದರ ಹೆಸರು 'ವಂದೇ ಮಾತರಂ'.
ದು ಎಂತಹ ದೇಶಪ್ರೇಮಿ ಸಂಘಟನೆಯಂದರೆ
ವಸೂಲಿಗೆಂದೇ ಕ್ರಿಮಿನಲ್ ಮೈಂಡ್‌ಗಳು ಹುಟ್ಟು
ವ ಸಮಾಜೋದ್ಧಾರಕ (?) ಸಂಘಟನೆ ಇದಾಗಿದೆ.
ದರೆ ಇದರ ಹಿಂದಿರುವ ಮೆಗಾ ಮೈಂಡುಗಳಲ್ಲಿ
ಬ್ಲಿಂಗ್ ದಂಧೆಯ ಚಂದ್ರ, ಮತ್ತೊಬ್ಬ ಓಸಿ ಬರೆಯೋ
ರ! ಇಂತಹ ಸಂಘಟನೆಗೆ ಬಿದರಿ ಸಾಹೇಬರೆ
ಕ್ಷ! ಮೊನ್ನೆ ಚಿತ್ರದುರ್ಗದಲ್ಲಿ ನಡೆದ ಅದ್ದೂರಿ
ರಂಭದಲ್ಲಿ ಬಿದರಿಯ ಪಟ್ಟಾಭಿಷೇಕವೂ
ಹೋಗಿದೆ.


ರಂತವೆಂದರೆ ಆ ಸಮಾರಂಭಕ್ಕೆ ಜಿಲ್ಲಾ ಉಸ್ತುವಾರಿ
ಎಚ್. ಆಂಜನೇಯ, ಶಾಸಕ ರಘುಮೂರ್ತಿ,
ಡ್ಡಿಯಂತವರು ಅಟೆಂಡೆನ್ಸ್ ಹಾಕಿ ಬಂದದ್ದು.
ಮ್ಮದು ರಾಜಕೀಯ ಸಂಘಟನೆಯಲ್ಲ ಎನ್ನುತ್ತಲೇ
ಏರಿದ ಬಿದರಿಯ ಮಾತಿನುದ್ದಕ್ಕೂ ನುಸುಳಿ
ದ್ದು ಪಕ್ಕಾ ಪೊಲಿಟಿಕಲ್ ವೀರಾವೇಶ. ಅವತ್ತಿನ
ಂಭದಲ್ಲಿ ಕೋಮುವಾದಿ ಬಿಜೆಪಿಯ ನರೇಂದ್ರ
ಯನ್ನು ಬಿದರಿ ಸಾಹೇಬರು ಹಾಡಿ ಹೊಗಳಿದರು.
ಅಲ್ಲ, ಒಂದು ವರ್ಷದ ಹಿಂದೆ ತನಗೆ ರಾಜಕೀಯ
ದಗಿಸಿದ್ದ ಕಾಂಗ್ರೆಸ್ ಪಕ್ಷವನ್ನು ಪರೋಕ್ಷವಾಗಿ
ುವುದಕ್ಕೇ ಬಹುಪಾಲು ಭಾಷಣವನ್ನು ಬಿದರಿ
ಾಗಿಸಿಕೊಂಡಿದ್ದರು.

ಶದಲ್ಲಿ ಸುದೀರ್ಘ ಆಡಳಿತ ನಡೆಸಿದವರು ದೇಶವನ್ನೆ
ಳಿಸಿದ್ದಾರೆ, ಪ್ರಾಮಾಣಿಕತೆಗೆ ಮೂರು ಕಾಸಿನ ಬೆಲೆ
ದೇಶದ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳೂ
ಾರದಲ್ಲಿ ಮುಳುಗಿಹೋಗಿವೆ ಎಂದೆಲ್ಲಾ ಪ್ರಾರಂಭಿಸಿದ
ಸಾಹೇಬರು ಹಠಾತ್ತನೆ ಮೋದಿ ಭಜನೆಯತ್ತ
ದರು. ಇವತ್ತು ಸ್ವತಃ ಬಿಜೆಪಿಗಳೂ ರೈಲು ಪ್ರಯಾಣ
ಏರಿಕೆಯನ್ನು ಸಮರ್ಥಿಸಲು ಹಿಂದೇಟು
ತ್ತಿರುವಾಗ ಬಿದರಿಯವರು "ಬಸ್ ದರಕ್ಕಿಂತ ರೈಲು
ಉತ್ತಮವಾಗಿದೆ. ಅದರ ಮುಂದೆ ರೈಲು ಪ್ರಯಾಣ
ಚ್ಚಾದ್ದೇನು ದುಬಾರಿಯಲ್ಲ" ಎಂದ ಅವರು ತಮ್ಮ
ಸಂಘಟನೆ 'ವಂದೇ ಮಾತರಂ'ನ ಕೇಸರಿ



ಮುಖವಾಡವನ್ನು ಬೆತ್ತಲುಗೊಳಿಸಿದ್ದರು.

ಬಿದರಿಯ 'ಮೋದಿ ಭಜನೆ' ಅಷ್ಟಕ್ಕೇ ನಿಲ್ಲಲಿಲ್ಲ. ನೇರವಾಗಿ ನರೇಂದ್ರ ಮೋದಿಯನ್ನೇ ಹಿಗ್ಗಾಮುಗ್ಗಾ ಹೊಗಳಲು ಶುರು ಮಾಡಿದ ಬಿದರಿ "ಈ ದೇಶವನ್ನೇ ಬದಲಾಯಿಸಬಲ್ಲ ಚೈತನ್ಯ ಮೋದಿಗಿದೆ. ಅರವತ್ತು ವರ್ಷ ಕಂಡರಿಯದ ದಕ್ಷ ಪ್ರಧಾನಿಯನ್ನು ಕಾಣುವಂತಾಗಿದೆ. ಇಂಥ ದಕ್ಷ ಪ್ರಧಾನಿಗೆ ನಮ್ಮ ಸಂಘಟನೆ ಸದಾ ಬೆಂಬಲ ನೀಡುತ್ತದೆ" ಎಂದು ಸಾರಿದರು.



ಚಂದ್ರಶೇಖರ್

ಇದನ್ನು ಕೇಳಿ ಅಲ್ಲಿ ನೆರೆದಿದ್ದ ಜನರಿರಲಿ, ಅಂತಹ ಸಮಾರಂಭಕ್ಕೆ 'ಅತಿಥಿ'ಗಳಾಗಿ ಆಗಮಿಸಿದ್ದ ಕಾಂಗ್ರೆಸ್ಸಿಗರಾದ ಸಚಿವ ಆಂಜನೇಯ, ಶಾಸಕ ರಘುಮೂರ್ತಿ, ತಿಪ್ಪಾರೆಡ್ಡಿಗಳೆಲ್ಲ ದಂಗು ಬಡಿದು ಹೋದರು! ಪಕ್ಕದಲ್ಲೇ ಮಂತ್ರಿ ಆಂಜನೇಯನನ್ನು ಕೂರಿಸಿಕೊಂಡು 'ರಾಜ್ಯ ಸರ್ಕಾರದ ಮಂತ್ರಿಗಳು ಬೇಜವಾಬ್ದಾರಿ ಆಡಳಿತ ನಡೆಸುತ್ತಿದ್ದಾರೆ' ಎಂದು ಬಿದರಿ ಅಬ್ಬರಿಸಿದರು.

ಹೀಗೊಂದು ರಾಜಕೀಯೇತರ ಸಂಘಟನೆಯ ಉದ್ಘಾಟನಾ ಸಮಾರಂಭದಲ್ಲಿ ಅದರ ರಾಜ್ಯಾಧ್ಯಕ್ಷ ಎನಿಸಿಕೊಂಡವನ ರಾಜಕೀಯ ಭಾಷಣವನ್ನೇ ಅರಗಿಸಿಕೊಳ್ಳಲಾಗದೆ ಜನ ಹೆಣಗಾಡುತ್ತಿರುವ ಹೊತ್ತಿನಲ್ಲೆ 'ವೀರಶೈವ ಜಾತಿಯ ಬಡವರನ್ನು ಸರ್ಕಾರ ಕಡೆಗಣಿಸಿದೆ. ರಾಜಕೀಯ ಪ್ರಾಧಾನ್ಯತೆಗಳು ದಕ್ಕುತ್ತಿಲ್ಲ' ಎಂದು ಬಿದರಿ ಸ್ವಜಾತಿ ಪ್ರೇಮದ ಗುಂಡು ಹಾರಿಸಿದರು!

ಹೀಗೆ ಬಿದರಿ ಭಾಷಣ ಕುಟ್ಟುತ್ತಿದ್ದಾಗ ವೇದಿಕೆಯ ಕೇಂದ್ರಭಾಗದಲ್ಲೇ ವಿರಾಜಮಾನರಾಗಿದ್ದ ಡಬ್ಲಿಂಗ್ ಚಂದ್ರ ಮತ್ತು ಓಸಿ ಸರ್ದಾರ್‌ರು ಬಿದರಿಯ ಆಳಿದುಳಿದ ಮಾನ ಮರ್ಯಾದೆಯನ್ನೆಲ್ಲ ಸಂತೆಹೊಂಡದಲ್ಲಿ ಶಾಶ್ವತವಾಗಿ ಮುಳುಗಿಸಲು ತುದಿಗಾಲಲ್ಲಿ ಕಾದು ನಿಂತವರಂತೆ ಕಾಣಿಸುತ್ತಿದ್ದರು. ಹಾಗೆ ನೋಡಿದರೆ ಈ 'ಮಾತರಂ' ಸಂಘದ ಅಸ್ತಿತ್ವವೇ ಅನುಮಾನಗಳಿಗೆ ಎಡೆಮಾಡಿ ಕೊಡುವಂತಿದೆ. ಕರಾಳ ಕ್ರಿಮಿಗಳೇ ಸೇರಿಕೊಂಡಿರುವ ಈ ಸಂಘದ ಹಫ್ತಾ ವಸೂಲಿ ಉದ್ದೇಶ ರಹಸ್ಯವಾಗೇನೂ ಉಳಿದಿಲ್ಲ. ಇನ್ನು ಈ ಸಂಘದ ಸಂಘಟಕರ ಜ್ಞಾನಮಟ್ಟ ಎಂತದ್ದೆಂದರೆ ಹಿರಿಯೂರಿನಲ್ಲಿ ಓದುವ ಮಕ್ಕಳಿಗೆ ಶಬ್ದಕೋಶಗಳನ್ನು ಕೊಟ್ಟು 'ನಮ್ಮ ಸಂಘಟನೆ ವಂದೇಮಾತರಂನ ಅರ್ಥ ಇದರಲ್ಲಿದೆ, ಹುಡುಕಿ ಅರ್ಥಮಾಡಿಕೊಳ್ಳಿ' ಎನ್ನುವ ಉಪದೇಶ ಕೇಳಿ ತಾಯಿ ಭಾರತಾಂಬೆಯೆ ಕಿಸಕ್ಕೆಂದಿರಲೂ ಸಾಕು. ಇಂತಹ ನಯವಂಚಕರ ನಾಯಕತ್ವದ ವಂದೇಮಾತರಂ ಸಂಘಟನೆಗೆ ಬಿದರಿ ರಾಜ್ಯಾಧ್ಯಕ್ಷರಾಗಿದ್ದಾರೆ! ಒಂದು ಕಾಲಕ್ಕೆ ಇಂತಹ ದಗಾಕೋರರನ್ನು ಬಡಿದು ಜೈಲಿಗಟ್ಟುತ್ತಿದ್ದ ಬಿದರಿ ಅವರು ಇವತ್ತು ಅಂತವರ ಬಂಡವಾಳವಾಗಿ ಬಳಕೆಯಾಗುತ್ತಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಬಿದರಿಗಿರುವ ಮಾಜಿ ಉನ್ನತಾಧಿಕಾರಿಯೆಂಬ ಗೌರವದ ಟ್ರಂಪ್‌ಕಾರ್ಡನ್ನು ತಮ್ಮ ದಂಧೆಗಳಿಗೆ ರಕ್ಷಾ ಕವಚವಾಗಿ ಈ ದಗಾಕೋರರು ಬಳಸಿಕೊಳ್ಳಲಿದ್ದಾರೆ ಎಂಬುದಂತೂ ಗ್ಯಾರಂಟಿ.

ಸದ್ಯದ ಪರಿಸ್ಥಿತಿಯಲ್ಲಿ ಮ್ಯಾಗ್ನೆಟ್ ಹುಡುಕಿ ಅಲೆದಾಡುತ್ತಿರುವ ಕಬ್ಬಿಣದ ಪರಿಸ್ಥಿತಿ ಬಿದರಿಯದ್ದು. ಯಾರು ಕಾಂತ ತೋರಿಸಿದರೂ ಕಚಕ್ಕನೆ ಕಚ್ಚಿಕೊಳ್ಳೋದು ಗ್ಯಾರಂಟಿ. ಕಾಂಗ್ರೆಸ್‌ನಿಂದ ಸಮಾಜವಾದಿ ಪಾರ್ಟಿಗೆ ನೆಗೆದಿದ್ದಾಗಲಿ, ಎಸ್‌ಪಿಯಿಂದ ಥಂಗನೆ ಹೊರಬಂದದ್ದಾಗಲಿ, ದಿಢೀರನೆ ಜನಶಕ್ತಿಯನ್ನು ಕಟ್ಟಿದ್ದಾಗಲಿ, ಅಷ್ಟೇಬೇಗ ಅದನ್ನು ಅನಾಥವಾಗಿಸಿ ವಂದೇ ಮಾತರಂ ಎಂದಿದ್ದಾಗಲಿ ಇವೆಲ್ಲ ಅದರ ಸ್ಯಾಂಪಲ್‌ಗಳಷ್ಟೆ. ನಿವೃತ್ತಿ ನಂತರದ ನಿರುದ್ಯೋಗದ ಹತಾಶೆ ಅಂತದ್ದೊಂದು ಪುನರ್ವಸತಿಯ ಹಂಬಲ ಹುಟ್ಟುಹಾಕುವುದು ಸಹಜ. ಆದರೆ ಆ ಹಪಾಹಪಿ ಚಿತ್ತಚಂಚಲಗೊಳಿಸುವಷ್ಟು ವಿಪರೀತವಾಗಿರೋದೆ 'ಬಿದರಿ ಪ್ರಹಸನದ' ಮುಖ್ಯಾಂಶ!

ಇದರ ಮುಖ್ಯವಾದ ಎಫೆಕ್ಟು ತಗುಲುತ್ತಿರೋದು ಪಾಪ ಪೊಲೀಸಿನವರಿಗೆ. ಬಿದರಿ ಅಂತಲ್ಲ, ಯಾರೇ ಹೈಯರ್ ಆಫೀಸರ್ ಈಗ ಮಾಜಿಯಾಗಿದ್ದರೂ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ವ್ಯಕ್ತಿ ಎನ್ನುವ ಗೌರವ ಎಲ್ಲಾ ಪೊಲೀಸರಿಗೂ ಇದ್ದೇ ಇರುತ್ತದೆ. ಆ ಕಾರಣಕ್ಕೆ ಒಂದಷ್ಟು ಔಪಚಾರಿಕ ಮರ್ಯಾದೆಯನ್ನೂ ಕೊಡುತ್ತಾರೆ. ಆದರೆ ಬಿದರಿ ವಿಚಾರದಲ್ಲಿ ಚಿತ್ರದುರ್ಗ ಪೊಲೀಸರಿಗೆ ದೊಡ್ಡ ತಲೆನೋವೇ ಶುರುವಾಗಿದೆ. ಯಾಕೆಂದರೆ ಇಂದಲ್ಲ ನಾಳೆ ಜೈಲಿಗೆ ಗದುಮಬೇಕೆಂದು ಕಾದು ಕುಳಿತಿದ್ದ ಡಬ್ಲಿಂಗ್ ಚಂದ್ರ, ಓಸಿ ಸರ್ದಾರರೇ ಬಿದರಿಯ ಎಡಕ್ಕೂ ಬಲಕ್ಕೂ ಅಲೆದಾಡುತ್ತಿರುವಾಗ ಪೊಲೀಸರಿಗೆ ಇಕ್ಕಟ್ಟಿನ ಪರಿಸ್ಥಿತಿ. ದಗಾಕೋರರನ್ನು ಕಂಡು ಮುಖ ಸಿಂಡರಿಸಿಕೊಳ್ಳಬೇಕೊ, ಬಿದರಿ ನೋಡಿ ನಗೆ ಬಿಸಾಕೊಬೇಕೊ ಅಥವಾ ಬಿದರಿಯ ಜೊತೆಗೆ ಅವರಿಗೂ ಸೆಲ್ಯೂಟ್ ಹೊಡೆಯಬೇಕೊ ಗೊತ್ತಾಗದಂತಹ ಇಬ್ಬಂದಿತನ.

ಹಾಗೆ ನೋಡಿದರೆ ದೂರದ ಬಿದರಿಗೆ ದುರ್ಗದ ಮೇಲೆ ಅದೆಂತಹ ಮೋಹವೋ ಗೊತ್ತಿಲ್ಲ. ಪದೇಪದೇ ಇಲ್ಲಿಗೆ ಅಪ್ಪಳಿಸುತ್ತಲೇ ಇರುತ್ತಾರೆ. ಕರ್ನಾಟಕದ ಮಟ್ಟಿಗೆ ರಾಜಕೀಯ ಅನಾಥರ ಪಕ್ಷ ಎಂತಲೇ ಕರೆಸಿಕೊಳ್ಳುವ ಸಮಾಜವಾದಿ ಪಾರ್ಟಿಯ ಸೈಕಲ್ ಪೆಡಲನ್ನು ಶಂಕರ್ ಬಿದರಿ ಗಟ್ಟಿಯಾಗಿ ತುಳಿದಿದ್ದೇ ಚಿತ್ರದುರ್ಗದ ನೆಲದಿಂದ. ಒಮ್ಮೆ ಇಲ್ಲಿ ಸೈಕಲ್ ರ‍್ಯಾಲಿಯನ್ನೂ ನಡೆಸಿದ್ದುಂಟು. ಇದೀಗ ವಂದೇ ಮಾತರಂ ಘೋಷವನ್ನೂ ಚಿತ್ರದುರ್ಗದಿಂದಲೇ ಮೊಳಗಿಸಿದ್ದಾರೆ. ಮುಂದೆ ಇನ್ನೂ ಯಾವ್ಯಾವ ಬಿದರಿ ಅವಾಂತರಗಳಿಗೆ ಚಿತ್ರದುರ್ಗ ಸಾಕ್ಷಿಯಾಗಬೇಕೊ ಒನಕೆ ಓಬವ್ವನೇ ಬಲ್ಲಳು.


● ಟಿ. ಷಣ್ಮುಖ

ಾವಣಗೆರೆ ಪೊಲೀಸಮ್ಮ ಮಹಾ 'ಬಡವಿ'!.....ಅಂತೆ

ಕ್ಕದ ದುರ್ಗದಲ್ಲಿ ಮಾಜಿ ಪೊಲೀಸಪ್ಪ ಬಿದರಿಯ ಪ್ರಹಸನ ಜೋರಾಗಿ
ಯುತ್ತಿದ್ದರೆ ಇತ್ತ ದಾವಣಗೆರೆಯ ಪೊಲೀಸಮ್ಮನ ಬೋಗಸ್ ಪ್ರಮಾಣಪತ್ರದ
ದವೊಂದು ತಣ್ಣಗೆ ಹರಿದಾಡುತ್ತಿದೆ. ಜಿಲ್ಲಾ ಕ್ರೈಂ ಬ್ರಾಂಚ್ ಮತ್ತು ಇಂಟೆಲಿಜೆನ್ಸ್
ಯೋ ವಿಭಾಗದ ಇನ್ಸ್‌ಪೆಕ್ಟರ್ ಅರ್ಜುಮನ್ ಬಾನುವೇ ಈ ವೃತ್ತಾಂತದ ಕೇಂದ್ರಬಿಂದು.
ಮೂಲತಃ ಭದ್ರಾವತಿಯ ಬೊಮ್ಮನಕಟ್ಟೆಯವಳು. ತೋಟ, ತುದಿಕೆ ಅಂತೆಲ್ಲಾ
ರಿ ಆಸ್ತಿ ಇದೆ. ಗಂಡ ಖಾದರ್ ಇಲಿಯಾಸ್ ಖಾನ್ ಬೆಂಗಳೂರಿನ ಖಾಸಗಿ
ಯೊಂದರಲ್ಲಿ 60 ಸಾವಿರ ಪಗಾರ ಎಣಿಸುವ ಭರಪೂರ ಉದ್ಯೋಗದಲ್ಲಿದ್ದಾನೆ.
ಅರ್ಜುಮನ್ ಬಾನು ಸಂಬಳವೂ ಐದಂಕಿ ದಾಟುತ್ತದೆ.

ಂಡಹೆಂಡತಿ ಇಬ್ಬರೂ ಇನ್‌ಕಮ್ ಟ್ಯಾಕ್ಸ್ ಕಟ್ಟುವಷ್ಟು ಆದಾಯ ಉಳ್ಳವರು.
ರೆಯಾಗಿ ಹೇಳಬೇಕೆಂದರೆ ಹಣಕಾಸಿಗೆ ಯಾವುದೇ ಚಿಂತೆಯಿಲ್ಲ. ಇಷ್ಟಾದರು
ರ್ಮನ್ ಮನೆಯಲ್ಲಿ ಭಯಂಕರ ಬಡತನವಿದೆಯಂತೆ, ಅವರಿಬ್ಬರ ವಾರ್ಷಿಕ
ಯ ಕೇವಲ 17 ಸಾವಿರ ಮಾತ್ರವಂತೆ! ಹಾಗಂತ ಸ್ವತಃ ಅರ್ಜುಮನ್ ಬಾನು
ಫಿಕೇಟ್ ಪಡೆದು ಸಲ್ಲಿಸಿದ್ದಾಳೆ.

ಇಡೀ ಪ್ರಕರಣದ ಸಾರಾಂಶವೇನೆಂದರೆ, ಈ ಪೊಲೀಸಮ್ಮನಿಗೆ ಒಬ್ಬಳು ಮಗಳಿದ್ದಾಳೆ.
ಸಾಫಾ ಖಾನ್. ಆಕೆ ಎಂಬಿಬಿಎಸ್ ಓದುತ್ತಿದ್ದಾಳೆ. ಅಲ್ಪಸಂಖ್ಯಾತ ಬಡವರಿಗೆ
ಗಲಿ ಅಂತ ಸರ್ಕಾರ ಫೀಜಿನಲ್ಲಿ ರಿಯಾಯಿತಿ, ಒಂದಷ್ಟು ಸ್ಕಾಲರ್‌ಶಿಪ್, ಉಚಿತ
ಕ್ಯಗಳನ್ನು ನೀಡುತ್ತಿದೆ. ತಿಂಗಳಿಗೆ ಲಕ್ಷಾಂತರ ಆದಾಯವಿರುವ ಅರ್ಜುಮನ್
ತಿಗಳಿಗೆ ಮಗಳನ್ನು ಸ್ವಂತ ಹಣದಿಂದ ಓದಿಸುವುದಕ್ಕೇನೂ ಕೊರತೆಯಿರಲಿಲ್ಲ.
ಷ್ಟೆ ಇನ್ನೊಂದಿಬ್ಬರು ಬಡ ವಿದ್ಯಾರ್ಥಿಗಳಿಗೂ ನೆರವಾಗುವಷ್ಟು ಅನುಕೂಲಸ್ಥರು.
ಆದರೆ ಬಡ ವಿದ್ಯಾರ್ಥಿಗಳಿಗೆ ಮೀಸಲಾಗಿದ್ದ ರಿಯಾಯಿತಿಗಳನ್ನು ಬಾಚಿಕೊಳ್ಳಲು
ಚು ಹಾಕಿದ ಅರ್ಜುಮನ್ ಬಾನು ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು
ವತಿ ತಹಸೀಲ್ದಾರರಿಂದ ಬೋಗಸ್ ಆದಾಯ ಪ್ರಮಾಣಪತ್ರವೊಂದನ್ನು
ಸಿಕೊಂಡಿದ್ದಾಳೆ. ತನ್ನ ಗಂಡ ಮತ್ತು ತಾನು ಬೊಮ್ಮನಕಟ್ಟೆಯಲ್ಲಿ ವಾಸವಿದ್ದು
ಖಾದರ್ ಇಲಿಯಾಸ್ ಖಾನ್ ಸರ್ವೇ ಸಾಮಾನ್ಯ ರೈತನಾಗಿದ್ದರೆ ತಾನು ಅದೇ
ನಲ್ಲಿ ಗೃಹಿಣಿಯಾಗಿ ಜೀವನ ನಡೆಸುತ್ತಿದ್ದೇನೆ. ಎಲ್ಲಾ ಮೂಲಗಳಿಂದ ತಮ್ಮ
ದಾಯ ಕೇವಲ 17 ಸಾವಿರ ಮಾತ್ರ ಎನ್ನುವ ಹುಸಿಸುಳ್ಳಿನ ಅರ್ಜಿ ಕೊಟ್ಟು
ರಿಯನ್ನು ಯಾಮಾರಿಸಿ ಈ ಬೋಗಸ್ ಸರ್ಟಿಫಿಕೇಟ್ ಪಡೆದುಕೊಂಡಿದ್ದಾಳೆ.



No: ICRCH/Kasaba1/3375/2012-2013

N 1 2 3 9 4 5 1 3

GOVERNMENT OF KARNATAKA
REVENUE DEPARTMENT
FORM-F
(See rule 3A (2)(3))
ONLY FOR EDUCATION

INCOME AND CASTE CERTIFICATE TO BE ISSUED TO CANDIDATES BELONGING TO BACKWARD CLASSES OTHER THAN CATEGORY-I

Certified that Sri/Smt/Kum Safa Khan Son/Daughter/Wife of Sri/Smt Khader Ilyaz Khan, residing at Bommanakatte Bhadravathi, of Bhadravati(Bommanakatte) Village/Ward, Kasaba1 Hobli, Bhadravati Taluk, Shimoga District and his/her parents/guardian/wife/husband does not come within the purview of creamy layer, specified in Government Orders No.SWD.104.BCA.2011 dated 06-2-2012 and SWD 179 BCA 2010 dated 16-07-2011

Either the applicant or his/her parents/guardian/wife/husband is not Class-I or Class-II Officer in the service of the Government;

OR

Does not hold an equivalent post in Public Sector Undertaking;

OR

is not an employee under a Private Employer and drawing a salary which is not less than that of a Class-II Officer (initial stage of the pay scale of Rs.11400-21600/-)

OR

His/her parents/guardian/husband/wife is not an income exceeds Rs. 3.5 lakhs

OR

His/her parents/guardian/wife/husband holding 10 Units of Agricultural land as specified in the Karnataka ... and Reforms Act 1963 and such of those holding more than 20 acres of plantation land.


Sri/Smt/Kum Safa Khan belongs to caste Muslim of Category II (B) of the Backward Classes and certified that his/her family annual income is Rs.17000/- (Rupees Seventeen Thousand Only)

Place: Bhadravati
Date: 01/07/2013

TAHSILDAR
Bhadravati Taluk
(Office seal)

RDS Request ID : BHA0311311I755 Ver:2.7

ಬೋಗಸ್ ಜಾತಿ ಮತ್ತು ಆದಾಯ ಪ್ರಮಾಣ ಪತ್ರ



ಅರ್ಜುಮನ್‌ಬಾನು


ಬೇಲಿಯೇ ಎದ್ದು ಹೊಲ ಮೆಯ್ದಂತೆ ವಂಚಕರನ್ನು ಹುಡುಕಿ ಜೈಲಿಗಟ್ಟಬೇಕಾದ ಪೊಲೀಸಮ್ಮನೇ ಸುಳ್ಳು ದಾಖಲೆ ಪತ್ರ ಸೃಷ್ಟಿಸಿ ಯಾರೋ ಅಮಾಯಕ ಫಲಾನುಭವಿಗಳಿಗೆ ಸೇರಬೇಕಾದ ಸೌಲಭ್ಯಗಳನ್ನು ಲಪಟಾಯಿಸಲು ಮುಂದಾಗಿರೋದು ಇಡೀ ಪೊಲೀಸ್ ಇಲಾಖೆಯೇ ತಲೆ ತಗ್ಗಿಸುವಂತದ್ದು.

ಈಕೆಯ ವಿರುದ್ಧ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತೊ ಕಾದು ನೋಡಬೇಕು. ಈಗಾಗಲೇ ತನ್ನ ಪ್ರಭಾವ ಬಳಸಿಕೊಂಡು ಇಡೀ ಪ್ರಕರಣವನ್ನೇ ತಿಪ್ಪೆ ಸೇರಿಸಲು ಅರ್ಜುಮನ್ ಬಾನು ಹುನ್ನಾರ ನಡೆಸುತ್ತಿದ್ದು ಇಲಾಖೆಯ ಉನ್ನತಾಧಿಕಾರಿಗಳೇ ಇದಕ್ಕೆ ಸಾಥ್ ನೀಡುತ್ತಿದ್ದಾರೆನ್ನುವ ಗುಸುಗುಸು ಕೇಳಿ ಬರುತ್ತಿದೆ.


ಶೋಭಾ

ಕಣ್ಣೀರಿಟ್ಟ ಶೃತಿ






ಚೂಡನ ತಾಯಿ ಸುಶೀಲಮ್ಮ

ಚೂಡಾಚಾರಿಯ ಕಳ್ಳಾಟ

ಬಸವೇಶ್ವರನಗರದ ಎರಡನೇ ಕ್ರಾಸಿನ 691ನೇ ನಂಬರಿನ ಮನೆಯ ಹೆಸರು ಮಡಿಲು. ಭಾವುಕ ನಟಿ ಶೃತಿ ಏನೆಲ್ಲ ಕನಸು ಹೊತ್ತು ಕಟ್ಟಿಸಿದ ಆ ಬಂಗಲೆಯೇ ಈಗ ದುಸ್ವಪ್ನವಾಗಿ ಕಾಡತೊಡಗಿದೆ. ಕಳೆದ ಎರಡು ತಿಂಗಳುಗಳಿಂದ ಆ ಮನೆಯಲ್ಲಿ ಶೃತಿಯನ್ನು ಕಂಡವರಿಲ್ಲ. ಆಕೆಯ ಬದುಕಲ್ಲಿ ಪಾಪಾಗ್ನಿಯಂತೆ ಕಾಲಿಟ್ಟು, ಸಂಸಾರ, ಮಾನ, ಮರ್ಯಾದೆಯನ್ನೆಲ್ಲ ಬೀದಿಗೆ ತಂದು ಜನ್ಮಾಪಿ ಸಂಪಾದಿಸಿದ ಆಸ್ತಿ, ಅಂತಸ್ತು, ಸಾಮಾಜಿಕ ಸ್ಥಾನಮಾನಗಳೆಲ್ಲಕ್ಕೂ ಮುಳುಗು ನೀರು ತಂದ ದುರುಳ ಚಂದ್ರಾಚಾರಿಯ ಕಾಟಕ್ಕೆ ಹೆದರಿಕೊಂಡು ಶೃತಿಗೆ ತನ್ನದೇ ಮನೆಯಿದ್ದೂ ಬಚ್ಚಿಟ್ಟುಕೊಳ್ಳಬೇಕಾದ ದುರ್ಗತಿ!

ಸದ್ಯ ಅಣ್ಣ ಶರಣ್‌ನ ಮನೆಯಲ್ಲಿ ಶೃತಿ ಅವಿತು ಕೂತಿದ್ದಾರೆಂಬುದು ಒಂದು ಸುದ್ದಿ. ಚಂದ್ರಚೂಡ್ ಅಲಿಯಾಸ್ ಚಂದ್ರಾಚಾರಿ ಯಾನೇ ಚಂದ್ರಶೇಖರ್ ಅರ್ಥಾತ್ ಚೂಡಾಚಾರಿ ಉರ್ಫ್ ಚಕ್ರವರ್ತಿ, ಚಂದ್ರಕಾಂತ್, ಚಂದ್ರು, ಸೂರಿ, ಡಿಜೆಸಿ ಚಕ್ರವರ್ತಿ, ರಮೇಶ್, ಸುರೇಶ್- ಹೀಗೆ ಕಾಲಾನುಕಾಲಕ್ಕೆ ತನ್ನ ಹೆಸರನ್ನು ಬದಲಾಯಿಸಿ ಕೊಂಡಷ್ಟೇ ಸಲೀಸಾಗಿ ಕಟ್ಟಿಕೊಂಡ ಮಡದಿ, ಮಕ್ಕಳು, ಪ್ರೇಯಸಿಯರು, ಪತ್ನಿಯರನ್ನೂ ಬೀದಿಪಾಲು ಮಾಡುತ್ತಲೇ ಬಂದವನು ಚಂದ್ರಾಚಾರಿ. ನಿನ್ನೆಮೊನ್ನೆಯ ತನಕ "ಶೃತಿಗಾಗಿ ನಾನು ಪ್ರಾಣ ಬೇಕಾದರೂ ಕೊಡ್ತೀನಿ, ಮಹೇಂದರ್ ಮಗಳು ಗೌರಿ ನನಗೂ ಮಗಳಿದ್ದಂತೆ, ಕೋರ್ಟು ನಮ್ಮ ಮದುವೆಯನ್ನು ರದ್ದು ಪಡಿಸಿದರೇನಂತೆ ನನ್ನ ಹೃದಯದಿಂದ ಶೃತಿಯನ್ನು ಬೇರ್ಪಡಿಸಲು ಆ ದೇವರಿಂದಲೂ ಸಾಧ್ಯವಿಲ್ಲ. ಪ್ರಾಣ ಬೇಕಾದರೂ ಬಿಡ್ತೀನಿ ಆದರೆ ಶೃತಿಯನ್ನು ಮರೆಯುವ ಶಕ್ತಿ ನನಗಿಲ್ಲ..." ಎಂದು ಟೀವಿ ಹರಟೆಗೆ ಕೂತು ಡೈಲಾಗ್ ಹೊಡೆದ ಇದೇ ಚೂಡಾಚಾರಿಯ ಕಳ್ಳಾಟ ಕೇವಲ ಮೂರೇ ತಿಂಗಳಲ್ಲಿ ಜಗಜ್ಜಾಹೀರುಗೊಂಡಿದೆ.


ಹರಾಮಿ ಚೂಡ


ಚೂಡನ ಮಲ ತಂದೆ

ತನಗೆ ಮಗಳಿದ್ದಂತೆ ಎಂದು ಆಣೆ ಪ್ರಮಾಣ ಮಾಡಿದ ಇದೇ ಚೂಡ ಈಗ ಋತುಮತಿಯಾದ ಶೃತಿ ಮಗಳ ಫೋಟೋ ಹಾಕಿ 'ನಾಳೆ ಈ ಮಗು ಕೂಡ ಇನ್ನೆಂಥ ದುಷ್ಟೆಯಾಗುತ್ತಾಳೋ....' ಎಂದು 'ಕೆಟ್ಟಾ ಕೊಳಕು ಭಾಷೆಯಲ್ಲಿ ಬ್ಲಾಕ್‌ಮೇಲ್‌ಗಿಳಿದಿದ್ದಾನೆ!

ತನಗೊಬ್ಬ ಮಗಳಿದ್ದಾಳೆ, ಅದು ಕೂಡ ಶೃತಿ ಮಗಳದ್ದೇ ವಯಸ್ಸಿನ ಮಗು, ಆಕೆಯೂ ಮೈನೆರೆದಿದ್ದಾಳೆ ಎಂಬುದನ್ನೂ ಮರೆತು ತನಗೆ ಅನ್ನ, ಆಸರೆ, ಪ್ರೀತಿ ಕೊಟ್ಟ ತಾಯಿ ಮಗಳ ವಿರುದ್ಧ ವಾಚಾಮಗೋಚರ ಪದ ಪ್ರಯೋಗಿಸುವ ಚಂದ್ರಚೂಡನ ಬ್ಲಾಕ್‌ಮೇಲ್ ಬುದ್ಧಿಗೆ ಇದು ಒಂದು
ಉದಾಹರಣೆ ಮಾತ್ರ.


ಶೋಭಾ-ಚೂಡಾ ಜೋಡಿ

"ಶೃತಿ ಅಮ್ಮ ನನ್ನನ್ನು ಮನೆಯಲ್ಲಿ ಕೂಡಿ ಹಾ
ಕಪಾಳಕ್ಕೆ ಹೊಡೆದರು. ನನ್ನ ಮಗುವನ್ನೂ ಕೂಡಿ ಹಾಕಿದ್ರು
ಪ್ರಾಣಭೀತಿಗೆ ಬಿದ್ದ ನಾನು ಒಂದೂವರೆ ತಿಂಗಳ ನಂತ
ಈ ಬಗ್ಗೆ ಮೀಡಿಯಾಗಳಿಗೆ ಹೇಳಿಕೊಳ್ಳುತ್ತಿದ್ದೇನೆ
ಮೀಡಿಯಾಗಳಿಗೆ ಸುದ್ದಿ ಮುಟ್ಟಿಸಿದ ನಂತರವೇ
ಪೊಲೀಸರಿಗೆ ದೂರು ಸಲ್ಲಿಸುತ್ತೇನೆ...." ಎಂದೆಲ್ಲ ಬೊಬ
ಇಟ್ಟ ಶೃತಿ ಮನೆ ಕೆಲಸದ ಹೆಂಗಸು ಶೋಭಾಳನ್ನು ಸ
ಚೂಡನೇ ಬಚ್ಚಿಟ್ಟಿದ್ದಾನೆ. ಮನೆ ಕೆಲಸದ ಶೋಭಾ ಮತ
ಚಂದ್ರಚೂಡನ ವಿರುದ್ಧ ಖುದ್ದು ಶೃತಿಯೇ ಬಸವೇಶ್ವರನಗ
ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಆದರೆ ಇಷ್ಟೆಲ್ಲಕ್ಕೂ ಮುನ್ನ ಶೃತಿ ಚೂಡಾಚಾರಿಯ
ಕಾಟ, ಕಿರುಕುಳವನ್ನು ಕಂಡುಂಡ ರೀತಿಯಿದೆಯಲ್ಲ; ಅದ
ಶೃತಿಯಂಥ ನಟಿಯ ಮಟ್ಟಿಗೆ ಖಂಡಿತ ಸುಲಭ
ಜೀರ್ಣವಾಗುವುದಲ್ಲ. ಇಲ್ಲಿಗೆ ಐದು ವರ್ಷದ ಹಿಂ
ಡೈರೆಕ್ಟರ್ ಮಹೇಂದರ್ ರಾಶಿಗೆ ಪ್ರವೇಶಿಸಿದ ಚಂದ್ರಾಚಾ
ಆ ಹೊತ್ತಿಗೆ ಹಾಸನದ ಹತ್ತಾರು ಮನೆಗಳಿಗೆ ಕೊಳ್ಳಿಯಿಟ್ಟ
ಬೆಂಗಳೂರಿಗೆ ಓಡಿಬಂದಿದ್ದ. ಅರಸೀಕೆರೆಯ ಸುವರ್ಣಮ
ಎಂಬ ಮುಗ್ಧೆಯ ಮನೆಯಲ್ಲಿ ವರ್ಷಾನುಗಟ್ಟಲೆ ಬಿಟ್ಟಿ
ಅನ್ನ ತಿಂದು ಕೊನೆಗೆ ಆಕೆಯ ಮಗಳ ಬದುಕಿಗ
ಬೆಂಕಿಯಿಟ್ಟಿದ್ದ. ಹಾಗೆ ಉಂಡ ಮನೆಯ ಯುವ
ಮಂಜುಳಾ ಕಣ್ಣಿಗೆ ಮಣ್ಣೆರಚಿ ಆಕೆಯನ್ನು ಮದುವೆಯಾ
ಹಾಸನಕ್ಕೆ ಪರಾರಿಯಾಗಿದ್ದ ಚಂದ್ರಾಚಾರಿ ಆ ಹೊತ್ತಿ
ತನ್ನ ಹೆಸರನ್ನು ಚಂದ್ರಶೇಖರ್ ಎಂದಿಟ್ಟುಕೊಂಡಿದ್ದ.

ಏಕೆಂದರೆ ಅರಸಿಕೆರೆಯಲ್ಲಿದ್ದಾಗಲೇ ಪೊಲೀಸ
ಪೇದೆಯೊಬ್ಬನ ಮಗಳನ್ನು ಓಡಿಸಿಕೊಂಡು ಹೋಗಿ ಗ
ಕಾಣೆಸಿದ್ದ. ಹಾಸನಕ್ಕೆ ಬಂದವನು ತನ್ನ ಹೆಸರನ
ಚಂದ್ರಚೂಡ್ ಎಂದು ಬದಲಿಸಿಕೊಂಡ. ಹಾಗೆ ಊ
ಬಿಟ್ಟು ಹುಡುಗಿ ಸಮೇತ ಓಡಿಬಂದಿದ್ದ ಚೂಡನ
ಅನ್ನಕೊಟ್ಟು, ಆಸರೆ ಕೊಟ್ಟು ಕಾಪಾಡಿದ್ದು ಜನ
ಮಾಧ್ಯಮದ ಹಿರಿಯ ಪತ್ರಕರ್ತರಾದ ಆರ್.
ವೆಂಕಟೇಶ್‌ಮೂರ್ತಿ ಮತ್ತು ಮಂಜುನಾಥ್ ದತ್ತ ಅವರು
ಪತ್ರಿಕಾ ಕಚೇರಿಯ ಟೈಪಿಸ್ಟ್ ಒಬ್ಬಳನ್ನು ಚೂಡ ಪೀಡಿಸಿದ
ವೆಂಕಟೇಶ್‌ಮೂರ್ತಿ ಬೆಂಬಲಿಗರು ಚೂಡನನ್ನು ಬ
ಬಿಚ್ಚಿ ಅಟ್ಟಾಡಿಸಿ ಹೊಡೆದರು. ಮುಂದೆ ರವಿನಾಕಲಗೂ
ಎಂಬ ಇನ್ನೊಬ್ಬ ಪತ್ರಕರ್ತರ ಆಸರೆಗೆ ಬಂದು ಅಲ
ಒದೆ ತಿಂದ. ಹೀಗೆ ಹಾಸನದ ಹತ್ತಾರು ಮನ

ಚೂಡ ಮಂಜುಳಾ ಜೊತೆ .




ಚೂಡ ಶೃತಿ ಮದುವೆ

ಳ್ಳಿಯಿಟ್ಟು ನೂರಾರು ಮಂದಿಗೆ ಟೋಪಿ ಹಾಕಿಯೇ ಗಳೂರಿನಲ್ಲಿ ತಲೆ ಮರೆಸಿಕೊಂಡಿದ್ದ ಚಂದ್ರಾಚಾರಿಯನ್ನು ನ್ಸರ್ ಮಹೇಂದರ್ ತನ್ನ ಮನೆಯೊಳಕ್ಕೆ ಬಿಟ್ಟುಕೊಂಡಿದ್ದೇ ಹಾಪರಾಧವಾಗಿತ್ತು.

ದುರುಳನ ತಂತ್ರ!

ಎಂಥಾ ಬಾಲ್ಯದ ಗೆಳೆಯರಿದ್ದರೂ ಅವರಿಬ್ಬರ ಮಧ್ಯೆ ಳಿ ಹಿಂಡಲು ಚಂದ್ರಾಚಾರಿಗೆ ಕೇವಲ 15 ನಿಮಿಷ ಕು. ಪ್ರಾಣಕ್ಕೆ ಪ್ರಾಣ ಕೊಡುವ ದಂಪತಿಗಳಾದರೇನಂತೆ ವಲ ಅರ್ಧ ಗಂಟೆಯಲ್ಲಿ ಇವರಿಬ್ಬರಿಗೂ ಜಗಳ ಟ್ಟಿಸಿದ್ದ ಕಿಲಾಡಿ ಚಂದ್ರಾಚಾರಿ!

ಮಹೇಂದರ್‌ಗೆ ಇನ್ಯಾರೋ ಯುವತಿ ಜೊತೆ ಅನೈತಿಕ ಬಂಧವಿದೆ ಎಂದು ಚೂಡ ನೀಡಿದ ತನಿಖಾ ವರದಿಯನ್ನೇ ಶೃತಿ ನಂಬಿಬಿಟ್ಟರು. ತಾನು 150 ಎಕರೆ ತೋಟದ ಶ್ರೀಮಂತ. ಪತ್ರಿಕೋದ್ಯಮ ನನಗೆ ಹಾಬಿ ನ್ನಂತೆ. ತಾನೊಬ್ಬ ಕವಿ, ವಿಚಾರವಾದಿ, ರೈತನಾಯಕ ನಂಜುಂಡಸ್ವಾಮಿಗೆ ಪರಮಾಪ್ತ, ಸಿನಿಮಾ ನನ್ನ ಪಾಲಿಗೆ ವ್ಯಾಸದಂತೆ ಎಂದೆಲ್ಲ ಶೃತಿಯನ್ನು ನಂಬಿಸಿದ್ದ, ಅಂತಿಮವಾಗಿ ಮಹೇಂದರ್‌ನನ್ನೇ ಶೃತಿ ಬಂಗಲೆಯಿಂದ ಹೊರದಬ್ಬಿ ಶೃತಿಗೆ ನೇ ಗಂಡ ಎಂದು ಪೋಜು ಕೊಟ್ಟವನು ಚೂಡಾಚಾರಿ.

ಬಿಜೆಪಿ ಸರ್ಕಾರದಲ್ಲಿ ಮಹಿಳಾ ಅಭಿವೃದ್ಧಿ ನಿಗಮದ ಕ್ಷ ಸ್ಥಾನಕ್ಕೆ ಈತನಿಂದಾಗಿಯೇ ಕುತ್ತು ಬಂತು. ಸಾಮಾಜಿಕ ಮಾನ ಬೀದಿಗೆ ಬಿತ್ತು, ಬಸವೇಶ್ವರನಗರದ ಮನೆಯ ತ್ತಿನ ಅರ್ಧ ಪಾಲು ಕೇಳಿ ಕೋರ್ಟ್ ಮೊರೆ ಹೊಕ್ಕ ಮಹೇಂದರ್‌ಗೆ 40 ಲಕ್ಷದ ಪರಿಹಾರ ಕೊಟ್ಟೇ ವಿಚ್ಛೇದನ ಡೆಯಬೇಕಾಯ್ತು. ಮುರಿದ ಮನೆ, ಉರಿದ ಮನಸ್ಸು, ಕಟ್ಟಿದ ಗೌರವ, ಎಲ್ಲೆಂದರಲ್ಲಿ ಅಪನಿಂದೆಗೆ ಶೃತಿ ಕೊಡಬೇಕಾಗಿ ಬಂತು.

ಇಷ್ಟೆಲ್ಲವನ್ನೂ ದುಷ್ಟ ಚಂದ್ರಾಚಾರಿಯನ್ನು ನಂಬಿ ನಾಹುತಕ್ಕೆ ತಲೆ ಕೊಟ್ಟಿದ್ದ ಶೃತಿಗೆ ಉಳಿದ ಒಂದೇ ದಾರಿಯೆಂದರೆ ಆತನನ್ನೇ ಮದುವೆಯಾಗುವುದು. ಬ್ಲಿಯುತನಕ ತನ್ನ ಪತ್ನಿ ಮಂಜುಳಾ ಜೊತೆಗೆ ಡೈವೋರ್ಸಾಗಿದೆ ಎಂದೇ ನಂಬಿಸಿದ್ದ, ಯಾಮಾರಿದ ಶೃತಿ ಳಿದು, ಚಂದ್ರಚೂಡ್ ಅಲಿಯಾಸ್ ಚಕ್ರವರ್ತಿ ಒಳ್ಳೇ ಮನುಷ್ಯ. ಹಾಸನದಲ್ಲಿ ಇವರು ಕೆರೆ ಕಟ್ಟಿಸಿದ್ದಾರೆ, ಪುಸ್ತಕ ಬರೆದಿದ್ದಾರೆ, ಸಿನಿಮಾ ಡೈರೆಕ್ಷನ್ನಿಗೂ ಕೈಹಾಕಿದ್ದಾರೆ. ಚೂಡ್ ತ ನಾಯಕ, ನೀರಾವರಿ ತಜ್ಞ ಎಂದೆಲ್ಲಾ ಟೀವಿ ಮೆರಾಗಳ ಮುಂದೆ ಕೂತು ಪೆದ್ದುಪೆದ್ದಾಗಿ ಮಾತಾಡುತ್ತಿದ್ದದ್ದನ್ನು ಕಂಡವರೆಲ್ಲ ನಕ್ಕಿದ್ದೇ ಬಂತು.


ಚೂಡನ ಕಂತ್ರಿ ಬುದ್ಧಿ ಗೊತ್ತಾಗಲು ಶೃತಿಗೆ ಹೆಚ್ಚು ಮಯವೇನೂ ಹಿಡಿಯಲಿಲ್ಲ. ಸಿಕ್ಕವರಿಗೆಲ್ಲ ಯಾಮಾರಿಸಿ ಬಿ ಕೀಳುತ್ತಿದ್ದ ಚೂಡ ಯಾರಿಗೆಲ್ಲ ಚೆಕ್ಕು ಕೊಟ್ಟು ದುಡ್ಡು ಕಿತ್ತಿದ್ದನೋ ಅಂಥ ಹತ್ತಾರು ಚೆಕ್ ಬೌನ್ಸ್ ಕೇಸುಗಳ ವಾರೆಂಟ್ ಹಿಡಿದು ಪೊಲೀಸರು ಶೃತಿಯ ಬಸವೇಶ್ವರ ನಗರದ ಮನೆಗೆ ಮುಗಿಬಿದ್ದರು. ಚೂಡನನ್ನು ಹಿಡಿದೊಯ್ಯಲು ಶೃತಿ ಮನೆಬಾಗಿಲು ಬಡಿಯುತ್ತಿದ್ದ ಪೊಲೀಸರಿಗೆ ಉತ್ತರ ನೀಡುವುದೇ ಆಕೆಗೆ ದೊಡ್ಡ ತಲೆನೋವಾಯಿತು. ಏನಿದೆಲ್ಲಾ ಎಂದು ಕೇಳಿದರೆ 'ಎಲ್ಲಾ ಇದ್ದ ಸುಳ್ಳು, ನಾನು ಸಿನಿಮಾ ನಟಿ ಮದುವೆಯಾಗೋದು ವರಿಗೆಲ್ಲ ಹೊಟ್ಟೆ ಕಿಚ್ಚು, ಅದಕ್ಕೇ ಸುಳ್ಳು ಕೇಸು ಹಾಕ್ತಿದ್ದಾರೆ' ಎಂದು ಬಂಡಲ್ ಬಿಟ್ಟ.

ಒಡವೆ ಕಳ್ಳ

ಇನ್ನೂ ಅಸಹ್ಯವೆಂದರೆ ಚೂಡ ಶೃತಿ ತುಂಬಾ ಕಷ್ಟದಲ್ಲಿದ್ದಾರೆ. ಶಿರಡಿಗೆ ಹೋಗೋದಕ್ಕೂ ಕಾಸಿಲ್ಲ, ಊಟಕ್ಕೂ ಕಷ್ಟವಾಗಿದೆ ಎಂದು ಸಿಕ್ಕಸಿಕ್ಕವರಿಂದ ಶೃತಿ ಸರಲ್ಲಿ ದುಡ್ಡು ಕಿತ್ತಿದ್ದ. ಇದನ್ನು ಕೇಳಿಯೇ ಆತನ ಬಗ್ಗೆ ಅಸಹ್ಯ ಹುಟ್ಟಿತ್ತು, ನಾನೇ ಡೈರೆಕ್ಟರು ಎಂದು ಆನೇಕಲ್ ಬಾಲರಾಜ್ ದುಡ್ಡಲ್ಲಿ ತೆಗೆದ 'ಜನ್ಮ' ಮೊದಲನೇ ದಿನಕ್ಕೇ ಟರುಗಳಿಂದ ಎತ್ತಂಗಡಿಯಾಗಿತ್ತು, ತೆಗೆದ ಸಿನಿಮಾ ಡಬ್ಬಿಗೆ ಸೇರಿದ್ದೂ ಅಲ್ಲದೆ ಆನೇಕಲ್ ಬಾಲರಾಜ್‌ಗೆ ಬರೋಬ್ಬರಿ ಐವತ್ತು ಲಕ್ಷಕ್ಕೆ ಚೂಡ ಟೋಪಿ ಹಾಕಿದ್ದ. ನೇಕಲ್ ಬಾಲರಾಜ್ ಹುಡುಗರು ಚೂಡನನ್ನು ಹಿಡಿದೊಯ್ದು ಬಟ್ಟೆ ಬಿಚ್ಚಿ ಹೊಡೆದರೂ ಮುಂಡಾಯಿಸಿದ ಲಕ್ಷಕ್ಕೆ ಲೆಕ್ಕ ಕೊಡಲಿಲ್ಲ. ಏನಯ್ಯ ಮಾಡ್ದೆ ಅಷ್ಟೊಂದು ದುಡ್ಡು ಎಂದರೆ 'ಎಲ್ಲಾ ಶೃತಿ ಬಳಿ ಇದೆ' ಎಂದು ಚೂಡ ತಪ್ಪಿಸಿಕೊಂಡಿದ್ದ.

ಪಾಪ, ಶೃತಿ ತಾನೇ ಆನೇಕಲ್ ಬಾಲರಾಜ್‌ಗೆ ಎಲ್ಲಿಂದ ಲಕ್ಷ ಕೊಟ್ಟಾರು. ವಸೂಲಿಗೆ ಬಂದ ಆನೇಕಲ್ ಬಾಲರಾಜ್‌ಗೆ ಎಂಥಾ ಅಚ್ಚರಿ ಕಾದಿತ್ತೆಂದರೆ; ತನ್ನ ಚಿನ್ನದ ಒಡವೆಗಳನ್ನೆಲ್ಲ ಚೂಡ ಕದ್ದೊಯ್ದು ಮಾರ್ವಾಡಿಗಳ ಬಳಿ ಇಟ್ಟಿದ್ದ ರಶೀದಿಗಳನ್ನೇ ಶೃತಿ ತೋರಿಸಿ ಕಣ್ಣೀರಿಟ್ಟಿದ್ದರು!

8ನೇ ಪುಟಕ್ಕೆ




ಚೂಡಾನ ಆತ್ಮಹತ್ಯೆ ನಾಟಕ ಮತ್ತು ವಿಕೃತ ಮಂಗಾಟ

ಬೆಡ್‌ರೂಂ ಗೂಢಚಾರಿಕೆ ಮತ್ತು ಆ್ಯಸಿಡ್ ಬೆದರಿಕೆ...!

2013 ರ ಜೂನ್‌ನಲ್ಲಿ ಅಂದರೆ ಕೊಲ್ಲೂರು ಮೂಕಾಂಬಿಕೆ ಸನ್ನಿಧಿಯಲ್ಲಿ ಮದುವೆಯಾದ ಕ್ಷಣದಿಂದಲೇ ಚೂಡನ ಕಳ್ಳಾಟ ಬಯಲಾಗಿತ್ತು, ಬೆಂಗಳೂರಿಗೆ ಬಂದು ಚೂಡನನ್ನು ಮನೆಯೊಳಕ್ಕೂ ಬರಗೊಡದೆ ಶೃತಿ 'ಮೊದಲು ಡೈವೋರ್ಸ್ ಪೇಪರ್ಸ್ ತಂದು ಮಡಗು. ಆನಂತರವೇ ಮುಂದಿನ ಮಾತು' ಎಂದಿದ್ದಾರೆ.

ಡೈವೋರ್ಸ್ ಆಗಿದೆ, ಇಂಟರ್‌ನೆಟ್‌ಗೆ ಹೋಗ್ಗಿ ಯಾವುದೋ ವೆಬ್‌ಸೈಟನ್ನು ತೆರೆದು ಇಂತಿಂಥಾ ಪಾಸ್‌ವರ್ಡ್ ಹೊಡೆದು ಯಾವ್ಯಾವುದೋ ಮೇಲ್ ತೆರೆದು ನೋಡಿ ಎಂದು ಶೃತಿ ಸಹಾಯಕರನ್ನು ದಿಕ್ಕುತಪ್ಪಿಸಿದ ಚೂಡನ ವಂಚನೆ ಆತನ ಮಾತಿನಲ್ಲೇ ಬಯಲಾಗಿತ್ತು. ವೆಬ್‌ಸೈಟ್ ಹಾಳಾಗಲಿ ನಿನ್ನ ಬಳಿ ಅದರ ಪ್ರತಿ ಇರಬೇಕಲ್ವ. ಅದನ್ನು ತಗೊಂಡು ಬಾ ಎಂದು ಶೃತಿ ವಕೀಲರು ಹೇಳಿದ್ದಕ್ಕೆ ಚೂಡ ಮತ್ತೊಂದು ಕಳ್ಳಾಟ ನಡೆಸಿಬಿಟ್ಟ. ಆತುರಾತುರವಾಗಿ ಬೆನ್ನಿಗೆ ಬ್ಯಾಗ್ ಒಂದನ್ನು



ಸಿಸಿಟೀವಿ ಕ್ಯಾಮೆರಾಗಳಲ್ಲಿ ಚೂಡನ ಕಳ್ಳಾಟ ದಾಖಲು

ನೇತಾಕಿಕೊಂಡು ಬಂದಿದ್ದೇ ಅದರ ತುಂಬ ತುಂಬಿದ್ದ ಯಾವ್ಯಾವುದೋ ಪುಸ್ತಕ, ಫೈಲು, ಜೆರಾಕ್ಸ್ ಪ್ರತಿಗಳ ರಾಶಿಯನ್ನೇ ಕೋಣೆಯ ತುಂಬ ಸುರಿದು ಏನೇನೋ ಹುಡುಕುವಂತೆ ಚಿತ್ರವಿಚಿತ್ರವಾಗಿ ಕೆದಕಲಾರಂಭಿಸಿದ್ದ.

ಅಲ್ಲಿಗೆ ವಕೀಲರಿಗೆ ಚೂಡನ ಕಳ್ಳಾಟ ಅರ್ಥವಾಗಿತ್ತು. ಇವನು ಪಕ್ಕಾ ಹರಾಮಿ. ಈತನನ್ನೇನಾದ್ರೂ ನಂಬಿದೆ ಅಂದ್ರೆ ಆತನ ಜೊತೆ ನೀವೂ ಜೈಲು ಪಾಲಾಗೋದು ಗ್ಯಾರಂಟಿ ಎಂದುಬಿಟ್ಟರು. ಅದೇ ಹೊತ್ತಿಗೆ ಮೊದಲ ಪತ್ನಿ ಮಂಜುಳಾ ಕೋರ್ಟ್ ಮೊರೆಹೊಕ್ಕು ಶೃತಿ-ಚೂಡ್ ಮದುವೆಯನ್ನೇ ಅಸಿಂಧುಗೊಳಿಸುವಂತೆ ಕ್ರಮ ಜರುಗಿಸಿದ್ದಾಗಿತ್ತು, ಮೂರ್‍ನಾಲ್ಕು ತಿಂಗಳಲ್ಲೇ ಮದುವೆಯೂ ರದ್ದಾಯಿತು. ಇದಕ್ಕೂ ಮುನ್ನ ಶೃತಿ ನಾನೂ ಒಬ್ಬ ಹೆಣ್ಣಾಗಿ ಇನ್ನೊಬ್ಬ ಹೆಣ್ಣಿನ ಸಂಸಾರ ಹಾಳು ಮಾಡುವ ಕೃತ್ಯಕ್ಕೆ ಕೈಹಾಕಲಾರೆ ಎಂದು ಬಹಿರಂಗವಾಗಿಯೇ ಘೋಷಿಸಿಬಿಟ್ಟರು.

ಅದು ಪರೋಕ್ಷವಾಗಿ ಚಂದ್ರಚೂಡನನ್ನು ಶೃತಿ ಕೈಬಿಟ್ಟಿದ್ದರ ಸ್ಪಷ್ಟ ನಿರ್ಧಾರವಾಗಿತ್ತು, ಈ ಹೊತ್ತಿಗಾಗಲೇ ಚೂಡ ಶೃತಿಯ ಏಳೆಂಟು ಲಕ್ಷ ರೂಪಾಯಿಗಳಷ್ಟು ಬೆಲೆಬಾಳುವ ಒಡವೆಗಳನ್ನೊಯ್ದು ಗಿರವಿಗಿಟ್ಟಿದ್ದ. ಬೇಕೆಂದಾಗೆಲ್ಲ ಯಾರ್‍ಯಾರದೋ ಹೆಸರಲ್ಲಿ ದುಡ್ಡು ಕೀಳುತ್ತಿದ್ದ. ತಾನು ಶೃತಿ ಗಂಡ ಎಂದೇ ಯಾರ್‍ಯಾರಿಂದಲೋ ದುಡ್ಡು ಕಿತ್ತಿದ್ದ. ಯಾವತ್ತು ಶೃತಿ ತನಗೆ ದಕ್ಕುವುದಿಲ್ಲ ಎಂಬುದು ಖಾತರಿಯಾಯ್ತೋ ಬ್ಲಾಕ್‌ಮೇಲ್ ಮಾಡಿ, ಬೆದರಿಕೆ ಹಾಕಿಯಾದರೂ ಶೃತಿ ತನ್ನ ಅಡಿಯಾಳಾಗುವಂತೆ ಮಾಡಿಕೊಳ್ಳುವ ದುರಾಶೆಗೆ ಬಿದ್ದ.

ಇದಕ್ಕೆ ಚೂಡ ಬಳಸಿಕೊಂಡಿದ್ದು ಶೃತಿ ಮನೆ ಕೆಲಸದ ಹೆಂಗಸು ಶೋಭಾಳನ್ನು. ಶೋಭಾಳಿಗೆ ಚೂಡನೇ ಮೊಬೈಲೊಂದನ್ನು ಕೊಡಿಸಿಕೊಟ್ಟು ಒಂದಷ್ಟು ಕಾಸನ್ನೂ ಕೊಟ್ಟ. ಈಕೆಯ ಮೂಲಕ ಮುನಿಯ ಎಂಬ ಶೃತಿ ಮನೆ ಕೆಲಸದ ಹುಡುಗನನ್ನೂ ಬುಟ್ಟಿಗೆ ಹಾಕಿಕೊಂಡ. ಅದೇ ಹೊತ್ತಿಗೆ ಚುನಾವಣೆ ಇತ್ತಾದ್ದರಿಂದ ಶೃತಿ ಸತೀಶ್ ಎಂಬ ಹುಡುಗನನ್ನು ತಮ್ಮ ಸಹಾಯಕನನ್ನಾಗಿ ನೇಮಿಸಿಕೊಂಡರು. ಅದು ಚೂಡನ ಹೊಟ್ಟೆಗೆ ಖಾರ ಕಲಿಸಿದಂತಾಯ್ತು, ತಿಂಗಳು ಪೂರ್ತಿ ಕರ್ನಾಟಕದ ಬೇರೆಬೇರೆ ಕಡೆ ಚುನಾವಣಾ ಪ್ರಚಾರದಲ್ಲಿದ್ದ ಶೃತಿ ಜೊತೆಗೆ ಮತ್ತೊಬ್ಬ ಸಹಾಯಕನಾಗಿ ಹೇಮಂತ್ ಕೂಡ ಇದ್ದ.

ಇತ್ತ ಚೂಡಾಚಾರಿ ಮನೆ ಕೆಲಸದ ಶೋಭಾಳನ್ನು ತನ್ನ ರೂಮಿಗೆ ಕರೆಸಿಕೊಂಡು ಮನೆಗೆ ಯಾರ್‍ಯಾರು ಬರುತ್ತಾರೆ, ಏನು ಮಾಡುತ್ತಾರೆ ಎಂದೆಲ್ಲ ಮಾಹಿತಿ ಪಡೆಯುತ್ತಿದ್ದ. ಚುನಾವಣಾ ಪ್ರಚಾರ ಮುಗಿಸಿ ವಾಪಸ್ಸು ಮನೆ ಸೇರಿಕೊಂಡ ಶೃತಿಗೆ ಚೂಡನೇ ದೊಡ್ಡ ತಲೆನೋವಾದ. ಇವತ್ತು ಇಂಥದ್ದೇ ಡ್ರೆಸ್ ಹಾಕಿದ್ದೀಯ, ಇಂಥಿಂಥಲ್ಲಿಗೇ ಹೋಗಿದ್ದೀಯ, ಇಂಥವರ ಜೊತೆಗೇ ಮಾತಾಡಿದ್ದೀಯ ಎಂದು ಶೃತಿ ಮೊಬೈಲಿಗೆ ಚೂಡನ ಮೆಸೇಜು ಬರತೊಡಗಿದೆ.

ಒಂದೆರಡು ಬಾರಿ ನಿಷ್ಠುರವಾಗೇ ವಾರ್ನ್ ಮಾಡಿದ್ದಾರೆ ಶೃತಿ. ಇದಾಗಿ ವಾರಕ್ಕೇ ಎಂಥಾ ಅಚ್ಚರಿಯೆಂದರೆ ಶೃತಿ ಮನೆ ಎದುರಿಗೇ ಖಾಲಿ ಬಿದ್ದಿದ್ದ ಮನೆಯೊಂದಕ್ಕೆ ಚೂಡ ವಕ್ಕರಿಸಿದ್ದ. ಸಂಜೆಯಾದರೆ ಸಾಕು ಗುಂಡು ಪಾರ್ಟಿ. ಲೋಕಲ್ ಪೋರ್ಕಿಗಳನ್ನು ಗುಡ್ಡೆ ಹಾಕಿಕೊಂಡು ಶೃತಿ ಮನೆಯೆದುರೇ ಸಿಗರೇಟು ಸೇದುವುದು, ಕೇಕೆ ಹಾಕುವುದು ಶುರುಹಚ್ಚಿಕೊಂಡ.

ಇದ್ಯಾವುದಕ್ಕೂ ಕೇರ್ ಮಾಡದ ಶೃತಿಗೆ ಚೂಡ ಮತ್ತೊಂದು ಗಿಮ್ಮಿಕ್ ಮಾಡಿದ್ದು ಏಪ್ರಿಲ್ ಎರಡನೇ ವಾರದಲ್ಲಿ. ವಿರಹ ವೇದನೆಯಲ್ಲಿ ತಾನು ಶೃತಿಗಾಗಿ ಆತ್ಮಹತ್ಯೆಗೆ ಯತ್ನಿಸಿದಂತೆ, ತನ್ನನ್ನು ಆಸ್ಪತ್ರೆಗೆ ದಾಖಲಿಸಿದಂತೆ, ಅಲ್ಲಿ ಗ್ಲುಕೋಸ್ ಚುಚ್ಚಿದಂತೆ ಫೋಟೋ ಒಂದನ್ನು ಸೃಷ್ಟಿಸಿ ಅದನ್ನು ಶೃತಿ ಮೊಬೈಲಿಗೆ ರವಾನಿಸಿದ್ದ. ಕಳ್ಳಾಟ ಗೊತ್ತಿದ್ದ ಶೃತಿ ಇದ್ಯಾವುದಕ್ಕೂ ಸೊಪ್ಪು ಹಾಕಲಿಲ್ಲ.

ತಮಾಷೆಯೆಂದರೆ ಶೃತಿ ಚೂಡನ ಕಾಟಕ್ಕೆ ಹೆದರಿಕೊಂಡು ತನ್ನ ಮನೆಗೆ ಬರುವುದನ್ನೇ ನಿಲ್ಲಿಸಿ ತಮ್ಮ ಶರಣ್‌ನ ಮನೆ ಸೇರಿಕೊಂಡಾಗಿತ್ತು, ಅದು ಗೊತ್ತಿಲ್ಲದೆ ಚೂಡ ಶೃತಿ ತನಗೆ ಹೆದರಿಕೊಂಡೇ ಸಂಜೆ ಹೊತ್ತು ಮನೆಯ ಲೈಟ್ ಆರಿಸುತ್ತಿದ್ದಾರೆಂದು ನಂಬಿಕೊಂಡ. ಸಂಜೆಯಾದರೆ ಸಾಕು ತನ್ನ ಪೋಲಿ ಪಟಾಲಂ ಸೇರಿಸಿಕೊಂಡು ಶೃತಿ ಮನೆ ಮುಂದೆ ಅಡ್ಡೆ ಹಾಕುತ್ತಿದ್ದ. ಕಂಠಮಟ್ಟ ಕುಡಿದದ್ದೇ ಕೆಲಸದವರನ್ನು ಹೆದರಿಸುತ್ತಿದ್ದ. ಬರುಬರುತ್ತ ಆತನ ವಿಕೃತಿ ಯಾವ ಹಂತ ಮುಟ್ಟಿತೆಂದರೆ ನಡುರಾತ್ರಿಯಲ್ಲಿ ಕಳ್ಳನಂತೆ ಬೆಡ್‌ಶೀಟ್ ಹೊದ್ದುಕೊಂಡು ಶೃತಿ ಮನೆ ಕಾಂಪೌಂಡ್ ಹಾರಿದ್ದೇ ಒಳಕ್ಕೆ ಬರುತ್ತಿದ್ದ. ಕಿಟಕಿಯಿಂದ ಕೈಹಾಕುವುದು, ಬಾಗಿಲು ಸಂದಿಯಲ್ಲಿ ಇಣುಕುವುದು, ಒಳಗೇನಾದರೂ ಶೃತಿ ಯಾರ ಜೊತೆಗೋ ಮಾತಾಡುತ್ತಿರಬಹುದೇ ಎಂದು ಪಕ್ಕಾ ವಿಲ್ಲನ್‌ನಂತೆ ಕಿವಿಗೊಡುವುದು, ಎಲ್ಲಿಂದಲೋ ನಿಂಬೆ ಹಣ್ಣು ಮಂತ್ರಿಸಿ ಕಿಟಕಿಗೆ ಕಟ್ಟುವುದು, ಮಂತ್ರಿಸಿದ ಭಸ್ಮವನ್ನು ಬಾಗಿಲಿಗೆರಚುವುದು ಮಾಡುತ್ತಿದ್ದ.

ಚೂಡ ಎಂಥಾ ಕಮಂಗಿಯೆಂದರೆ ತನ್ನ ಈ ಕಳ್ಳಾಟವೆಲ್ಲ ಶೃತಿ ಮನೆಯ ಸೀಸಿಟೀವಿ ಕ್ಯಾಮೆರಾಗಳಲ್ಲಿ ದಾಖಲಾಗುತ್ತಿದೆ ಎಂಬುದನ್ನೇ ಮರೆತುಬಿಟ್ಟಿದ್ದ!

ತನ್ನ ಮನೆಯ ವಿಷಯಗಳೆಲ್ಲ ಹೇಗೆ ಚೂಡನಿಗೆ ಗೊತ್ತಾಗಲು ಸಾಧ್ಯ ಎಂದು ತಲೆ ಕೆಡಿಸಿಕೊಂಡ ಶೃತಿಗೆ ಇದು ಶೋಭಾಳದ್ದೇ ಕೆಲಸ ಎಂದು ಗೊತ್ತಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಶೋಭಾಳನ್ನು ಹಿಂಬಾಲಿಸಿಕೊಂಡು ಹೋದ ಶೃತಿಯ ಕೆಲಸದವರಿಗೆ ಆಕೆ ಮನೆ ಕಸವನ್ನೆಲ್ಲ ಚೂಡನ ರೂಮಿಗೊಯ್ಯುತ್ತಿದ್ದದ್ದು ಶೃತಿ ಮನೆ ಕೆಲಸ ಮುಗಿಸಿದ್ದೇ ಆಕೆ ನೇರವಾಗಿ ಚೂಡನ ರೂಮು ಸೇರಿಕೊಳ್ಳುತ್ತಿದ್ದದ್ದು ಸ್ಪಷ್ಟವಾಗಿದೆ.

ಇಷ್ಟಾಗಿದ್ದೇ ಮೇ 1 ರಂದು ಶೋಭಾ ಬರುವುದನ್ನೇ ಕಾದ ಶೃತಿ ಆಕೆಯ ಮೊಬೈಲನ್ನು ಚೆಕ್ ಮಾಡಿದರೆ ಇದ್ದ ಇನ್‌ಕಮಿಂಗ್ ಮತ್ತು ಔಟ್ ಗೋಯಿಂಗ್ ಕರೆಗಳೆಲ್ಲ ಚಂದ್ರಾಚಾರಿಯದ್ದೇ ಆಗಿತ್ತು, ನನ್ನ ಅನ್ನ ತಿಂದು ನನಗೇ ದ್ರೋಹ ಮಾಡ್ತಿಯಲ್ಲೇ ಎಂದು ಆವತ್ತೇ ಆಕೆಯನ್ನು ಹೊರಹಾಕಿದ್ದಾರೆ. ಮುನಿಯ ಕೂಡ ತಪ್ಪು ಒಪ್ಪಿಕೊಂಡು ಚೂಡನ ಕಿತಾಪತಿಯ ಕತೆ ಹೇಳಿಬಿಟ್ಟ. ಅಲ್ಲಿಗೆ ಚೂಡನ ದುರುಳತನ ಪೂರ್ತಿ ಬಯಲಾಗಿತ್ತು.

ಚೂಡಾಚಾರಿಯ ಕಳ್ಳಾಟ

7ನೇ ಪುಟದಿಂದ

ಶೃತಿ ಮನೆಯಲ್ಲಿ ಶೋಭಾಳ ಮಗಳ ಬರ್ತ್‌ಡೇ



ಇಷ್ಟಾಗ್ಯೂ ಆಳದಲ್ಲೆಲ್ಲೋ ಕ್ಷೀಣ ಭರವಸೆಯಿನ್ನೂ ಶೃತಿಗಿತ್ತು. ಮನುಷ್ಯ ಕಷ್ಟದಲ್ಲಿದ್ದಾನೆಂಬ ಒಂದೇ ಕಾರಣಕ್ಕೆ ಆತನನ್ನು ಕೀಳಾಗಿ ಕಾಣಬಾರದು ಎಂದೇ ಚೂಡನ ಕಳ್ಳಾಟಗಳನ್ನು ಸಹಿಸಿಕೊಂಡಿದ್ದರು. ಅಧಿಕೃತವಾಗಿ ಮದುವೆಯಾಗದೆ ತನ್ನ ಮನೆಯಲ್ಲಿ ತಂಗುವುದು ಬೇಡ ಎಂತಲೂ ಅಂತರಕಾಯ್ದುಕೊಂಡೇ ಇದ್ದ ಶೃತಿ ಈ ಮಧ್ಯೆ ತಮಿಳು ಸೀರಿಯಲ್ ಒಂದರಲ್ಲಿ ಬಿಜಿಯಾದರು. ಅಲ್ಲಿಯ ತನಕ ಶೃತಿ ಹೆಸರಲ್ಲೇ ರೋಲ್‌ಕಾಲ್, ವಸೂಲಿ, ಉಪಜೀವನ ನಡೆಸಿಕೊಂಡಿದ್ದ ಚೂಡನಿಗೆ ಬಹುಶಃ ಶಾಶ್ವತವಾಗಿ ಶೃತಿ ತನ್ನ ಕೈತಪ್ಪಿ ಹೋಗಬಹುದೆಂಬ ಭೀತಿ ಕಾಡಿರಬೇಕು. ಅದು 2013ರ ಜೂನ್ ತಿಂಗಳು. ಇದ್ದಕ್ಕಿದ್ದಂತೆ ಮದುವೆ ಪ್ರಸ್ತಾಪ ಮಾಡಿಬಿಟ್ಟ-

ಬಹುಶಃ ಶೃತಿಗೂ ಅದು ಅನಿವಾರ್ಯವೆಂಬ ಸನ್ನಿವೇಶವನ್ನು ಈತನೇ ಸೃಷ್ಟಿಸಿದ್ದ!

ಜೂನ್ 5ಕ್ಕೆ ಚಿಕ್ಕಮಗಳೂರು ಕಾಡಿನ ಬಾಣಿಗದ ದೇವಸ್ಥಾನದಲ್ಲಿ ಎಲ್ಲಾ ತಯಾರಿ ಮಾಡಿದ್ದೇನೆ. ಮುಹೂರ್ತ ಚೆನ್ನಾಗಿದೆ. ಬಂದು ಬಿಡು. ಇಂಥ ಗಳಿಗೆ ಮತ್ಯಾವತ್ತೂ ಬರೋಲ್ಲ. ಜಾತಕ ಕೂಡಿ ಬಂದಿದೆ. ಅವತ್ತೇ ಮದುವೆಯಾದ್ರೆ ನನ್ನ ಮತ್ತು ನಿನ್ನ ಪಾಲಿನ ದುರ್ದೆಶೆ ಕಳೆದು ಗುರುಬಲ ಕೂಡಿ ಬರುತ್ತದೆ ಎಂದು ಜ್ಯೋತಿಷಿಗಳು ಹೇಳಿದ್ದಾರೆ, ಅವತ್ತೇ ಮಗಳು ಗೌರಿಯ ಬರ್ತ್‌ಡೆ ಬೇರೆ ಇದೆಯಾದ್ದರಿಂದ ಅದೇ ನಮ್ಮ ಪಾಲಿಗೆ ಗಾಡ್ ಗಿಫ್ಟು... ಎಂದು ಚೂಡ ರೈಲು ಬಿಟ್ಟಿದ್ದನ್ನು ಶೃತಿ ನಂಬಿಬಿಟ್ಟರು.

ಬಾಣಿಗದಲ್ಲಿ ಒದೆ

ರಾತ್ರೋರಾತ್ರಿ ತಮಿಳುನಾಡಿನಿಂದ ಬಂದು ಎನ್ಆರ್‌ಪುರದ ಕಾಡಿನ ಬಾಣಿಗ ದೇವಸ್ಥಾನ ತಲುಪಿದರೆ ಅಲ್ಲಿ ಶೃತಿಯ ಮುಖ ಕಂಡಿದ್ದೇ ಊರಿನ ಜನ ರೊಚ್ಚಿಗೆದ್ದು 'ಇಂಥ ಕೇಡಿ ನನ ಮಗನ ಜೊತೆ ಮದುವೆಯಾಗೋಕೆ ನಮ್ಮೂರೇ ಬೇಕಿತ್ತಾ...' ಎಂದಿದ್ದೇ ಚೂಡನನ್ನು ಅಟ್ಟಾಡಿಸಿ ಹೊಡೆದಿದ್ದರು. ಇಡೀ ಮದುವೆ ರಹಸ್ಯವಾಗೇ ನಡೆಯಲಿದೆ ಎಂದು ಚೂಡ ಶೃತಿಯನ್ನು ನಂಬಿಸಿದ್ದ. ಅಸಹ್ಯವೆಂದರೆ ತಾನೇ ಟೀವಿಗಳಿಗೆ ಫೋನ್ ಮಾಡಿ ನಟಿ ಶೃತಿ ಇಂಥಲ್ಲೇ ಮದುವೆಯಾಗುತ್ತಿದ್ದಾರೆ ಎಂದು ಪುಕಾರೆಬ್ಬಿಸಿದ್ದ. ಸದ್ದಿಲ್ಲದೆ ಮದುವೆಯಾಗುವ ಉದ್ದೇಶವಿಟ್ಟೇ ಬಾಣಿಗಕ್ಕೆ ಬಂದಿದ್ದ ಶೃತಿಗೆ ಮೀಡಿಯಾಗಳಲ್ಲಿ ಸುದ್ದಿಯಾಗಿದ್ದು ಆಘಾತವಾಗಿ ಅಪ್ಪಳಿಸಿತ್ತು, ಕೇಳಿದ್ದಕ್ಕೆ 'ನಾನಲ್ಲ, ಆಗದವರು ಸುದ್ದಿ ಹಬ್ಬಿಸಿದ್ದಾರೆಂದು' ಬಂಡಲ್ ಬಿಟ್ಟ.

ಬಾಣಿಗರ ಗ್ರಾಮಸ್ಥರೇ ತಿರುಗಿ ಬಿದ್ದ ಮೇಲೆ ಇನ್ನು ಇಲ್ಲೇ ಇದ್ದರೆ ಜನರೇ ಹಣ್ಣುಗಾಯಿ ಹೊಡೆದಾರೆಂದು ಎದ್ದೂ ಬಿದ್ದು ಓಡಿಬಂದ ಚಂದ್ರಾಚಾರಿ ದಿಕ್ಕಾಪಾಲಾಗಿ ಕಾರು ಓಡಾಡಿಸಿದ್ದ, ಚೂಡ ಓಡಿಸುತ್ತಿದ್ದ ಕಾರಲ್ಲಿ ಶೃತಿ, ಚೂಡನ ತಾಯಿ ಸುಶೀಲಮ್ಮ ಮತ್ತು ಮಲತಂದೆ ಬಸವರಾಜು ಕೂತಿದ್ದರೆ, ಹಿಂಬಾಲಿಸುತ್ತಿದ್ದ ಕಾರಿನಲ್ಲಿ ಶೃತಿ ಕೆಲಸದಾಳುಗಳು ಲಗೇಜ್ ಹೊತ್ತು ಬರುತ್ತಿದ್ದರು. ಕೊಲ್ಲೂರಿಗೆ ಹೋಗುತ್ತಿದ್ದ ದಾರಿಯದು. ಮಾರ್ಗಮಧ್ಯೆ ಮೂತ್ರ ವಿಸರ್ಜನೆಗೆಂದು ಕಾರು ನಿಲ್ಲಿಸಿದ ಚೂಡ ರಸ್ತೆ ಬದಿಯ ಕತ್ತಲಿನತ್ತ ಹೋಗಿದ್ದಾನೆ. ಆತ ಇಲ್ಲದ್ದನ್ನೇ ಕಾದಿದ್ದ ಆತನ ತಾಯಿ ಸುಶೀಲಮ್ಮ ಇದ್ದಕ್ಕಿದ್ದಂತೆ 'ಶೃತಿ ಅಮ್ಮಾ ಇದೇನಮ್ಮಾ ಇಷ್ಟೊಂದು ಅರ್ಜೆಂಟಾಗಿ ಇಂಥಾ ನಿರ್ಧಾರಕ್ಕೆ ಬಂದು ಬಿಟ್ರಿ? ಸ್ವಲ್ಪ ತಾಳ್ಮೆ ತಗೋಬಹುದಿತ್ತಲ್ಲಾ? ಮಂಜುಳಾ ಜೊತೆ ಈತ ಡೈವೋರ್ಸ್ ತಗೊಂಡಿರೋದನ್ನ ಕನ್‌ಫರ್ಮ್ ಮಾಡಿಕೊಂಡ್ರಾ? ಯಾರು ಹೇಳಿದ್ದು ನಿಮಗೆ, ಮಂಜುಳಾ ಜೊತೆ ಡೈವೋರ್ಸ್ ಆಗಿದೆ ಅಂತಾ. ಇವನು ಹೇಳೋದೆಲ್ಲಾ ಶುದ್ಧ ಸುಳ್ಳು....' ಎಂದುಬಿಟ್ಟರು.

ಶೃತಿಗೆ ಅಪಾಯದ ಮುನ್ಸೂಚನೆಯಾಗಿದೆ. ವಾಪಸ್ಸು ಕಾರು ಹತ್ತಿದ ಚೂಡನನ್ನು ಕ್ಷಣ ಕೂಡ ತಾಳದೆ ಕೇಳಿಬಿಟ್ಟರು. ಅಲ್ಲಪ್ಪಾ ಡೈವೋರ್ಸ್ ಆಗಿದೆ ಎಂದ್ಯಲ್ಲ ಎಲ್ಲಿ ಡೈವೋರ್ಸ್ ಪೇಪರ್ಸ್ ತೋರ್‍ಸು ನೋಡಾಣ.... ಎಂದಿದ್ದಾರೆ. ಅಲ್ಲಿಗೆ ಚೂಡನಿಗೆ ಇದು ತನ್ನ ತಾಯಿಯದ್ದೇ 'ಕಡ್ಡಿ' ಎಂಬುದು ಗ್ಯಾರಂಟಿಯಾಗಿದೆ. ಇದ್ದಕ್ಕಿದ್ದಂತೆ ರೌದ್ರಾವತಾರ ತಾಳಿ ಹಿಂದೆ ಕೂತಿದ್ದ ತನ್ನ ತಾಯಿಯನ್ನು ಕೆಕ್ಕರಿಸಿದ್ದೇ 'ಈ ಸೂ... ಮುಂಡೆ ಹೇಳಿಕೊಟ್ಲಾ?" ಎಂದವನೇ ಕಾರಿನಿಂದಿಳಿದು ಹಿಂದೆ ಕೂತಿದ್ದ ತನ್ನ ತಾಯಿಯ ಜುಟ್ಟಿಗೇ ಕೈಹಾಕಿ ದರದರನೆ ಎಳೆದುಬಿಟ್ಟ. ಕೆಳಕ್ಕೆ ಬಿದ್ದ ತಾಯಿಯ ಜುಟ್ಟು ಬಿಡದೇ ಮೇಲಕ್ಕೆತ್ತಿ ತಲೆಯನ್ನು ಕಾರಿಗೆ ಕುಕ್ಕಿಬಿಟ್ಟ. 'ಏನೇ ಸೂ.... ಮುಂಡೆ, ನಿನ್ನ ಜೊತೆ ಕೂತಿದ್ದಾನಲ್ಲ, ಈತ ಇವನೇನು ನನ್ನ ಅಪ್ಪನಾ? ನೀನು ಮಾತ್ರ ಎರಡೆರಡು ಮದುವೆಯಾಗಬಹುದು, ನಾನು ಆಗಬಾರದೇನೇ.... ಎಂದಿದ್ದೇ ತಾಯಿಯನ್ನು ನೆಲಕ್ಕೆ ಹಾಕಿ ತುಳಿದುಬಿಟ್ಟ.

ಏಕಾಏಕಿ ಘಟಿಸಿದ ದಾರುಣಕ್ಕೆ ಕಂಗಾಲಾದ ಶೃತಿ ಧಾವಿಸಿದ್ದೇ ನೆಲಕ್ಕೆ ಬಿದ್ದಿದ್ದ ತಾಯಿಯನ್ನು ಮೇಲಕ್ಕೆತ್ತಿ ಕೂರಿಸಿದ್ದಾರೆ. ಇನ್ನೇನು ಸಮಾಧಾನ ಮಾಡಬೇಕೆನ್ನುವಷ್ಟರಲ್ಲಿ ಚೂಡ ಬಾ ಇಲ್ಲಿ ಎಂದು ಶೃತಿಯನ್ನು ಪಕ್ಕಕ್ಕೆ ಕರೆದೊಯ್ದಿದ್ದೇ ದಬಕ್ಕೆಂದು ಶೃತಿ ಕಾಲಿಗೆ ಬಿದ್ದಿದ್ದಾನೆ. ನೋಡು... ಈ ಒಂದು ಗಳಿಗೆಗಾಗಿ ನಾನು ಇಡೀ ಜನ್ಮ ಕಾದಿದ್ದೇನೆ. ಈಗ ನೀನೇನಾದ್ರೂ ಕೈಕೊಟ್ಟೆ ಅಂದ್ರೆ ಕೇವಲ ನನ್ನ ಮರ್ಯಾದೆಯಷ್ಟೇ ಅಲ್ಲ, ನೀನು ತಲೆ ಎತ್ತಿ ತಿರುಗಾಡೋಕ್ಕಾಗಲ್ಲ, ಎಲ್ಲಾ ಟೀವಿಗಳಲ್ಲಿ ಈ ಬಗ್ಗೇನೇ ನ್ಯೂಸ್ ಬರ್‍ತಾ ಇದೆ. ಇಡೀ ಕರ್ನಾಟಕ ಇದನ್ನು ನೋಡ್ತಾ ಇದೆ. ನನ್ನ ತಾಯಿ ಮಾತನ್ನು ನಂಬ್ತೀಯಲ್ಲಾ; ಅದರ ಬದಲು ಇಲ್ಲೇ ನನ್ನನ್ನು ಕೊಂದು ಬಿಡು ಎಂದು ತನ್ನ ತಲೆಯನ್ನು ಶೃತಿಯ ಎರಡೂ ಪಾದಕ್ಕೆ ಚಚ್ಚಲಾರಂಭಿಸಿದ್ದಾನೆ.

ಕೊಲ್ಲೂರಿನಲ್ಲಿ ರಂಪ

ಒಂದೆಡೆ ಈತ ಪಾದಕ್ಕೆ ತಲೆ ಚಚ್ಚುತ್ತಿದ್ದ ನೋವು, ಮತ್ತೊಂದೆಡೆ ಪೆಟ್ಟು ತಿಂದು ಅಳುತ್ತಿದ್ದ ತಾಯಿಯ ನರಳಿಕೆ, ಇನ್ನೊಂದೆಡೆ ಎಲ್ಲಿ ಜನ ಈ ದೃಶ್ಯ ನೋಡಿ ಇನ್ನೇನು ಅನಾಹುತವಾಗುತ್ತೋ ಎಂಬ ಗಾಬರಿ. ದಿಕ್ಕೇ ತೋಚದಂತಾಗಿ ಶೃತಿ ಚೂಡನನ್ನೂ ಮೇಲಕ್ಕೆತ್ತಿ ಕಾರು ಹತ್ತಿದ್ದಾರೆ. ಗೊತ್ತುಗುರಿ, ಪೂರ್ವತಯಾರಿ ಏನೊಂದೂ ಇಲ್ಲದೆ ಕಾರು ಕೊಲ್ಲೂರಿಗೆ ಬರುವ ಹೊತ್ತಿಗೆ ಬೆಳಿಗ್ಗೆ ಐದಾಗಿತ್ತು, ಅಲ್ಲಿ ಯಾರದೋ ಮನೆಯಲ್ಲಿ ಲಗೇಜ್ ಇಳಿಸಿದ ಚೂಡ ಯಾವೋ ಪೂಜಾರಿಯೊಬ್ಬನಿಗೆ ಕಾಸು ಕೊಟ್ಟು ಹೊತ್ತು ಗೊತ್ತಿಲ್ಲದ ಆತುರಾತುರದ ಮದುವೆಗೆ ವ್ಯವಸ್ಥೆ ಮಾಡಿದ್ದ.

ಬೆಳಗ್ಗೆ ಎಂಟಕ್ಕೆಲ್ಲಾ ಮದುವೆ ಮುಗಿದಾಗಿತ್ತು, ಊರು ಬಿಟ್ಟು ಓಡಿಬಂದ ಜೋಡಿಗಳನ್ನು ಹೀಗೆ ಆತುರಾತುರವಾಗಿ ಮೂಕಾಂಬಿಕಾ ಸನ್ನಿಧಿಯಲ್ಲಿ ತಾಳಿ ಕಟ್ಟಿಸಿ ದುಡ್ಡು ಮಾಡುವ ಪುರೋಹಿತರ ಹಿಂಡೇ ಕೊಲ್ಲೂರಿನಲ್ಲಿದೆ. ಅದು ಗೊತ್ತಿದ್ದೇ ಚೂಡ ರಾತ್ರೋರಾತ್ರಿ ಕೊಲ್ಲೂರಿಗೆ ಬಂದಿದ್ದ. ಮದುವೆಯ ಫೋಟೋ ತನ್ನದೇ ಮೊಬೈಲಿನಲ್ಲಿ ತೆಗೆದು ಟೀವಿಗಳಿಗೆ ಮೇಲ್ ಮಾಡಿಬಿಟ್ಟ. ರಾತ್ರಿ ಗಲಾಟೆಯಾಗಿದ್ದ ಸುದ್ದಿಯ ಬೆನ್ನಲ್ಲೇ ಬೆಳಗ್ಗೆ ಆತುರದ ಮದುವೆಯಾದ ಸುದ್ದಿಯೂ ಬಂದಿತ್ತು, ಇನ್ನು ಕೊಲ್ಲೂರಿನಲ್ಲಿದ್ದರೆ ಇನ್ನೇನು ಅನಾಹುತವಾಗುತ್ತೋ ಎಂದು ಅಲ್ಲಿಂದ ಸಕಲೇಶಪುರದ ದಾರಿ ಹಿಡಿದು ಇಡೀ ತಂಡ ಬೆಂಗಳೂರಿನತ್ತ ಪ್ರಯಾಣ ಬೆಳೆಸಿತ್ತು, ಚೂಡ ತಲೆ ಓಡಿಸಿದ್ದೇ ಶೃತಿಯವರ ಮೊಬೈಲ್ ಕಿತ್ತುಕೊಂಡು ಸ್ವಿಚ್ ಆಫ್ ಮಾಡಿಬಿಟ್ಟ. ಕೇಳಿದ್ದಕ್ಕೆ 'ಟೀವಿಯವರು ಸುಮ್ಮನೆ ತಲೆ ತಿಂತಾರೆ ಸುಮ್ಮನೆ ಕಾಂಟ್ರೋವರ್ಸಿ ಯಾಕೆ....' ಎಂದುಬಿಟ್ಟ. ಆದರೆ ತಾನು ಮಾತ್ರ ನ್ಯೂಸ್ ಚಾನಲ್ಲುಗಳಿಗೆ ಸುದ್ದಿ ಕೊಡುತ್ತಲೇ ಇದ್ದ. ನಾನು ಶೃತಿಯನ್ನು ಮದುವೆಯಾಗಿದ್ದೇನೆ, ಶೃತಿಯವರು ರೆಸ್ಟ್ ತಗೋತಾ ಇದ್ದಾರೆ ಎಂದು ಮೀಡಿಯಾಗಳ ದಿಕ್ಕುತಪ್ಪಿಸಿದ.


ಸಂಜೆಯಾಗಿದ್ದೇ ಹಾಸನ ಸಮೀಪದ ಯಾವುದೋ ರೆಸಾರ್ಟ್‌ಗೆ ಬಂದು ರೂಮು ಮಾಡಿ ಅಲ್ಲಿ ಶೃತಿಯನ್ನು ಇರಿಸಿದ್ದೇ ಚೂಡ ನಾಪತ್ತೆಯಾದ. ಇತ್ತ ರೂಮಿನಲ್ಲಿ ಟೀವಿ ಆನ್ ಮಾಡಿದ್ದ ಶೃತಿಗೆ ಅಚ್ಚರಿ ಕಾದಿತ್ತು, ಚೂಡನ ಪತ್ನಿ ಮಂಜುಳಾ ತನಗೆ ಡೈವೋರ್ಸ್ ಕೊಡದೇ ಮದುವೆಯಾಗಿದ್ದರ ವಿರುದ್ಧ ಪೊಲೀಸರಿಗೆ ದೂರು ನೀಡಿದ ಬಗ್ಗೆ ಎಲ್ಲಾ ಚಾನಲ್‌ಗಳಲ್ಲಿ ಪುಂಖಾನುಪುಂಖ ಸುದ್ದಿ ಬರುತ್ತಿತ್ತು. ಸುದ್ದಿ ಕೇಳಿದ ಶೃತಿಗೆ ಜಂಘಾಬಲವೇ ಉಡುಗಿದಂತಾಯ್ತು, ಸ್ವಿಚ್ ಆಫ್ ಮಾಡಿದ್ದ ಮೊಬೈಲ್ ಆನ್ ಮಾಡಿದರೆ ಬೇರೆಬೇರೆ ನ್ಯೂಸ್ ಚಾನಲ್ ವರದಿಗಾರರ ಡಜನ್ನುಗಟ್ಟಲೇ ಮಿಸ್ಡ್ ಕಾಲುಗಳು-ಮೆಸೇಜುಗಳು!

ದಿಕ್ಕೇ ತೋಚದೆ ಒಂದರಮೇಲೊಂದು ನ್ಯೂಸ್ ಚಾನಲ್‌ಗಳನ್ನು ಹಾಕಿದ ಶೃತಿಗೆ ಮಂಜುಳಾ ವಿರುದ್ಧ ಚೂಡ ವಾಚಾಮಗೋಚರ ಬಯ್ಯುತ್ತಿದ್ದದ್ದು ಕೇಳಿಬಂತು. ರಾತ್ರಿ 12 ರ ಹೊತ್ತಿಗೆ ರೂಮಿಗೆ ವಾಪಸ್ಸಾದ ಚೂಡ ಮಹಾನ್ ತ್ಯಾಗಿಯಂತೆ ಬಂದವನೇ ಹೋಟೆಲಿನ ಪೇಪರ್ ನ್ಯಾಪ್‌ಕಿನ್ನೊಂದರ ಮೇಲೆ ಪೆನ್ನಿಂದ ಏನೇನೋ ಗೀಚಿಬಿಟ್ಟ. ಅದನ್ನು ಆತುರಾತುರವಾಗಿ ಶೃತಿಯ ಕೈಗೆ ತುರುಕಿ ಬೆಡ್‌ಶೀಟನ್ನು ಫ್ಯಾನಿಗೆ ಸಿಕ್ಕಿಸಿದ್ದೇ ಆತ್ಮಹತ್ಯೆಗೆ ನೇಣು ಹಾಕಿಕೊಂಡವನಂತೆ ಹಾರಿಬಿಟ್ಟ. ಚೀಟಿ ತೆರೆದು ಓದಿದರೆ ಅದರಲ್ಲಿ; ನಾನು ಮಹಾಪಾಪಿ, ಯಾವ ತಪ್ಪನ್ನೂ ಮಾಡದ ಶೃತಿಯವರಿಗೆ ನನ್ನಿಂದಾಗಿಯೇ ಅನ್ಯಾಯವಾಗಿದೆ. ನಾನು ಬದುಕಿರಬಾರದು... ಎಂದು ಬರೆದಿದ್ದ.

ಅದೊಂಥರದ ಎಮೋಷನಲ್ ಬ್ಲಾಕ್‌ಮೇಲ್ ಎಂಬ ಬಗ್ಗೆ ಶೃತಿಗೆ ಅನುಮಾನವೇ ಇರಲಿಲ್ಲ, ಟಿಪಾಯಿ ಹತ್ತಿ ಆತ್ಮಹತ್ಯೆಯ ಡ್ರಾಮಾ ಮಾಡುತ್ತಿದ್ದವನನ್ನು ತಾವೇ ಇಳಿಸಿದ್ದಾರೆ. ಇನ್ನು ಇಲ್ಲೇ ಇದ್ದರೆ ಇನ್ನೇನು ಅನಾಹುತವಾಗುತ್ತೋ ಎಂದು ಬೆಂಗಳೂರಿನ ದಾರಿ ಹಿಡಿದಿದ್ದಾರೆ. ಚೂಡ ತನ್ನ ತಂದೆತಾಯಿಗಳನ್ನು ಅವತ್ತೇ ಊರಿಗೆ ಸಾಗಹಾಕಿದ್ದ. ಬೆಂಗಳೂರಿಗೆ ಬಂದ ಶೃತಿ ಗಟ್ಟಿಮನಸ್ಸು ಮಾಡಾಗಿತ್ತು, ಚೂಡ ಮಾಡಿದ ಮೋಸ, ವಂಚನೆ, ನಾಟಕ, ತಾಯಿಯನ್ನೇ ಹಾಕಿ ತುಳಿದ ವಿಕೃತಿ, ಮಲತಂದೆಯ ಎದುರೇ ಅವಮಾನಿಸಿದ ಕ್ರೌರ್ಯ ಎಲ್ಲವೂ ಆತನ ದುರುಳತನಕ್ಕೆ ಪುರಾವೆ ಕಲ್ಪಿಸಿತ್ತು, ಅವತ್ತೇ ಕೊನೆ, ಡೈವೋರ್ಸ್ ಆಗಿದ್ದೇ ನಿಜವಾಗಿದ್ರೆ ಆ ಬಗ್ಗೆ ದಾಖಲೆ ತಗೊಂಡೇ ಮನೆಯೊಳಕ್ಕೆ ಕಾಲಿಡು ಎಂದು ಹೊರಗಟ್ಟಿದ್ದಾರೆ. 2013 ರ ಜೂನ್ 6 ರ ನಂತರ ಹಾಗೆ ಶೃತಿ ಮನೆಯಿಂದ ಹೊರಬಿದ್ದ ಚೂಡಾಚಾರಿ ಆನಂತರ ಮಾಡಿದ ಹಾವಳಿ, ಬ್ಲಾಕ್‌ಮೇಲ್, ಗೂಂಡಾಗಿರಿ, ವಿಕೃತಿಗಳದ್ದೇ ಒಂದು ಪುಸ್ತಕವಾಗುವಷ್ಟಿದೆ (ಬಾಕ್ಸ್ ನೋಡಿ) ಸದ್ಯ ಮನೆ ಕೆಲಸದ ಹೆಂಗಸು ಶೋಭಾಳ ಬ್ಲಾಕ್‌ಮೇಲ್ ವೃತ್ತಾಂತ ಇದರ ಒಂದು ಭಾಗವಷ್ಟೆ.

● ರಾ. ಸೋಮನಾಥ

ಮಗಳು ಚುಕ್ಕಿ ಜೊತೆ ಚೂಡ



ಮಗಳು ಮೈನೆರೆದಳೆಂದೇ ಊರೆಲ್ಲ ದುಡ್ಡೆತ್ತಿದ್ದ

ಚೂಡಾಚಾರಿಯ ಮಿಕ್ಕೆಲ್ಲವನ್ನೂ ಒಂದು ಮಟ್ಟಿಗೆ ಕ್ಷಮಿಸಿಬಿಡುತ್ತಿದ್ದ ಶೃತಿಗೆ ಈ ಒಂದು ಘಟನೆ ಮಾತ್ರ ಅಕ್ಷಮ್ಯ ಮತ್ತು ಅಸಹ್ಯ ಎನ್ನಿಸಿಸಬೇಕು-

ಅದು ತನ್ನ ಮಗಳು ಚುಕ್ಕಿ ಮೈನೆರೆದಳೆಂದು ಚಂದ್ರಾಚಾರಿ ನಡೆಸಿದ ಲಜ್ಜೆಗೇಡಿ ರೋಲ್‌ಕಾಲ್. ಬಹುಶಃ ಪ್ರಪಂಚದ ಯಾವೊಬ್ಬ ತಂದೆಯೂ ಈ ಮಟ್ಟದ ನೀಚತನಕ್ಕೆ ಇಳಿಯಲಾರನೇನೊ!

ಇಲ್ಲಿಗೆ ಮೂರು ತಿಂಗಳ ಹಿಂದೆ ಅದೊಂದು ಮಧ್ಯಾಹ್ನ ಇದ್ದಕ್ಕಿದ್ದಂತೆ ಆಟೋ ಒಂದು ಶೃತಿ ಮನೆಯೆದುರು ಬಂದು ನಿಂತಿದೆ. ಅದರಿಂದ ಇಳಿದ ಎರಡು ಆಕೃತಿಗಳ ಪೈಕಿ ಒಂದು ಗತಿಗೆಟ್ಟು ಬಂದಂತಿದ್ದ ಚಂದ್ರಚಾರಿಯಾದರೆ ಮತ್ತೊಂದು ಆತನ ಮಗಳು ಚುಕ್ಕಿ. ನೇರವಾಗಿ ಶೃತಿಯವರ ಮನೆಯೊಳಕ್ಕೇ ಮಗಳ ಸಮೇತ ನುಗ್ಗಿ ಬಂದ ಚಂದ್ರಾಚಾರಿ ಬಂದುಬಂದವನೇ ಗಳಗಳನೇ ಅತ್ತುಬಿಟ್ಟ. ಚೂಡನ ಐಲಾಟವನ್ನು ಮೊದಲೇ ಅರಿತಿದ್ದ ಶೃತಿಗೆ ಇಷ್ಟರಲ್ಲೇ ವಿಕಟ ದೃಶ್ಯಾವಳಿಯೊಂದು ಏರ್ಪಡುವ ವಾಸನೆ ಹತ್ತಿರಬೇಕು. ಕಾಟಾಚಾರಕ್ಕಾದರೂ ಪಾಪ ಎನ್ನಬೇಕಲ್ಲವೆ; ಯಾಕಪ್ಪಾ ಏನಾಯ್ತು ಎಂದಿದ್ದಾರೆ ಶೃತಿ.

"ಏನಂಥಾ ಹೇಳ್ಲೀ.... ನನ್ನ ಮಗಳು ನಿನ್ನೆಯಷ್ಟೇ ಮೈನೆರೆದಿದ್ದಾಳೆ. ಈ ಪಾಪಿ ತಂದೆಗೆ ಮಗಳ ಯೋಗಕ್ಷೇಮ ವಿಚಾರಿಸುವ ಅದೃಷ್ಟವೂ ಇದ್ದಂತಿಲ್ಲ, ನೀವೇ ನನ್ನ ಮಗಳ ಪಾಲಿಗೆ ನಿಜವಾದ ತಾಯಿ. ಇದೇ ಕೊನೆ. ಇನ್ನೆಂದೂ ನಿಮ್ಮಿಂದ ಬೇರೇನೂ ಕೇಳುವುದಿಲ್ಲ, ಆಗಲ್ಲ ಅನ್ನಬ್ಯಾಡಿ. ನಾನು ಮಾಡಿದ ಪಾಪವನ್ನು ಕ್ಷಮಿಸಿ ನನ್ನ ಮಗಳಿಗೆ ಆಶೀರ್ವಾದ ಮಾಡಿ" ಎಂದು ಮೊಸಳೆ ಕಣ್ಣೀರಿಟ್ಟಿದ್ದಾನೆ ಚೂಡಾಚಾರಿ. ಇಷ್ಟೆನ್ನುತ್ತಿದ್ದಂತೆ ಮಗಳನ್ನು ಶೃತಿ ಕಾಲಿಗೆ ಬೀಳುವಂತೆ ಚೂಡಾ ನೆಲಕ್ಕೆ ಹಾಕಿದ್ದೇ ಅದುಮಿಬಿಟ್ಟಿದ್ದ.

ಪಾಪದ ಮಗಳು ತಾನೇ ಏನು ಮಾಡಿಯಾಳು? ಶೃತಿ ಕಾಲಿಗೆ ಸಾಷ್ಟಾಂಗ ಬಿದ್ದಿದ್ದೇ ಪಿಳಿಪಿಳಿ ನೋಡತೊಡಗಿದ್ದಾಳೆ. ಅದೇನೆನ್ನಿಸಿತೋ ಶೃತಿಗೆ ದೇವರ ಕೋಣೆಯೆದುರು ಮಗುವನ್ನು ನಿಲ್ಲಿಸಿ ಆರತಿಯೆತ್ತಿದ್ದಾರೆ. ಹಣೆಗೆ ಭಂಡಾರ ಹಚ್ಚಿದ್ದೇ ಆಶೀರ್ವದಿಸಿದ್ದಾರೆ. ಮನೆಯಲ್ಲಿದ್ದ ಒಂದಷ್ಟು ಬೆಳ್ಳಿಯ ಒಡವೆಗಳನ್ನೂ, ಹೊಸ ವಸ್ತ್ರ ದೇವರ ಪ್ರಸಾದ ಎಲ್ಲವನ್ನೂ ಹರಿವಾಣದಲ್ಲಿಟ್ಟು ಮಗಳ ಕೈಗಿತ್ತು ಬರೋಬ್ಬರಿ 25 ಸಾವಿರ ರೂಪಾಯಿಗಳ ನೋಟಿನ ಕಂತೆ ಎತ್ತಿದ್ದೇ ಕವರೊಂದರಲ್ಲಿ ಹಾಕಿ ಮತ್ತದೇ ಹರಿವಾಣದಲ್ಲಿಟ್ಟು 'ಚೆನ್ನಾಗಿ ಓದಿ ನೀನು ಮುಂದೆ ಬರಬೇಕು. ತಾಯಿ ಕಷ್ಟಕ್ಕೆ ನೆರವಾಗಬೇಕು....' ಎಂದು ಆಶೀರ್ವಾದ ಮಾಡಿದ್ದಾರೆ.

ಬಂದಷ್ಟು ಗುಂಜಿಕೊಂಡ ಹಿಕಮತ್ತಿನಲ್ಲೇ ತಾನೂ ಶೃತಿ ಕಾಲಿಗೆ ಬಿದ್ದ ಚೂಡ ಮಗಳ ಸಮೇತ ಗೇಟು ದಾಟಿ ಹೊರಹೋದವನೇ ಏನೋ ನೆನಪಿಸಿಕೊಂಡವನಂತೆ ಅರೆಕ್ಷಣದಲ್ಲೇ ವಾಪಸ್ಸಾಗಿ 'ಬೇಜಾರ್ ಮಾಡ್ಕೊಳ್ಳಲ್ಲ ಅಂದ್ರೆ ಇನ್ನೊಂದ್ ನೂರು ರೂಪಾಯಿ ಸಿಗಬಹುದಾ' ಎಂದು ಹಲ್ಲುಗಿಂಜಿದ್ದಾನೆ. ಪೀಡೆ ತೊಲಗಿದರೆ ಸಾಕು ಎಂದು ಶೃತಿ ನೂರು ರೂಪಾಯಿ ಕೊಟ್ಟಿದ್ದಾರೆ.

ಅಸಹ್ಯದ ಪರಮಾವಧಿಯೆಂದರೆ ಹಾಗೆ ಶೃತಿಯಿಂದ ಎಕ್ಸ್‌ಟ್ರಾ ನೂರು ರೂಪಾಯಿಗೆ ಚೂಡ ಕೈಚಾಚಿದ್ದು ಚಿಲ್ಲರೆ ಆಟೋ ಕಾಸಿಗಾಗಿ. ರಸ್ತೆಗುಂಟ ಚೂಡನನ್ನು ಬಿಟ್ಟು ಬರಲು ಬಂದ ಶೃತಿ ಮನೆ ಕೆಲಸದವರ ಕಣ್ಣೆದುರಿಗೇ ಚೂಡ ಶೃತಿ ಕೊಟ್ಟಿದ್ದ 25 ಸಾವಿರವನ್ನೂ ಜೇಬಿಗಿಳಿಸಿದ್ದ. ಬೆಳ್ಳಿ ಸಾಮಾನುಗಳನ್ನೆಲ್ಲ ಕವರ್ ಒಂದಕ್ಕೆ ತುರುಕಿಕೊಂಡಿದ್ದೇ ಬಿಡಿಗಾಸು ನೂರು ರೂಪಾಯಿಯನ್ನು ಮಗಳ ಕೈಗಿತ್ತಿದ್ದೇ ಆಟೋ ಹತ್ತಿಸಿಬಿಟ್ಟ. ಬರಿಗೈಯಲ್ಲಿ ಆಟೋ ಹತ್ತಿ ಆ ಮಗು ಏನೂ ಅರ್ಥವಾಗದೆ ಪ್ರಶ್ನಾರ್ಥಕವಾಗಿ ಪಿಳಿಗುಡುತ್ತಿತ್ತು, ಕರೆತಂದ ಮಗಳಿಗೆ ಕನಿಷ್ಠ ಮನೆತನಕ ಬಿಟ್ಟು ಬರುವಷ್ಟು ತಾಳ್ಮೆ ಕೂಡ ಚೂಡನಿಗಿರಲಿಲ್ಲ, ಆನಂತರ ಕೇಳಿಬಂದದ್ದೇನೆಂದರೆ ಮಗಳ ಮೈನೆರೆದದ್ದನ್ನೇ ಊರೆಲ್ಲ ಹೇಳಿಕೊಂಡು ಚೂಡ ಪರಿಚಿತರಿಂದೆಲ್ಲ ಎತ್ತುವಳಿ ನಡೆಸಿದ್ದ, ಕಂಠಮಟ್ಟ ಕುಡಿದು ಪಾರ್ಟಿ ಮಾಡಿದ್ದ!

ಭೂಮಿಯ ಯಾವ ತಂದೆಯಾದರೂ ಇಷ್ಟೊಂದು ನಾಚಿಕೆಗೆಟ್ಟು...



ಕೊಲ್ಲೂರು ಸಮಾಧಿ ವಿವಾದವೂ, ಕರಾವಳಿಯ ಬ್ರಾಹ್ಮಣೀಕರಣವೂ

ಕೊಲ್ಲೂರಿನ ಪರಿಸರದಲ್ಲಿ ಶೂದ್ರ ಸನ್ಯಾಸಿಯೊಬ್ಬರ ಸಮಾಧಿಯನ್ನು ವಿರೋಧಿಸುತ್ತಿರುವುದು ಕೂಡಾ ತಮ್ಮ ಈ ಅಧಿಪತ್ಯಕ್ಕೆ ಮುಕ್ಕು ಬಾರದಿರಲಿ ಎಂಬ ದೂರಾಲೋಚನೆಯಿಂದ. ದೇವರ ನಂಬಿಕೆಯನ್ನು ಭಕ್ತರಲ್ಲಿ ಎತ್ತಿಕಟ್ಟಿ, ಮೂಕಾಂಬಿಕಾ ದೇವಳದ ವ್ಯಾಪ್ತಿಯಲ್ಲೇ ಶವಸಂಸ್ಕಾರ ಮಾಡಿರುವುದರಿಂದ ದೇವಸ್ಥಾನ ಅಪವಿತ್ರವಾಗಿದ್ದು ಉತ್ತರಖಂಡದ ಪವಿತ್ರ ಕ್ಷೇತ್ರಗಳಲ್ಲಿ ಆದಂತಹ ...ರಿಸರ ವಿಕೋಪ ಕರ್ನಾಟಕದಲ್ಲೂ ಘಟಿಸಿ ಬಿಡುತ್ತದೆ ಎಂಬ ಆತಂಕ ಹುಟ್ಟು ಹಾಕುತ್ತಿದ್ದಾರೆ. ಸಮಾಧಿ ...ಸರಲ್ಲಿ ತಮ್ಮ ಹುಸಿ ಸುಪೀರಿಯಾರಿಟಿಯನ್ನು ಈ ವರ್ಗ ಸಾಧಿಸ ಹೊರಟಿರುವುದು ನಾಗರಿಕ ಸಮಾಜದ ಬಲು ದೊಡ್ಡ ವೈಪರೀತ್ಯ.

...ಸಮಾಧಿ ವಿವಾದದಿಂದಾಗಿ ಕೊಲ್ಲೂರು ಸುದ್ದಿಯಲ್ಲಿದೆ. ...ಹ್ಮಣ ಸ್ವಾಮಿಯೊಬ್ಬರ ಸಮಾಧಿಯು ಮುಂದೆ ...ಲ ಮುಳ್ಳಾಗಿ ತಮ್ಮನ್ನು ಕಾಡಬಹುದೆಂಬ ಆತಂಕಕ್ಕೆ ...ಇಲ್ಲಿನ ಪುರೋಹಿತಶಾಹಿ ವರ್ಗ 'ದೇವಿ ಮೈಲಿಗೆ'ಯ ...ಟ್ಟುಕೊಂಡು ಈ ಸಮಾಧಿ ವಿವಾದ ಹುಟ್ಟು ಹಾಕಿದೆ. ..., ಸಮಾಧಿ, ಮೈಲಿಗೆಗಳಿಗಿಂತ ಹೆಚ್ಚಾಗಿ ಇಲ್ಲಿ ...ರ್ಗತವಾಗಿ ಧ್ವನಿಸುತ್ತಿರುವುದು ಬ್ರಾಹ್ಮಣ್ಯದ ಅಧಿಪತ್ಯದ ... ನಮ್ಮ ದೇಶದಲ್ಲಿ ಸಮಾಧಿಗಳು ಪುಣ್ಯಕ್ಷೇತ್ರವಾಗಿ ...ರ್ತನೆಯಾಗುವುದು ಹೊಸದೇನೂ ಅಲ್ಲ. ಈ ...ಹ್ಮಣನ ಸಮಾಧಿಗೂ ಅಂತಹ ಪೂಜ್ಯತೆ ದಕ್ಕಿಬಿಟ್ಟರೆ ... ಹಿಡಿತ ಎಲ್ಲಿ ಸಡಿಲವಾಗಿ ಹೋಗುತ್ತದೆನ್ನುವುದು ...ದಸ್ತರ ಉದ್ದೇಶ.

...ಎಂದೆರಡು ವಾರಗಳ ಹಿಂದೆ ಈ ಕುರಿತು ಸ್ಥಳೀಯ ...ನ' ಟಿವಿಯಲ್ಲಿ ಮಾತಾಡಿದ ಸುಬ್ರಹ್ಮಣ್ಯರಾವ್ ಎನ್ನುವ ...ಹ್ಮಣನೊಬ್ಬ "ಬ್ರಾಹ್ಮಣ ಬ್ರಾಹ್ಮಣನೇ.. ಶೂದ್ರ ...ನೇ.. ಶಾಸ್ತ್ರಗಳು ಏನು ಹೇಳುತ್ತವೆಯೋ ಅದೇ ...ಮ. ಶೂದ್ರನೊಬ್ಬ ಸನ್ಯಾಸಿ ಎನ್ನುವುದನ್ನು ಶಾಸ್ತ್ರ ...ತ್ತಿಗೂ ಒಪ್ಪದು. 'ಜನ್ಮನಾ ಜಾಯತೇ ಶೂದ್ರಾ ...ರಾತ್ ದ್ವಿಜ ಉಚ್ಯತೇ' (ಹುಟ್ಟಿನಿಂದ ಎಲ್ಲರೂ ...ದ್ರರೇ ಆದರೆ ಸಂಸ್ಕಾರ ಪಡೆದ ಮೇಲೆ ಆತ ...ಹ್ಮಣನೆನಿಸುತ್ತಾನೆ) ಎಂಬ ವಾಕ್ಯವೂ ಸರಿಯಲ್ಲ. ಅದು ...ಯೋ ಹುಟ್ಟು ಹಾಕಿದಂತದ್ದು" ಎಂದಿದ್ದ. ಸಮಾಧಿ ...ಕತ್ತನ್ನು ಚಿತ್ತಲಾಗಿಸಲು ಇದಕ್ಕಿಂತ ನಿದರ್ಶನ ಬೇಕೆ. ...ಬಹಳ ಹಿಂದೆ ಧರ್ಮಸ್ಥಳದಲ್ಲಿ ನಿತ್ಯಾನಂದಾಶ್ರಮದ ...ವಾರಿಯಲ್ಲಿ ರಾಮ ಮಂದಿರವೊಂದು ಹುಟ್ಟಿಕೊಂಡು ...ಸ ಕೆಂಗಣ್ಣಿಗೆ ಗುರಿಯಾಗಿದ್ದನ್ನು ನಾವಿಲ್ಲಿ ಸ್ಮರಿಸಿ ...ಬಹುದು. ಕಾರಣವಿಷ್ಟೆ: ಆ ನಿತ್ಯಾನಂದಾಶ್ರಮವನ್ನು ...ಸಿದ್ದು ಬ್ರಾಹ್ಮಣರಾಗಿರಲಿಲ್ಲ. ಈಗ ಅದೇ ...ನಂದಾಶ್ರಮದ ವಿಮಲಾನಂದರು ಮೃತರಾಗಿ ಅವರ ...ವನ್ನು ಕೊಲ್ಲೂರಿನಲ್ಲಿರುವ ಅವರದೇ ಆಶ್ರಮದ ...ಣದಲ್ಲಿ ಸಮಾಧಿ ಮಾಡಿರುವುದು ಬ್ರಾಹ್ಮಣರ ...ಡಿಸಿದೆ. ಮೊದಲಿನಿಂದಲೂ ಅಬ್ರಾಹ್ಮಣರ ಏಳಿಗೆ ... ಹತ್ತಿಕುತ್ತಲೇ ಬಂದ ಪುರೋಹಿತಶಾಹಿ ವರ್ಗ ... ಆ ನಿರ್ಮಲಾನಂದ ಸನ್ಯಾಸಿಯೇ ಅಲ್ಲ ಎಂದು ... ಶುರು ಮಾಡಿಕೊಂಡಿದೆ.

...ಒಂಬತ್ತು ದಶಕಗಳ ಹಿಂದೆ ಇದೇ ನಿತ್ಯಾನಂದ ...ಗಳು ಉಡುಪಿಗೆ ಬಂದಿದ್ದಾಗ ವಿಪ್ರರು ನಾಯಿಗೆ ... ಹೊಡೆದಂತೆ ಹೊಡೆದು ಅವರನ್ನು ಓಡಿಸಿದ್ದರು. ...ತ್ವಿಕವಾಗಿ ನೋಡಿದರೆ ಆ ವ್ಯಕ್ತಿ ನಿಜಕ್ಕೂ ಅವಧೂತ ...ಯಾಗಿದ್ದರು. ಆದರೆ ಈ ಕಪಟ ಸನ್ಯಾಸಿಗಳಿಗೆ ...ಬ್ಬ ಹುಚ್ಚನಂತೆ ಕಂಡಿದ್ದರು. ಸ್ವಾಮಿ ನಿತ್ಯಾನಂದರ ...ದಾಯವನ್ನು ಪೂಜ್ಯ ಭಾವನೆಯಿಂದ ಆರಾಧಿಸುವ ... ವರ್ಗವೇ ಕರಾವಳಿ (ಕೇರಳದಿಂದ ಬಾಂಬೆವರೆಗಿನ) ...ಲ್ಲಿದೆ ಎಂಬುದು ಗಮನಾರ್ಹ ಸಂಗತಿ.

...ಈ ವಿಪ್ರ ವಟುಗಳ ಬ್ರಾಹ್ಮಣಿಕೆಯ ಅಟ್ಟಹಾಸ ...ಳಿಗೇನು ಹೊಸದಲ್ಲ, ಕೆಲ ದಿನಗಳ ಹಿಂದಷ್ಟೆ ...ಹ್ಮಣ ಭಂಟ ಹೆಂಗಸನ್ನು ಪಂಕ್ತಿ ಭೋಜನದಿಂದ ...ಬ್ಬಿಸಿ ಅನ್ನ ಕಿತ್ತುಕೊಂಡ ವಿಪ್ರ ಪರಾಕ್ರಮ ಇನ್ನೂ ...ಲ್ಲ. ಅಸಲಿಗೆ ಕರಾವಳಿ ತೀರದ ಚರಿತ್ರೆಯನ್ನು ಕೆದಕಿ ...ದಾಗ ಬ್ರಾಹ್ಮಣರು ಇಲ್ಲಿನ ಮೂಲ ನಿವಾಸಿಗಳಲ್ಲ ಎಂಬುದು ತಿಳಿಯುತ್ತದೆ. ಯಥಾಪ್ರಕಾರ ತಮ್ಮ ಕುಬುದ್ಧಿಯಿಂದ ಇಲ್ಲಿನ ಮೂಲನಿವಾಸಿಗಳನ್ನೇ ಮೂಲೆಗುಂಪು ಮಾಡಿ, ಕರಾವಳಿ ತೀರದ ಉಗಮಕ್ಕೇ ಬ್ರಾಹ್ಮಣಿಕೆಯ ಗಂಟು ಹಾಕಿದ ರಹಸ್ಯವೂ ಬಯಲಾಗುತ್ತದೆ. ಅದಕ್ಕೆ ಅವರು ಬಳಸಿ ಕೊಂಡದ್ದು ಪರಶುರಾಮನ ಖಡ್ಗ ಪ್ರಸಂಗವನ್ನು. ಬ್ರಾಹ್ಮಣ ಪರಶುರಾಮ ತನ್ನ ಖಡ್ಗವನ್ನು ಎಸೆದಿದ್ದರಿಂದಲೇ ಇಲ್ಲಿದ್ದ ಅರಬ್ಬೀ ಸಮುದ್ರ ಹಿಂದೆ ಸರಿದು ಕರಾವಳಿ ನಾಡು ಹುಟ್ಟಿಕೊಂಡಿತು ಎಂಬುದು ಅವರ ಪುರಾಣಕಥೆ. ಅಸಲಿಗೆ ಪರಶುರಾಮನಿಗಿಂತಲೂ ಮೊದಲೇ ಇಲ್ಲಿ ಜನವಸತಿ ಇತ್ತು ಎನ್ನುವುದಕ್ಕೆ ಇತಿಹಾಸ ಹಲವು ದಾಖಲೆ ನೀಡುತ್ತದೆ. ಅಷ್ಟೇ ಏಕೆ ಅದೇ ವಿಪ್ರರು ಹೇಳುವ ಪುರಾಣಗಳೇ ಅದನ್ನು ಸಾಬೀತುಪಡಿಸುತ್ತವೆ. ಕರಾವಳಿಯನ್ನು ವಲಸಿಗ ಬ್ರಾಹ್ಮಣರು ಪರಶುರಾಮೀಕರಣ ಮಾಡಿದ್ದನ್ನು ವಿವರವಾಗಿ ನೋಡುವ ಮುನ್ನ ಇಲ್ಲಿನ ಪ್ರಸ್ತುತ ಸಾಂಸ್ಕೃತಿಕ ನೆಲೆಗಟ್ಟನ್ನು ಅರ್ಥ ಮಾಡಿಕೊಳ್ಳೋಣ.

ಕರ್ನಾಟಕದ ಕರಾವಳಿ ಭಾಗ ದೇಗುಲಗಳ ನಾಡು. ಇದರರ್ಥ ಉಳಿದೆಡೆಗಳಲ್ಲಿ ದೇಗುಲಗಳಿಲ್ಲ ಎಂದಲ್ಲ. ನಮ್ಮ ದೇಶದಲ್ಲಿ ಜನರಿಗೆ ಸರಿಯಾದ ಸೂರಿನ ವ್ಯವಸ್ಥೆ ಇಲ್ಲದಿದ್ದರೂ ಭವ್ಯಾತಿಭವ್ಯ ದೇಗುಲಗಳಿಗೇನೂ ಕೊರತೆಯಿಲ್ಲ. ರಾಜಾಧಿರಾಜರುಗಳಿಂದ ಹಿಡಿದು ಇಂದಿನ ರಾಜಕಾರಣಿಗಳವರೆಗೂ ಎಲ್ಲರೂ ದೇಗುಲಗಳ ಕಟ್ಟುವಿಕೆ ಹಾಗು ಅಭಿವೃದ್ಧಿಗಳಿಗೆ ಇನ್ನಿಲ್ಲದಂತಹ ಮಹತ್ವವನ್ನು ಕೊಟ್ಟಂತವರೇ. ಧರ್ಮಸ್ಥಳ ಹೇಳಿಕೇಳಿ ಜೈನರ ಅಧೀನದ ಧಾರ್ಮಿಕ ಕೇಂದ್ರ. ಆದರೂ ಸ್ಥಳೀಯರು ಭಯ-ಭಕ್ತಿಯಿಂದ ನಮಿಸುವುದು ಇಲ್ಲಿನ ಅಣ್ಣಪ್ಪ ಪಂಜುರ್ಲಿ ಎನ್ನುವ ದೈವಕ್ಕೆ, ಅದೂ ಮಂಜುನಾಥನ ಹೆಸರಲ್ಲಿ, ಹಿಂದೂಗಳಿಗೆ ಈ ಪ್ರದೇಶ ದಕ್ಷಿಣ ಭಾರತದ ಪವಿತ್ರ ಯಾತ್ರಾಕೇಂದ್ರವಾಗಿದೆ.

ಸುಬ್ರಹ್ಮಣ್ಯ ಕ್ಷೇತ್ರವಂತೂ ಸರ್ಪ ಸಂಸ್ಕಾರದ ಹೆಸರಲ್ಲಿ ದೇಶವಿದೇಶದ ಗಣ್ಯಾತಿಗಣ್ಯ ಜನರನ್ನು ಬುಟ್ಟಿಗೆ ಹಾಕಿಕೊಂಡು ದೋಚುತ್ತಿದೆ. ಅದೇ ರೀತಿ ಮಲಯಾಳಿಗಳಿಗೆ ಮತ್ತು ತಮಿಳರಿಗೆ ಕೊಲ್ಲೂರಿನ ಮೂಕಾಂಬಿಕೆ ಎಂದರೆ ಪರಮ ಭಾಗ್ಯವತಿಯೇ. ತಂಗವಾಳು(ಬಂಗಾರದ ಖಡ್ಗ)ವಿನ ದಾನಿ ಎಂ.ಜಿ.ಆರ್ ಅವರಿಂದ ಹಿಡಿದು ಇಳಯರಾಜಾವರೆಗೆ ಕೊಲ್ಲೂರಿನ ವಿಐಪಿ ಭಕ್ತವಲಯ ಬಹುದೊಡ್ಡದಿದೆ.

ಕರಾವಳಿಯ ಧಾರ್ಮಿಕ ನಾಯಕರುಗಳಿಗೆ ದೇವರು, ನಂಬಿಕೆ, ಧರ್ಮಗಳನ್ನು ವ್ಯವಹಾರವಾಗಿ ಪರಿವರ್ತಿಸುವ ನಾಜೂಕುತನ ತಿಳಿದಿರುವುದೇ ಈ ಬದಲಾವಣೆಗಳಿಗೆಲ್ಲ ಮುಖ್ಯ ಕಾರಣ. ಉಡುಪಿಯ ಅನಂತೇಶ್ವರ-ಚಂದ್ರಮೌಳೀಶ್ವರನೆಂಬ ಹಳೆಯ ಶೈವ ದೇಗುಲವನ್ನು ಮೂಲೆಗುಂಪು ಮಾಡಿ ಮೇಲೆದ್ದ ಮಧ್ವಾಚಾರ್ಯನ ಕೃಷ್ಣ ದೇಗುಲ ಈಗ ತನ್ನ 'ಪರ್ಯಾಯ' ಎಂಬ ಜಗಳಗಂಟ ಸನ್ಯಾಸಿಗಳ ನಾಟಕವನ್ನು ನಾಡಹಬ್ಬದ ಲೆವೆಲ್ಲಿಗೆ ಬಿಂಬಿಸುವತ್ತ ಸಾಗಿರುವುದು, ಸಂಬಂಧವಿಲ್ಲದಿದ್ದರೂ ರಾಜಕೀಯ ವಿಚಾರಗಳತ್ತ ಇವರೆಲ್ಲ ಮೂಗುತೂರಿಸುವುದು ಇಲ್ಲಿನ ಅರ್ಚಕ ವರ್ಗದ ತುಳಿಯುವ ಹಾಗು ಪ್ರಭುತ್ವಸಾಧನೆಯ ಮನೋಸ್ಥಿತಿಯನ್ನೇ ಬಿಂಬಿಸುತ್ತದಲ್ಲವೇ? ಇಷ್ಟೆಲ್ಲವನ್ನೂ ಹೇಳುತ್ತಿರುವುದು ಕರಾವಳಿ ತೀರದಲ್ಲಿ ಪ್ರಸ್ತುತ ಬ್ರಾಹ್ಮಣಿಕೆ ಪ್ರಾಬಲ್ಯ ಎಷ್ಟರ ಮಟ್ಟಿಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು.

ಈಗ ಅಸಲಿ ವಿಷಯಕ್ಕೆ ಬರುವುದಾದರೆ ಕರಾವಳಿ ಜನರು 'ಈ ನಾಡು ಪರಶುರಾಮನ ಸೃಷ್ಟಿ' ಎಂತಲೇ ಅಪಾರವಾಗಿ ನಂಬಿಕೊಂಡಿದ್ದಾರೆ. ಹಾಗೆ ನಂಬಿಸಲಾಗಿದೆ. ಪರಶುರಾಮನಿಗೆ ನೇರ ಸಂಬಂಧವಿಲ್ಲದಿದ್ದರೂ ಪರಶುರಾಮನ ಕೊಡಲಿ ಕಥೆಯನ್ನು ಇಲ್ಲಿನ ಜನ ನಂಬುವುದುಂಟು. ಸ್ಕಂದ ಪುರಾಣದ ಸಹ್ಯಾದ್ರಿಖಂಡದಲ್ಲಿ ಇದರ ಉಲ್ಲೇಖವಿದೆಯಂತೆ. ಆದರೆ 1865ನೇ ಇಸವಿಯಲ್ಲಿ ಪುರಾಣಗಳ ಕ್ರೋಢೀಕರಣಕ್ಕಾಗಿ ಕಾಶಿಯಲ್ಲಿ ಸೇರಿದ ವಿದ್ವಾಂಸರೆಲ್ಲರೂ ಪ್ರಾಕೃತ ಸ್ಕಂದಪುರಾಣದಲ್ಲಿ ಮೂಲತಃ ಸಹ್ಯಾದ್ರಿಖಂಡ ಎಂಬುದೇ ಇಲ್ಲ; ಇದು ನಂತರದ ಸೇರ್ಪಡೆ ಎಂದು ಹಲವಾರು ಸಾಕ್ಷ್ಯಾಧಾರಗಳ ಮೇಲೆ ಒಮ್ಮತದ ತೀರ್ಮಾನಕ್ಕೆ ಬಂದಿದ್ದರು. ಅಲ್ಲಿಗೆ ಸಹ್ಯಾದ್ರಿಖಂಡದ ಉಲ್ಲೇಖದ ಕರಾವಳಿ ಸೃಷ್ಟಿಯೇ ಠುಸ್ಸೆಂದಂತಾಯ್ತಲ್ಲವೆ.

ಹಿಂದೂಗಳದ್ದೇ ಆದ ಒಂದು ಪ್ರಮುಖ ವರ್ಗವಾದ ಕ್ಷತ್ರಿಯರನ್ನು ಸ್ವಹಿತಕ್ಕಾಗಿ ಸರ್ವನಾಶಗೈದು ಬ್ರಾಹ್ಮಣ ಪಾರಮ್ಯವನ್ನು ಮೆರೆದಾತನೇ ಈ ಪರಶುರಾಮ. ಬ್ರಾಹ್ಮಣ್ಯ ವಸತಿಯೇ ಇಲ್ಲದ ಈ ಅಬ್ರಾಹ್ಮಣನಾಡನ್ನು ಕೆಲ ರಾಜರುಗಳ ಉಸ್ತುವಾರಿಯಲ್ಲಿ ಪರಶುರಾಮೀಕರಣಗೊಳಿಸಲಾಯಿತು ಅರ್ಥಾತ್ ಬ್ರಾಹ್ಮಣ್ಯದ ಪಾರಮ್ಯಕ್ಕೆ ಬಿಡಲಾಯಿತು. ಇದು ವಾಸ್ತವ ಸಂಗತಿ. ಇದನ್ನು ಬಿಟ್ಟು ಯಾವನೋ ಕೊಡಲಿ ಬಿಸಾಕಿ ಸಮುದ್ರ ಹಿಂದೆ ಸರಿಸಿದ ಎಂಬ ಅಡಗೂಲಜ್ಜಿ ಕಥೆಗೆ ಯಾವ ಭೌಗೋಳಿಕ ಐತಿಹಾಸಿಕ ಪುರಾವೆಗಳೂ ಇಲ್ಲ. ಈ ಪರಿಸರದಲ್ಲಿ ವಾಸವಿದ್ದ ಶಿಲಾಯುಗದ ಜನರ ಅವಶೇಷಗಳನ್ನು ಸಂಶೋಧಕರು ಆಗಾಗ ಪತ್ತೆ ಹಚ್ಚುತ್ತಿದ್ದಾರೆ. ನೀಲಾವರ ಎಂಬಲ್ಲಿ ನನ್ನ ಚಿಕ್ಕಪ್ಪ ಬಾವಿ ತೋಡಿಸುತ್ತಿದ್ದಾಗ ಮೂಳೆಗಳಿರುವ ಮಡಿಕೆ ಸಿಕ್ಕಿತ್ತು, ಅದು ಆಗಿನವರ ಶವ ಸಂಸ್ಕಾರ ಪದ್ಧತಿ. ಪರಶುರಾಮನಿಗೂ ಎಷ್ಟೋ ಮುನ್ನವೇ ಇಲ್ಲಿ ಜನವಸತಿಯಿತ್ತು.

ಬ್ರಾಹ್ಮಣನಿಲ್ಲದ ಊರಲ್ಲಿ ಒಂದು ದಿನವೂ ನಿಲ್ಲಬಾರದು ಎಂಬುದು ಅಂದು ಹರಿಬಿಡಲಾಗಿದ್ದ ಒಂದು ನಂಬಿಕೆ. ಪುಣ್ಯ ಪ್ರದೇಶವಾಗಬೇಕಾದರೆ ಅಲ್ಲಿ ಬ್ರಾಹ್ಮಣರ ವಾಸವಿರಲೇಬೇಕೆನ್ನುವುದು ಇದರರ್ಥ. "ವಿಪ್ರ ಪಾದೋದಕ ಕರ್ದಮಾನಿ ನ ವೇದಶಾಸ್ತ್ರ ಧ್ವನಿಗರ್ಜಿತಾನಿ ಸ್ವಾಹಾ ಸ್ವಧಾಕಾರ ವಿವರ್ಜಿತಾನಿ ಶ್ಮಶಾನ ತುಲ್ಯಾನಿ ಗೃಹಾಣಿತಾನಿ (ಬ್ರಾಹ್ಮಣ ಪಾದೋದಕದಿಂದ ಪುನೀತವಾಗಿಲ್ಲದ, ವೇದಶಾಸ್ತ್ರಗಳು ಮೊಳಗಿರದ, ಯಜ್ಞ ಯಾಗಾದಿಗಳು ನಡೆಯದಂತಹ ಮನೆ ಸ್ಮಶಾನಕ್ಕೆ ಸಮಾನ)' ಇದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುವಂತಹ ಒಂದು ಶ್ಲೋಕ. ಇಂತಹ ನಂಬಿಕೆಗಳ ಕಾರಣ ಇಲ್ಲಿನ ರಾಜರುಗಳು, ಸಾಮಂತರುಗಳು ಅನೇಕಾನೇಕ ಆಸೆಗಳನ್ನು ತೋರಿ ಅಹಿಛತ್ರದಿಂದ ಬ್ರಾಹ್ಮಣ ಕುಟುಂಬಗಳನ್ನು ಕರಾವಳಿಯ ಈ ಅಬ್ರಾಹ್ಮಣ ನಾಡಿಗೆ ಕರೆತಂದಿತ್ತೆನ್ನುವುದು ಐತಿಹಾಸಿಕ ವಿಚಾರ.

ಮೌರ್ಯರ ಆಳ್ವಿಕೆ ಕಾಲದಲ್ಲಿ ಭಾರತದ ದಕ್ಷಿಣಭಾಗಕ್ಕೆ ಬೌದ್ಧ ಜೈನ ಹಾಗು ಬ್ರಾಹ್ಮಣರ (ಆ ಮೂಲಕ ಸಂಸ್ಕೃತದ) ಆಗಮನ ಶುರುವಾಯಿತು. ಬಳಿಕ ಶಾತವಾಹನರು ಬ್ರಾಹ್ಮಣರ ಆಗಮನಕ್ಕೆ ಇನ್ನಿಲ್ಲದ ಉತ್ತೇಜನವನ್ನು ನೀಡಿದರು. ಈ ಶಾತವಾಹನ ರಾಜರ ಮೂಲಕ ಪರೋಕ್ಷವಾಗಿ ಕನ್ನಡ ಕರಾವಳಿ ಪರಿಸರಕ್ಕೆ ಕಾಲಿಟ್ಟ ಮೊಟ್ಟಮೊದಲ ಬ್ರಾಹ್ಮಣ ಗುಂಪೆಂದರೆ ಅದು ಸ್ಥಾನಿಕ ಬ್ರಾಹ್ಮಣರದ್ದು. (ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಈ 'ಸ್ಥಾನಿಕ' ಅಧಿಕಾರದ ಬಗ್ಗೆ ಪ್ರಸ್ತಾಪವಿದೆ. ಸ್ಥಾನಿಕ ಪಂಗಡದಲ್ಲಿ ಬರುವ ಹೆಬ್ಬಾರ ಎನ್ನುವ ಪದ ಮೂಲತಃ ಜಾತಿ ಸೂಚಕವಲ್ಲ 'ಹಿರಿಯ ಹಾರವ' ಎನ್ನುವುದು 'ಹೆಬ್ಬಾರ' ಪದದ ಮೂಲಾರ್ಥ).

ನಂತರ ಕದಂಬ ರಾಜರು ಮುತುವರ್ಜಿ ತೋರಿ ಅಹಿಛತ್ರದಿಂದ ಮತ್ತಷ್ಟು ಬ್ರಾಹ್ಮಣರನ್ನು ಇಲ್ಲಿಗೆ ಕರೆಸಿಕೊಂಡರು. ಖುದ್ದು ರಾಜಾಶ್ರಯದ ಕಾರಣ ಸ್ಥಳೀಯರೊಂದಿಗಿನ ಅಂಥಾ ತಿಕ್ಕಾಟವಿಲ್ಲದಿದ್ದರೂ ವಿಭಿನ್ನ ಪರಿಸರದಿಂದ ಬಂದ ವಿಭಿನ್ನ ಭಾಷೆ ಹಾಗು ಸಂಸ್ಕೃತಿಯ ಉತ್ತರದ ಈ ಬ್ರಾಹ್ಮಣರು ಇಲ್ಲಿನ ಸ್ಥಳೀಯರು ಹಾಗು ಮೊದಲು ನೆಲೆಯೂರಿದ್ದ ಸ್ಥಾನಿಕ ಬ್ರಾಹ್ಮಣರೊಂದಿಗೆ ಸ್ಥಾನಮಾನ ಹಾಗು ಸಂಖ್ಯಾವೃದ್ಧಿಯೇ ಮೊದಲಾದ ವಿಚಾರದಲ್ಲಿ ನಡೆಸಿದ ತಿಕ್ಕಾಟ ಹಾಗು ಕೆಲ ಸಾಮಾಜಿಕ ಪಲ್ಲಟಗಳ ಬಳಿಕ ಇಡೀ ತುಳುನಾಡೇ ಕ್ರಮೇಣ ಬ್ರಾಹ್ಮಣ್ಯದ ಹತೋಟಿಗೆ ಬಂದಿತು. ಇದೇ ಇಲ್ಲಿನ ಮೂಲನಿವಾಸಿಗಳು ಹಾಗು ಇತರರನ್ನು ಮೆಟ್ಟಿನಿಂತು ಜಯಸಾಧಿಸಿದ "ಪರಶುರಾಮೀಕರಣ". ಗ್ರೀಕ್, ಅರಬ್ಬೀ ಮುಂತಾದವರ ಜೊತೆಗೆ ಸಂಪರ್ಕವಿಟ್ಟುಕೊಂಡಿದ್ದ ಈ ಪಶ್ಚಿಮಕರಾವಳೀ ಪ್ರದೇಶ ಪರಶುರಾಮೀಕರಣಕ್ಕೂ ಮುನ್ನ ಚಟುವಟಿಕೆಯಿರದ ನಿರ್ಜನ ಪ್ರದೇಶವಂತೂ ಖಂಡಿತಾ ಆಗಿದ್ದಿರಲಿಲ್ಲ. ಕೊಲ್ಲೂರು ಯಾವುದೋ ದೇವಿಕೋಲ ಎಂಬ ರಾಕ್ಷಸನನ್ನು ಕೊಂದಂತಹ ಊರು ಎಂಬ ಕಥೆಗಿಂತಲೂ ಇದು ಇಲ್ಲಿನ ಪ್ರಾಚೀನ ಕೋಲ ಜನಾಂಗದವರು ವಾಸಿಸುತ್ತಿದ್ದ ಊರಾಗಿರಬಹುದೆಂದು ಸಂಶೋಧಕ ಪಾದೂರು ಗುರುರಾಜ ಭಟ್ಟರು ಅಭಿಪ್ರಾಯ ಪಟ್ಟಿದ್ದಾರೆ. ಕರಾವಳಿ ಜಿಲ್ಲೆಯ ನೂರಾರು ದೇಗುಲಗಳ ಸ್ಥಳಪುರಾಣಗಳೊಂದಿಗೆ ರಾಮ ಹಾಗು ಮಹಾಭಾರತದ ಪಾಂಡವರ ಕಥೆ ಬೇಕಂತಲೇ ತಳಕು ಹಾಕಲ್ಪಟ್ಟಿದೆ (ಆ ರೀತಿಯಾಗಿ ಸ್ಥಳಪುರಾಣವನ್ನು ಕಟ್ಟಲಾಗಿದೆ ಉದಾ: ವನವಾಸ ಕಾಲದಲ್ಲಿ ಪಾಂಡವರು ಈ ಕೆರೆ ಕಟ್ಟಿದರು, ಈ ವಿಗ್ರಹ ಪ್ರತಿಷ್ಠಾಪನೆ ಮಾಡಿದರು ಇತ್ಯಾದಿ).

ಮತ್ತೊಂದು ಮುಖ್ಯವಾದ ಸಂಗತಿಯೆಂದರೆ ದೇವಿ ಭಾಗವತ ಹಾಗು ಪುರಾಣಗಳಲ್ಲಿ ಬರುವ ದೇವಿಯ ಚಂಡ-ಮುಂಡ ಸಂಹಾರ ಕಥೆಯದ್ದು. ಚಂಡಮುಂಡರನ್ನು ಈ ದೇವಿ ಕೊಂದಿದ್ದು ಇಲ್ಲಿನ ಸ್ಥಳೀಯ 'ಪೊಳಲಿ' ಎಂಬಲ್ಲಿಯೇ ಎನ್ನುತ್ತದೆ ಅಲ್ಲಿಯ ಸ್ಥಳಪುರಾಣ. ಕರ್ಣನಿಗೆ ವಿದ್ಯೆಕಲಿಸಿದ ಪರಶುರಾಮ ರಾಮಾಯಣ-ಮಹಾಭಾರತ ಕಾಲದವನು. ಚಂಡಮುಂಡರ ಕಥೆ ಅದಕ್ಕೂ ಹಿಂದಿನದ್ದು. ಪರಶುರಾಮನಿಗೂ ಮುಂಚೆ ಇಲ್ಲಿ ಜನವಸತಿಯೇ ಇಲ್ಲದಿದ್ದರೆ ಪೊಳಲಿಯಲ್ಲಿ ಚಂಡಮುಂಡರು ಇದ್ದದ್ದಾದರೂ ಹೇಗೆ? ಅಲ್ಲಿಗೆ ಪುರಾಣವೇ ಕರಾವಳಿಯ ಪರಶುರಾಮೀಕಣರದ ಅಸಲಿಯತ್ತನ್ನು ತೆರೆದಿಡುತ್ತದೆ.

ಒಟ್ಟಾರೆಯಾಗಿ ನೋಡುವುದಾದರೆ ಬ್ರಾಹ್ಮಣಿಕೆ ಕರಾವಳಿ ನೆಲದ ಸೊಗಡಿನದ್ದಲ್ಲ. ತಾವು ಹುಟ್ಟುಹಾಕಿದ 'ಬ್ರಾಹ್ಮಣ ಶ್ರೇಷ್ಠತೆ' ಕಂದಾಚಾರದ ಫಲವಾಗಿ ಆಗಿನ ಆಳರಸರಿಂದ ಕೆದಕಿ ತಂದವರು. ಎಲ್ಲಿಂದಲೋ ಬಂದು ಜನಮರಳುಮಾಡಿ ಇಲ್ಲಿ ಗಟ್ಟಿಯಾಗಿ ನೆಲೆನಿಂತ ಈ ಪರದೇಸಿ ಬ್ರಾಹ್ಮಣರು ಇದೀಗ ಇಡೀ ಕರಾವಳಿ ನಾಡನ್ನೇ ಆವರಿಸಿಬಿಟ್ಟಿದ್ದಾರೆ. ಮೂಲನಿವಾಸಿಗಳಿಗಿಂತ ಶ್ರೇಷ್ಠ ಮತ್ತು ಅಧಿಕಾರಯುತ ಧೋರಣೆಯಲ್ಲಿ ವರ್ತಿಸುತ್ತಿದ್ದಾರೆ.

ಕೊಲ್ಲೂರಿನ ಪರಿಸರದಲ್ಲಿ ಶೂದ್ರ ಸನ್ಯಾಸಿಯೊಬ್ಬರ ಸಮಾಧಿಯನ್ನು ವಿರೋಧಿಸುತ್ತಿರುವುದು ಕೂಡಾ ತಮ್ಮ ಈ ಅಧಿಪತ್ಯಕ್ಕೆ ಮುಕ್ಕು ಬಾರದಿರಲಿ ಎಂಬ ದೂರಾಲೋಚನೆಯಿಂದ. ದೇವರ ನಂಬಿಕೆಯನ್ನು ಭಕ್ತರಲ್ಲಿ ಎತ್ತಿಕಟ್ಟಿ ಮೂಕಾಂಬಿಕಾ ದೇವಳದ ವ್ಯಾಪ್ತಿಯಲ್ಲೇ ಶವಸಂಸ್ಕಾರ ಮಾಡಿರುವುದರಿಂದ ದೇವಸ್ಥಾನ ಅಪವಿತ್ರವಾಗಿದ್ದು ಉತ್ತರಖಂಡದ ಪವಿತ್ರ ಕ್ಷೇತ್ರಗಳಲ್ಲಿ ಆದಂತಹ ಪರಿಸರ ವಿಕೋಪ ಕರ್ನಾಟಕದಲ್ಲೂ ಘಟಿಸಿ ಬಿಡುತ್ತದೆ ಎಂಬ ಆತಂಕ ಹುಟ್ಟು ಹಾಕುತ್ತಿದ್ದಾರೆ. ಸಮಾಧಿ ಹೆಸರಲ್ಲಿ ತಮ್ಮ ಹುಸಿ ಸುಪೀರಿಯಾರಿಟಿಯನ್ನು ಈ ವರ್ಗ ಸಾಧಿಸ ಹೊರಟಿರುವುದು ನಾಗರಿಕ ಸಮಾಜದ ಬಲು ದೊಡ್ಡ ವೈಪರೀತ್ಯ.

ಉತ್ತರಭಾರತದಲ್ಲಿ ದ್ವಾರಕಾ ಪೀಠದ ಶಂಕರಾಚಾರ್ಯನೊಬ್ಬ (ಸ್ವರೂಪಾನಂದಸ್ವಾಮಿ) ಸಾಯಿಬಾಬನನ್ನು ಪೂಜಿಸುವುದರ ಬಗ್ಗೆ ಇಂತದ್ದೇ ಭಾವನೆಯಿಂದ ಕಿಡಿಕಾರುತ್ತಿರುವುದನ್ನೂ ನೀವು ಗಮನಿಸಿರಬಹುದು. ಆತ ಶಂಕರ, ರಾಘವೇಂದ್ರ ಎಂಬಿತ್ಯಾದಿ ಎಲ್ಲಾ ಗುರು- ಸನ್ಯಾಸಿಗಳ ಬಗ್ಗೆ ಇದೇ ರೀತಿ ಮಾತನ್ನಾಡಿದ್ದರೆ ಆತನ ವೈಚಾರಿಕತೆಗೆ ಭೇಷ್ ಎನ್ನಬಹುದಿತ್ತು, ಆದರೆ ಅನ್ಯ ಧರ್ಮೀಯ ಸಾಯಿಬಾಬ, ಹಿಂದೂಗಳಿಂದ ಭರ್ಜರಿಯಾಗಿ ಪೂಜೆಗೊಳ್ಳುತ್ತಿರುವುದನ್ನು ಸಹಿಸಲಾಗದೆ ಹೊಟ್ಟೆಯಲ್ಲಿ ಬ್ಯಾದಗಿ ಮೆಣಸಿನಕಾಯಿ ಕಲಸಿಕೊಂಡವನಂತೆ 'ಸಾಯಿಬಾಬನನ್ನು ಪ್ರಚಾರಮಾಡಿದ್ದು ಬ್ರಿಟಿಷರು' ಎನ್ನುತ್ತಿದ್ದಾನೆ.

ಒಟ್ಟಿನಲ್ಲಿ ಬ್ರಾಹ್ಮಣರ ಹೊರತಾಗಿ ಮತ್ಯಾರೂ ಈ ನೆಲದಲ್ಲಿ 'ಗೌರವ'ಗಳಿಗೆ ಪಾತ್ರವಾಗಬಾರದು ಎನ್ನುವುದಷ್ಟೇ ಈ ವಿಪ್ರಗಳ ವಿಕೃತ ಬಯಕೆ.

● ಶಶಿ ಪುತ್ತೂರು

(ಮುಖ್ಯ ಆಧಾರ: ಸಂಶೋಧಕ ಪಾದೂರು ಗುರುರಾಜ ಭಟ್ಟರ 'ತುಳುನಾಡು' ಗ್ರಂಥ)



ಕಾಶಪ್ಪನ ‘ವಿಜಯ’ ಲೀಲೆ



ಕಳೆದ ವಾರವಷ್ಟೇ ‘ಪತ್ರಿಕೆ’ ಹುನಗುಂದದ ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನ ಗ್ರಾನೈಟ್ ಮಾಫಿಯಾದ ಮುಖವಾಡವನ್ನು ಬಯಲುಗೊಳಿಸಿತ್ತು, ಇದೀಗ ಆತನ ಮತ್ತೊಂದು ಕರಾಳ ಮುಖ ಬೆತ್ತಲಾಗಿದೆ. ಬೆಂಗಳೂರಿನ ಶ್ರೀಮಂತ ಬಾರ್‌ಗಳಲ್ಲಿ ಒಂದಾದ ಯುಬಿ ಸಿಟಿಯ ಸ್ಕೈ ಬಾರ್‌ನಲ್ಲಿ ಮಧ್ಯರಾತ್ರಿವರೆಗೂ ಕಂಠಪೂರ್ತಿ ಕುಡಿದು ದಾಂಧಲೆ ನಡೆಸಿದ್ದಲ್ಲದೆ ತನ್ನ ರೌಡಿ ಸಂಗಡಿಗರ ಸಮೇತ ಪೊಲೀಸರನ್ನೇ ಹಿಗ್ಗಾಮುಗ್ಗಾ ಜಡಿದು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಕೇಸು ಹೇರಿಸಿಕೊಂಡಿದ್ದಾನೆ. ಗ್ರಾನೈಟ್ ದಂಧೆಯ ಹಡಬೆ ದುಡ್ಡು ಮತ್ತು ತಂದೆಯಿಂದ ಬಂದ ರಾಜಕಾರಣದ ಧಿಮಾಕಿನ ವಿಜಯಾನಂದನ ಇಂತಹ ಅಪರಾ-ತಪರಾಗಳು ಇದೇ ಮೊದಲೇನಲ್ಲ. ಹುನಗುಂದ ಮತ್ತು ಬೆಂಗಳೂರು ಠಾಣೆಯಲ್ಲಿ ಹಲವಾರು ಕೇಸುಗಳು ಇವನ ಮೇಲೆ ದಾಖಲಾಗಿದ್ದವು. ಮಾರಣಾಂತಿಕ ಹಲ್ಲೆಯಿಂದ ಹಿಡಿದು ಚೆಕ್‌ಬೌನ್ಸ್ ಪ್ರಕರಣಗಳವರೆಗೆ ವಿಜಯಾನಂದ ಕೋರ್ಟ್ ಮೆಟ್ಟಿಲೇರಿದಂತ ಆಸಾಮಿ. ಈ ಪ್ರಕರಣವೇನಾದರೂ ಗಟ್ಟಿಯಾಗಿ ನಿಂತರೆ ‘ಕ್ರಿಮಿನಲ್ ಜನಪ್ರತಿನಿಧಿಗಳ ಅನರ್ಹತೆ’ಯ ಸುಪ್ರೀಮ್ ಕೋರ್ಟಿನ ತೀರ್ಪಿನಂತೆ ಕಾಶಪ್ಪ ತನ್ನ ಎಂಎಲ್‌ಎ ಗಿರಿಯನ್ನೇ ಕಳೆದುಕೊಂಡು ಶಂಭೋ ಎನ್ನಬೇಕಾಗುತ್ತದೆ.

ಬರ್ತ್‌ಡೇ ಗುಂಡು ಪಾರ್ಟಿ

ವಿಜಯಾನಂದ ಕಾಶಪ್ಪ ಸ್ಕೈ ಬಾರ್‌ಗೆ ಹೋಗಿದ್ದೇ ತನ್ನ ಬರ್ತ್‌ಡೇ ಪಾರ್ಟಿ ಆಚರಿಸಿಕೊಳ್ಳಲು. ಅದನ್ನು ಆಯೋಜಿಸಿದ್ದು ಸೋಮಶೇಖರ್ ಗೌಡ ಅಲಿಯಾಸ್ ಸೋಮೇಗೌಡನೆಂಬ ರೌಡಿ ಶೀಟರ್! ತಮಾಷೆಯ ವಿಷಯವೆಂದರೆ ಈ ಸೋಮೇಗೌಡನ ಕಸುಬೇ ರಾಜಕಾರಣಿಗಳು ಮತ್ತು ಅವರ ಮಕ್ಕಳಿಗೆ ದುಬಾರಿ ಬಾರ್ ರೆಸ್ಟೋರೆಂಟ್‌ಗಳಲ್ಲಿ ಬರ್ತ್‌ಡೇ ಪಾರ್ಟಿ ಆಯೋಜಿಸೋದು; ಸಖತ್ತಾಗಿ ಕುಡಿದು ತಿಂದಾದ ಮೇಲೆ ಬಾರ್‌ನವರಿಗೆ ದುಡ್ಡು ಕೊಡದೆ ತಮ್ಮ ಪೊಲಿಟಿಕಲ್ ಬ್ಯಾಗ್ರೌಂಡ್ ಹೇಳಿಕೊಂಡು ಗೂಂಡಾಗಿರಿ ಮಾಡೋದು. ಇದೇ ಕಾರಣಕ್ಕೆ ಈ ಸೋಮೇಗೌಡನ ಮೇಲೆ ಬೆಂಗಳೂರಿನ ಬೇರೆಬೇರೆ ಪೊಲೀಸ್ ಠಾಣೆಗಳಲ್ಲಿ ಸುಮಾರು 10ಕ್ಕೂ ಹೆಚ್ಚು ಕೇಸ್‌ಗಳು ದಾಖಲಾಗಿವೆ. ಆ ದೂರುಗಳನ್ನು ಕೊಟ್ಟಿರೋದು ಲೀ ಮೆರಿಡಿಯನ್, ಲಲಿತ್ ಅಶೋಕ, ಫೆಬೆಲ್ಸ್‌ನಂತಹ ಕಾಸ್ಟ್ಲಿ ಹೋಟೇಲುಗಳೆನ್ನುವುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ, ಪ್ಯಾಲೇಸ್ ಕ್ರಾಸ್ ರಸ್ತೆಯಲ್ಲಿರುವ ಓಪಸ್ ಹೋಟೇಲ್‌ನಲ್ಲಿ ಇಂತದ್ದೇ ದಾಂಧಲೆ ನಡೆಸಿದ್ದಕ್ಕಾಗಿ 2009ರಲ್ಲಿ ಹೈಗ್ರೌಂಡ್ ಪೊಲೀಸರು ಸೋಮೇಗೌಡನನ್ನು ಬಂಧಿಸಿ ಜೈಲಿಗೆ ತಳ್ಳಿದ್ದರು. ತನಗಿರುವ ರಾಜಕೀಯ ಲಿಂಕ್ ಬಳಸಿಕೊಂಡು ಹೊರಬಂದಿದ್ದನಾದರೂ ಠಾಣೆಗಳಿಗೆ ಅಲೆಯುವುದು ತಪ್ಪಿಲ್ಲ, ಮೂರು ತಿಂಗಳ ಕೆಳಗಷ್ಟೆ ಓಪಸ್ ಹೋಟೇಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಗ್ರೌಂಡ್ ಠಾಣೆಗೆ ಪರೇಡ್ ನಡೆಸಿ ಬಂದಿದ್ದ. ವಿಜಯಾನಂದ ಕಾಶಪ್ಪ ತನ್ನ ಪ್ರಭಾವ ಬಳಸಿ ಆತ ಜೈಲು ಪಾಲಾಗುವುದನ್ನು ತಪ್ಪಿಸುತ್ತಲೇ ಬಂದಿದ್ದ.


ಕಾಶಪ್ಪನವರ್

ಆ ಋಣ ತೀರಿಸುವುದಕ್ಕೋ ಅಥವಾ ತನ್ನ ಯಥಾಪ್ರಕಾರದ ‘ಮಕ್ಕಟೆ ಪಾರ್ಟಿ ಕೊಡುವ’ ಖಯಾಲಿ ತೀರಿಸಿಕೊಳ್ಳುವುದಕ್ಕೋ ಮೊನ್ನೆ ಜುಲೈ 1ರ ರಾತ್ರಿ ಸ್ಕೈ ಬಾರ್‌ನಲ್ಲಿ ಶಾಸಕ ಕಾಶಪ್ಪನಿಗೆ ಪಾರ್ಟಿ ಇಟ್ಟುಕೊಂಡಿದ್ದ. ಅವತ್ತು ರಾತ್ರಿ ಸುಮಾರು 10.30ರ ವೇಳೆಗೆ ಕಾಶಪ್ಪ ತನ್ನ ಕುಟುಂಬದವರಲ್ಲದೆ ಒಂದಷ್ಟು ಹಿಂಬಾಲಕರ ಜೊತೆ ಬಾರ್‌ಗೆ ಧಾವಿಸಿದ್ದ. ದುಬಾರಿ ವಿದೇಶಿ ವಿಸ್ಕಿ ಬಾಟಲ್‌ಗಳು ಒಂದೊಂದೇ ಖಾಲಿಯಾಗತೊಡಗಿದ್ದವು. ಗಂಟೆ 11.30 ಆಗುತ್ತಿದ್ದಂತೆ ಬಾರ್‌ಗಳ ಬಾಗಿಲಿಗೆ ಬೀಗ ಹಾಕಬೇಕಾದ್ದು ಸಿಲಿಕಾನ್ ಸಿಟಿಯ ಕಾನೂನು. ಅದರಂತೆ ಸ್ಕೈ ಬಾರ್ ಸಿಬ್ಬಂದಿಗಳು ಪಾರ್ಟಿ ಮುಗಿಸಿ ಹೊರಡುವಂತೆ ಶಾಸಕರ ಟೀಮಿಗೆ ವಿನಂತಿಸಿಕೊಂಡಿದ್ದಾರೆ.

ಅಷ್ಟರಲ್ಲಾಗಲೆ ತೀರ್ಥೋನ್ಮತ್ತನಾಗಿದ್ದ ಸೋಮೇಗೌಡ ತನ್ನ ಎಂದಿನ ಶೈಲಿಯಂತೆ ಇವರು ಎಂಎಲ್‌ಎ, ನಾನು ಅವರ ಭಂಟ, ಕಿರಿಕ್ ಮಾಡಿದರೆ ಸರಿ ಇರಲಿಕ್ಕಿಲ್ಲ, ನಾವು ಕುಡಿದಷ್ಟು ಹೊತ್ತೂ ಸಪ್ಲೇ ಮಾಡುತ್ತಲೇ ಇರಿ ಅಂತ ಧಮಕಿ ಹಾಕಿದ. ರಾಜಕಾರಣಿಗಳನ್ನೂ, ರೌಡಿಗಳನ್ನೂ ಎದುರಾಕಿಕೊಳ್ಳುವುದು ಏತಕ್ಕೆ ಇನ್ನೊಂದರ್ಧ ಗಂಟೆ ಕುಡಿದು ಹೋಗಲಿ ಅಂತ ಬಾರ್‌ನವರೂ ಸುಮ್ಮನಾಗಿದ್ದರು. ಆದರೆ ವಿಜಯ ಕಾಶಪ್ಪನ ಮದ್ಯಾರಾಧನೆ ಮಧ್ಯರಾತ್ರಿಯಾದರು ಮುಗಿಯದ್ದನ್ನು ಕಂಡು ಬಾರ್‌ನವರೂ ತುಸು ಗಡುಸಾಗಿಯೇ ಜಾಗ ಖಾಲಿ ಮಾಡುವಂತೆ ಹೇಳಿದ್ದಾರೆ. ಇದೆಲ್ಲಾ ನಡೆಯುವ ವೇಳೆಗಾಗಲೆ ರಾತ್ರಿ ಒಂದು ಗಂಟೆಯಾಗಿತ್ತು.

ಸೋಮೇಗೌಡ ಹಾಗೂ ಶಾಸಕ ಕಾಶಪ್ಪನ ದಾಂಧಲೆ ತಡೆಯದ ಬಾರ್ ಸಿಬ್ಬಂದಿ ಕೂಡಲೇ ಕಬ್ಬನ್ ಪಾರ್ಕ್ ಪೊಲೀಸರಿಗೆ ಫೋನಾಯಿಸಿ ಸುದ್ದಿ ಮುಟ್ಟಿಸಿದರು. ಹೇಳಿಕೇಳಿ ಐಷಾರಾಮಿ ತಾಣ ನಿರ್ಲಕ್ಷಿಸುವಂತಿಲ್ಲ, ಹಾಗಾಗಿ 1.08 ಗಂಟೆಗೆ ಕರ್ತವ್ಯದಲ್ಲಿದ್ದ ಕಿರಣ್ ಮತ್ತು ಪ್ರಶಾಂತ್ ನಾಯಕ್ ಎಂಬಿಬ್ಬ ಪೇದೆಗಳು ಬಾರ್‌ಗೆ ಆಗಮಿಸಿದರು. ಪೊಲೀಸರು ಬಂದ ಮೇಲಾದರು ಎಚ್ಚೆತ್ತುಕೊಂಡಿದ್ದರೆ ಇಷ್ಟೆಲ್ಲಾ ಅವಾಂತರ ಆಗುತ್ತಿರಲಿಲ್ಲವೇನೊ. ಆದರೆ ಹೊಟ್ಟೆ ಸೇರಿದ್ದ ಹೆಂಡ ಎಚ್ಚೆತ್ತುಕೊಳ್ಳಲು ಅವಕಾಶವನ್ನೆಲ್ಲಿ ಕೊಟ್ಟೀತು. ಜಾಗ ಖಾಲಿ ಮಾಡುವಂತೆ ಪೊಲೀಸರು ಹೇಳಿದರೂ ತಾನು ಎಂಎಲ್‌ಎ ಎನ್ನುವ ಗತ್ತಿನಲ್ಲಿ ಕಾಶಪ್ಪ ಅಸಂಬದ್ಧವಾಗಿ ಒದರಾಡಿದ್ದಾನೆ. ಮಾಮೂಲಿ ಗಿರಾಕಿಗಳಾಗಿದ್ದರೆ ಪೊಲೀಸರು ಲಾಠಿ ಬೀಸಾಡಿಬಿಡುತ್ತಿದ್ದರು. ಆದರೆ ಹೇಳಿಕೇಳಿ ಎಂಎಲ್‌ಎ ವಿಪರೀತವಾಗಿ ನಡೆದುಕೊಳ್ಳಲಿಕ್ಕಾಗುವುದಿಲ್ಲ, ಅಂತಹ ಸಮಯದಲ್ಲಿ ತಾ಼ ಮಾಡಬಹುದಾದ ಏಕೈಕ ಕಾರ್ಯವಾದ ಇಡೀ ಸ್ಥಳ, ಅಲ್ಲಿದ್ದವರು ಹಾಗು ಅವರ ವರ್ತನೆಗಳನ್ನು ಚಿತ್ರೀಕರಿಸಿಕೊಳ್ಳಲು ಕಾನ್‌ಸ್ಟೇಬಲ್ ಕಿರಣ್ ಮುಂದಾಗಿ಼

ಇದರಿಂದ ಮತ್ತಷ್ಟು ಕೆರಳಿದ ಸೋಮೇಗೌಡ ಪೊಲೀಸರಿ಼ ಬಾಯಿಗೆಬಂದಂತೆ ಬೈದಿದ್ದಲ್ಲದೆ ಕಿರಣ್ ಚಿತ್ರೀಕರಿಸಿಕೊಳ್ಳುತ್ತಿದ್ದ ಮೊಬೈಲನ್ನು ಕಿತ್ತುಕೊಳ್ಳಲು ತೂರಾಡುತ್ತಲೇ ಎದ್ದು ಬಂದಿದ್ದಾನೆ. ಕಿರಣ್ ಪ್ರತಿರೋಧ ಒಡ್ಡುತ್ತಿದ್ದಂತೆಯೇ ಹಲ್ಲೆ ಮಾಡಿದ ಸೋಮೇಗೌಡ ಆತನನ್ನು ಕೆಳಗೆ ಬೀಳಿಸಿ ಮೇಲೆ ಹತ್ತಿಕುಳಿತು ಮೊಬೈಲ್ ಕಿತ್ತುಕೊಳ್ಳಲು ಯತ್ನಿಸಿದ. ಇದಿಷ್ಟೂ ಘಟನೆಯನ್ನು ನೋಡುತ್ತಾ ನಿಂತಿದ್ದ ಪ್ರಶಾಂತ್ ನಾಯಕ್, ಸಹೋದ್ಯೋಗಿಯ ಮೇಲಾಗುತ್ತಿದ್ದ ಹಲ್ಲೆಯನ್ನು ತಪ್ಪಿಸಿ ಅವನನ್ನು ಬಿಡಿಸಿಕೊಳ್ಳುವುದಕ್ಕೋಸ್ಕರ ಅತ್ತ ಧಾವಿಸುತ್ತಿದ್ದಂತೆಯೇ ಹುನಗುಂದ ಎಂಎಲ್‌ಎ ಸಾಹೇಬರು ಅಖಾಡಕ್ಕಿಳಿದಿದ್ದರು. ಸೋಮೇಗೌಡನಿಗೆ ಸಾಥ್ ನೀಡಿದ ವಿಜಯಾನಂದ ಕಾಶಪ್ಪ ಪೊಲೀಸರನ್ನೇ ತಳ್ಳಾಡಿ ಒಂದೆರಡು ಏಟು ಕೂಡಾ ಹೊಡೆದಿದ್ದಾನೆ. ಅಲ್ಲಿದ್ದ ಕಾಶಪ್ಪನ ಸುಮಾರು 13-15 ಸಂಗಡಿಗರು ಒಟ್ಟಾಗಿ ದಾಳಿ ಮಾಡಲು ಬರುತ್ತಿದ್ದಂತೆಯೇ ಕೇವಲ ಲಾಠಿ ಬಿಟ್ಟು ಮತ್ತಾವ ಆಯುಧಕ್ಕೂ ಗತಿ ಇಲ್ಲದ ಕಾನ್‌ಸ್ಟೇಬಲ್‌ಗಳು ಕಾಲಿಗೆ ಬುದ್ಧಿ ಹೇಳದೆ ಬೇರೆ ದಾರಿಯೇ ಇರಲಿಲ್ಲ, ಆದರೂ ಶಾಸಕನ ಟೀಮು ಅವರಿಬ್ಬರ ಬೆನ್ನಟ್ಟಿ ಬಾರ್‌ನ ನೆಲ ಮಹಡಿಯವರೆಗೂ ಓಡಿಸಿಕೊಂಡು ಬಂದಿತ್ತು.

ಕುಡಿದ ಅಮಲು ಅಷ್ಟಕ್ಕೇ ಇಳಿಯುವಂತಿರಲಿಲ್ಲ, ಪೇದೆಗಳು ಅತ್ತ ಕಾಲು ಕೀಳುತ್ತಿದ್ದಂತೆಯೇ ಮೊಬೈಲ್ ಕೈಗೆತ್ತಿಕೊಂಡ ಸೋಮೇಗೌಡ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೇ ಫೋನಾಯಿಸಿ ಕರ್ತವ್ಯದಲ್ಲಿದ್ದ ಇನ್ಸ್‌ಪೆಕ್ಟರ್‌ಗೇ ಬಾಯಿಗೆ ಬಂದಂತೆ ಬೈದಿದ್ದ. ಶಾಸಕನ ಗೂಂಡಾಗಿರಿಯಿಂದ ದಂಗು ಬಡಿದ ಕಾನ್‌ಸ್ಟೇಬಲ್‌ಗಳು ಸೀದಾ ಆಸ್ಪತ್ರೆಗೆ ಹೋಗಿ ಮೆಡಿಕಲ್ ಚೆಕಪ್ ಮಾಡಿಸಿಕೊಂಡು ಬೆಳಗಿನ ಜಾವ 3.15ರ ವೇಳೆಗೆ ಠಾಣೆಗೆ ವಾಪಾಸಾಗಿ ಕಾಶಪ್ಪ ಸೋಮೇಗೌಡ ಮತ್ತು ಸಂಗಡಿಗರ ಮೇಲೆ ದೂರು ನೀಡಿದ್ದರು. ಐಪಿಸಿ ಸೆಕ್ಷನ್ 353ರ ಅಡಿ ಸರ್ಕಾರಿ ನೌಕರ ತನ್ನ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿದ ಆರೋಪ ವಿಜಯಾನಂದ ಕಾಶಪ್ಪನ ಹೆಗಲೇರಿದೆ.

ಕಾಶಪ್ಪನ ‘ವಿಜಯ’ ಲೀಲೆ

ವಿಜಯಾನಂದ ಕಾಶಪ್ಪ ಖಾದಿ ತೊಟ್ಟು ಪೊಲಿಟಿಕ್ಸ್‌ಗೆ ಎಂಟ್ರಿ ಕೊಡುವುದಕ್ಕೂ ಮುನ್ನ ಅಪ್ಪ ಮಾಜಿ ಮಂತ್ರಿ ಎಸ್.ಆರ್. ಕಾಶಪ್ಪನವರ ಬೆಚ್ಚಗಿನ ಆರೈಕೆಯಲ್ಲಿ ಕೊಬ್ಬಿ ಬೆಳೆದಂತವ. 2003ರಲ್ಲಿ ಶಾಸಕನಾಗಿದ್ದ ಎಸ್.ಆರ್ ಕಾಶಪ್ಪನವರ್ ಕಾರು ಅಪಘಾತದಲ್ಲಿ ಮೃತಪಟ್ಟ ನಂತರ ವಿಜಯಾನಂದ ಕಾಶಪ್ಪ ರಾಜಕಾರಣದಲ್ಲಿ ಸ್ವತಂತ್ರವಾಗಿ ಮಿಂಚಲು ಶುರು ಮಾಡಿದ. ಅದಕ್ಕೂ ಮುನ್ನ ಇಳಕಲ್ ಗ್ರಾನೈಟ್ ಮಾಫಿಯಾದಲ್ಲಿ ಭರ್ಜರಿಯಾಗಿ ಫಳಗಿದ್ದ ಕಾಶಪ್ಪನ ಗೂಂಡಾಗಿರಿ ಬಗ್ಗೆ ತಿಳಿದಿದ್ದ ಜನ ಎಲ್ಲಿ ಸೋಲಿಸಿ ಬಿಡುತ್ತಾರೊ ಅಂತ ಸ್ವತಃ ಕಾಂಗ್ರೆಸ್ಸಿಗರೆ ವಿಜಯಾನಂದನ ಬದಲಿಗೆ ಅವನ ತಾಯಿ, ಅಂದರೆ ದಿವಂಗತ ಎಸ್.ಆರ್. ಕಾಶಪ್ಪನ ಹೆಂಡತಿ ಗೌರಮ್ಮನಿಗೆ ಉಪಚುನಾವಣೆಯ ಟಿಕೆಟ್ ನೀಡಿದ್ದರು. ಅನಂತರ ಸತತ ಎರಡು ಚುನಾವಣೆಗಳಲ್ಲಿ ಟಿಕೆಟ್ ಗಿಟ್ಟಿಸಿಕೊಂಡು ಎಲೆಕ್ಷನ್‌ಗೆ ನಿಂತನಾದರು ಜನ ಸಾರಾಸಗಟಾಗಿ ತಿರಸ್ಕರಿಸಿದ್ದರು. ಆದರೆ 2013ರಲ್ಲಿ ರಾಜ್ಯಾದ್ಯಂತ ಇದ್ದ ಕಾಂಗ್ರೆಸ್ ಅಲೆಯಲ್ಲಿ ಗೆದ್ದು ವಿಧಾನಸೌಧದ ದಡ ಮುಟ್ಟಿಕೊಂಡಿದ್ದ.


ಸೋಮೇಗೌಡ

ಅಸಲಿಗೆ ವಿಜಯಾನಂದ ಕಾಶಪ್ಪ ರಾಜಕಾರಣಕ್ಕೆ ಇಳಿದಿದ್ದೇ ತನ್ನ ಗ್ರಾನೈಟ್ ಅಕ್ರಮಗಳನ್ನು ರಕ್ಷಿಸಿಕೊಳ್ಳಲು. ಸರ್ಕಾರದ ನೀತಿನಿಯಮಗಳನ್ನೆಲ್ಲ ಮೀರಿ ಇಳಕಲ್‌ನ ಅರಣ್ಯ ಪ್ರದೇಶಗಳಲ್ಲೂ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದೇ ವಿಜಯಾನಂದ ಕಾಶಪ್ಪನ ಕುಮ್ಮಕ್ಕಿನಿಂದ. ಇದಕ್ಕೋಸ್ಕರವೇ ತನ್ನ ತಮ್ಮ ದೇವಾನಂದನನ್ನೇ ನಗರಸಭೆ ಅಧ್ಯಕ್ಷ ಸ್ಥಾನದಲ್ಲಿ ಮೇಯಲು ಬಿಟ್ಟಿದ್ದಾನೆ. ರಿಯಲ್ ಎಸ್ಟೇಟ್ ಮತ್ತು ರೌಡಿಸಂನಷ್ಟೇ ಕರಾಳ ಮುಖ ಹೊಂದಿರುವ ಗ್ರಾನೈಟ್ ದಂಧೆಗೆ ಇಳಿದ ವಿಜಯಾನಂದ ಅದಕ್ಕೆ ತಕ್ಕಂತೆಯೇ ಗೂಂಡಾಗಿರಿ ರೂಢಿಸಿಕೊಂಡಿದ್ದ. ಆತನ ಬಗ್ಗೆ ಹತ್ತಿರದಿಂದ ತಿಳಿದವರು ಪೊಲೀಸರ ಮೇಲೆ ಹಲ್ಲೆ ಮಾಡಿರುವುದರಲ್ಲಿ ಅಚ್ಚರಿಯೇನೂ ಇಲ್ಲ ಎನ್ನುತ್ತಿದ್ದಾರೆ. ಇಂತಹ ಅನೇಕ ಪ್ರಕರಣಗಳಲ್ಲಿ ಆತ ಭಾಗಿಯಾಗಿದ್ದುಂಟು.

ಒಮ್ಮೆ ಗ್ರಾನೈಟ್ ವ್ಯವಹಾರಕ್ಕೆಂದು ಚೀನಾದ ವ್ಯಾಪಾರಿ ಕಂಪನಿಯೊಂದರ ತಂಡ ಇಳಕಲ್‌ಗೆ ಬಂದಿತ್ತು. ವಿಜಯಾನಂದ ಕಾಶಪ್ಪನೊಂದಿಗೇ ಅದು ಒಪ್ಪಂದ ಮಾಡಿಕೊಳ್ಳಬೇಕಿತ್ತು, ಆದರೆ ಇವನ ಕಳಪೆ ಮಾಲನ್ನು ನೋಡಿ ಅವರು ತಿರಸ್ಕರಿಸಿದ್ದರು. ಆಗ ಕೆರಳಿದ ಕಾಶಪ್ಪ ಅವರ ಮೇಲೆಯೇ ಹಲ್ಲೆ ನಡೆಸಿ, ತನ್ನ ಒಂದಿಬ್ಬರು ದಲಿತ ಹಿಂಬಾಲಕರ ಮೂಲಕ ಜಾತಿನಿಂದದನೆಯ ಕೇಸನ್ನು ಚೀನಿಗಳ ಮೇಲೆ ದಾಖಲಾಗುವಂತೆ ಮಾಡಿದ್ದ. ಪಾಪ, ಇಲ್ಲಿಯ ಸಂಸ್ಕೃತಿ ಸಾಮಾಜಿಕ ವ್ಯವಸ್ಥೆಯ ಬಗ್ಗೆಯೇ ತಿಳಿದಿರದ ಚೀನಿಗಳಿಗೆ ಜಾತಿಯ ಹುನ್ನಾರ ಎಲ್ಲಿಂದ ಅರ್ಥವಾಗಬೇಕು, ಅವರ್‍ಯಾಕೆ ದಲಿತರನ್ನು ಜಾತಿ ಹೆಸರಲ್ಲಿ ನಿಂದಿಸಬೇಕು? ಅದೆಲ್ಲಾ ಕಾಶಪ್ಪನ ವ್ಯವಸ್ಥಿತ ಸಂಚಾಗಿತ್ತು.

2009ರ ಫೆಬ್ರವರಿ 6ರಂದು ತನ್ನ ಗ್ರಾನೈಟ್ ವ್ಯವಹಾರಕ್ಕೆ ಪ್ರತಿಸ್ಪರ್ಧಿಯಾಗಿದ್ದ ಅದಕ್ಕಿಂತಲೂ ಹೆಚ್ಚಾಗಿ ತನ್ನ ರಾಜಕೀಯ ಪ್ರತಿಸ್ಪರ್ಧಿ ದೊಡ್ಡನಗೌಡ ಪಾಟೀಲನ ಆಪ್ತನಾಗಿದ್ದ ಹೇರೂರು ಗ್ರಾಮದ ಮಲ್ಲಿಕಾರ್ಜುನ ಶಿವನಾಗಪ್ಪ ಕೊಡಗಲಿ ಎಂಬಾತ ಗ್ರಾನೈಟ್ ಫ್ಯಾಕ್ಟರಿ ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದಾಗ ಇಳಕಲ್‌ನ ಬಸವೇಶ್ವರ ವೃತ್ತದ ಬಳಿ ಏಳು ಜನ ಸಂಗಡಿಗರ ಜೊತೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ ದೂರು ಕೂಡಾ ವಿಜಯಾನಂದ ಕಾಶಪ್ಪನ ಮೇಲೆ ದಾಖಲಾಗಿತ್ತು. ಅದಾದ ಮೇಲೆ ಚುನಾವಣೆಯಲ್ಲಿ ಗೆದ್ದು ಶಾಸಕನಾಗಿದ್ದ ವಿಜಯಾನಂದನಿಗೆ ಆ ಕೇಸು ದೊಡ್ಡ ಕಂಟಕವಾಗಿತ್ತು. ತೀರ್ಪೇನಾದರು ಕಾಶಪ್ಪನ ವಿರುದ್ಧ ಬಂದಿದ್ದರೆ ತನ್ನ ಮೊದಲ ಶಾಸಕಗಿರಿಯನ್ನು ಕಳೆದುಕೊಳ್ಳಬೇಕಾಗುತ್ತಿತ್ತು. ಆದರೆ 2013ರ ಅಕ್ಟೋಬರ್‌ನಲ್ಲಿ ಜಿಲ್ಲಾ ಸೆಷನ್ಸ್ ಕೋರ್ಟ್ ಕಾಶಪ್ಪನಿಗೆ ಕ್ಲೀನ್‌ಚಿಟ್ ನೀಡಿ ನಿಟ್ಟುಸಿರು ಬಿಡುವಂತೆ ಮಾಡಿತು. ಶಾಸಕ ಸ್ಥಾನವೇ ಅಡಕತ್ತರಿಗೆ ಸಿಲುಕುವ ಭಯ ಇದ್ದುದರಿಂದ ಪ್ರತ್ಯಕ್ಷ ಸಾಕ್ಷಿಗಳೊಂದಿಗೆ ದೊಡ್ಡ ಮಟ್ಟದ ಡೀಲ್ ಕುದುರಿಸಿದ್ದೇ ವಿಜಯಾನಂದ ಪ್ರಕರಣದಲ್ಲಿ ಬಚಾವಾಗಲು ಕಾರಣ ಅಂತ ಜನ ಈಗಲೂ ಮಾತಾಡಿಕೊಳ್ಳುತ್ತಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಚೆಕ್‌ಬೌನ್ಸ್ ಆರೋಪದಡಿ ವಿಜಯಾನಂದ ಜೈಲು ಸೇರಬೇಕಾಗಿತ್ತು. ಫೆಬ್ರವರಿ 2, 2011ರಂದೇ ಬೆಂಗಳೂರು ಸೆಷನ್ಸ್ ನ್ಯಾಯಾಲಯ ಅರೆಸ್ಟ್ ವಾರೆಂಟ್ ಕೂಡಾ ಜಾರಿ ಮಾಡಿತ್ತು. ಆದರೆ ತನ್ನ ರಾಜಕೀಯ ಪ್ರಭಾವ ಬಳಸಿಕೊಂಡು ಪೊಲೀಸರನ್ನು ಪಳಗಿಸಿಕೊಂಡ ವಿಜಯಾನಂದ ಜೈಲಿನಿಂದ ಬಚಾವಾಗಿದ್ದ. 2009ರಲ್ಲಿ ಕೋರಮಂಗಲದ ಆರ್. ದಿನೇಶ್ ಎಂಬುವವರಿಂದ ಗ್ರಾನೈಟ್ ವ್ಯವಹಾರಕ್ಕೋಸ್ಕರ ವಿಜಯಾನಂದ ಕಾಶಪ್ಪ ಬರೋಬ್ಬರಿ 32 ಲಕ್ಷ ಸಾಲ ಪಡೆದಿದ್ದ. ಕೆಲವು ತಿಂಗಳ ತರುವಾಯ ಚೆಕ್ ರೂಪದಲ್ಲಿ ವಾಪಸ್ ಮಾಡಿದ್ದ. ಆದರೆ ಅವನ ಖಾತೆಯಲ್ಲಿ ಸಾಕಷ್ಟು ಹಣವಿರದೆ ಚೆಕ್ ಬೌನ್ಸಾಗಿತ್ತು. ಅಷ್ಟಕ್ಕೂ ಅವನ ಬಳಿ ಹಣ ಇರಲಿಲ್ಲ ಎಂದೇನಲ್ಲ, ಆದರೆ ಸಾಲ ವಾಪಾಸ್ ಕೊಡುವ ಇರಾದೆಯೇ ಅವನಿಗಿರಲಿಲ್ಲ. ಯಾಕೆಂದರೆ ಇತ್ತ ಚೆಕ್‌ಬೌನ್ಸ್ ಆದ ಸಮಯದಲ್ಲೇ ಅತ್ತ ಹುನಗುಂದದಲ್ಲಿ ತನ್ನ ತಮ್ಮನ ಮದುವೆಗೆ ಭರ್ಜರಿ ಹಣ ಖರ್ಚು ಮಾಡಿದ್ದ. ಆರತಕ್ಷತೆಯ ವೇದಿಕೆಗೇ 35 ಲಕ್ಷ ಖರ್ಚು ಮಾಡಿದ್ದಾಗಿ ಹೇಳಲಾಗುತ್ತಿದೆ. ತನ್ನ ಹಣಕ್ಕೆ ಉದ್ದೇಶಪೂರ್ವಕವಾಗಿ ಮೋಸ ಮಾಡಿರುವುದು ತಿಳಿದಕೂಡಲೇ ದಿನೇಶ್ ಸಂಜಯ್‌ನಗರ ಪೊಲೀಸ್ ಠಾಣೆಯಲ್ಲಿ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು.


ಖುದ್ದು ಕೋರ್ಟ್ ಬಂಧಿಸುವಂತೆ ನಿರ್ದೇಶನ ನೀಡಿದ್ದರೂ ವಿಜಯಾನಂದ ಬಚಾವಾಗಿದ್ದ. ಆಗಿನ್ನೂ ಶಾಸಕನೂ ಆಗಿರಲಿಲ್ಲ, ಆದರೀಗ ಶಾಸಕ, ಅಧಿಕಾರ ಮತ್ತಷ್ಟೂ ಸನಿಹವಿದೆ. ಹಾಗಾಗಿ ಮತ್ತಾವ ಕರಾಮತ್ತು ನಡೆಸಿ ಕಾನೂನಿಗೆ ಮಣ್ಣೆರಚುತ್ತಾನೊ ಗೊತ್ತಿಲ್ಲ.

ಎಫ್‌ಐಆರ್‌ನಲ್ಲಿ ಶಾಸಕ ವಿಜಯಾನಂದನ ಜೊತೆ ಪ್ರಮುಖ ಆರೋಪಿಯಾಗಿರುವ ಸೋಮೇಗೌಡನನ್ನು ಕೆಪಿಸಿಸಿ ಸದಸ್ಯತ್ವದಿಂದ ವಜಾ ಮಾಡಲಾಗಿದೆಯಾದರು ಇದುವರೆವಿಗೂ ಬೇರಾವ ಕ್ರಮಗಳೂ ಜರುಗಿಲ್ಲ. ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ‘ಕೇಸು ದಾಖಲಾದ ಕೂಡಲೇ ಆರೋಪಿಯನ್ನು ಬಂಧಿಸಬೇಕು ಅಂತೇನಿಲ್ಲ, ಸುಪ್ರೀಮ್ ಕೋರ್ಟ್‌ನ ತೀರ್ಪಿನಂತೆ ಮೂರು ವರ್ಷ ಸಮಯಾವಕಾಶ ಇರುತ್ತೆ. ತನಿಖೆ ನಡೆಸಿ ಸೂಕ್ತ ಸಾಕ್ಷ್ಯ ಕಲೆಹಾಕಿ ತಪ್ಪಿತಸ್ಥನೆಂಬುದು ಗಟ್ಟಿಯಾದರೆ ಮಾತ್ರ ಬಂಧಿಸಬಹುದು. ಒಂದೊಮ್ಮೆ ಎಫ್‌ಆರ್‌ಐನಲ್ಲಿ ಇರುವ ಆರೋಪಿ ತನಿಖೆಗೆ ಅಡ್ಡಿಪಡಿಸುತ್ತಾನೆ ಅಂತೇನಾದರು ಅನ್ನಿಸಿದರೆ ಮಾತ್ರ ಕೂಡಲೇ ಅರೆಸ್ಟ್ ಮಾಡುತ್ತೇವೆ’ ಎಂದು ಮಾತು ಹರಿಬಿಟ್ಟಿದ್ದಾರೆ.

ಹಾಗೊಮ್ಮೆ ವಿಜಯಾನಂದ ಅಪರಾಧಿಯಾಗಿ ಸಾಬೀತಾಗಿಬಿಟ್ಟರೆ ಆತನ ಶಾಸಕ ಸ್ಥಾನವೇ ಅನರ್ಹಗೊಳ್ಳಲಿದೆ. ಆ ಕಾರಣಕ್ಕಾದರು ಆತ ಶತಾಯಗತಾಯ ಬಚಾವಾಗಲು ಹವಣಿಸುತ್ತಾನೆ; ಈಗ ಗೋಚರಿಸುತ್ತಿರುವುದೂ ಅದೇ ಲಕ್ಷಣಗಳು.

● ಗಿರೀಶ್ ತಾಳಿಕಟ್ಟೆ ಮತ್ತು ಮೇಘರಾಜ್





ಬಡವರ ರೈಲು ಪ್ರಯಾಣ ದರ ಒಂದೇ ಉಸಿರಿಗೆ ಏರಿಸಿರುವ ಮೋದಿ ಸರ್ಕಾರ ದಿನಕ್ಕೊಂದು ವಸ್ತು ದುಬಾರಿ ಮಾಡುವ ಹಠಕ್ಕೆ ಬಿದ್ದಂತಿದೆ. ಬೆಟ್ಟದಷ್ಟು ಭರವಸೆ ಇಟ್ಟು ಮೋದಿ ಪಡೆ ಅಧಿಕಾರಕ್ಕೆ ತಂದವರಿಗೆ ಬಲು ಬೇಗ ಭ್ರಮನಿರಸನ ಶುರುವಾಗಿದೆ; ಮೋದಿಗೆ ಕುರುಡಾಗಿ ವೋಟು ಹಾಕಿದವರೀಗ ಗೊಣಗಲಾರಂಭಿಸಿದ್ದಾರೆ. ಮುವ್ವತ್ತು ದಿನದಲ್ಲಿ ಮೋದಿಯ ಕೇಸರಿ ಆಡಳಿತ ಮಾಡಿರುವ ಅವಾಂತರ ಮುಂದಿನ ಐದು ವರ್ಷದಲ್ಲಿ ಅದಿನ್ನೆಂತಹ ಅನಾಹುತ ಮಾಡಬಹುದೆಂಬ ನಿಚ್ಚಳ ಸೂಚನೆ ಬಿಚ್ಚಿಟ್ಟಿದೆ. ಒಂದು ತಿಂಗಳ ಮೋದಿ ಮಸಲತ್ತಿನ ಕೆಲವು ಸ್ಯಾಂಪಲ್ ಇಲ್ಲಿದೆ.

ನೈತಿಕತೆಯಿಲ್ಲದ ನಾಯಕತ್ವ

ದೇಶ ಪ್ರಕ್ಷುಬ್ಧವಾಗಿದ್ದಾಗ ಪ್ರಧಾನಿಯಾದವನು ಪ್ರಬುದ್ಧನಾಗಿರಬೇಕಾಗಿರುತ್ತದೆ. ಕಂಗೆಟ್ಟವರಿಗೆ ಸಮಾಧಾನ ಮಾಡುವ ನೈತಿಕ ನಾಯಕತ್ವ ತೋರಿಸಬೇಕಾಗುತ್ತದೆ. ಆದರೆ ಮೋದಿ ಮಹಾತ್ಮ ಮೂರು ಅನಾಹುತಕಾರಿ ಸಂದರ್ಭದಲ್ಲಿ ಬುದ್ಧಿಪೂರ್ವಕವಾಗೇ ಮೌನವಾಗಿದ್ದ. ಆಗವನ ನೈತಿಕತೆಯೇ ಅನುಮಾನಾಸ್ಪದವಾಗಿತ್ತು. ಬದೌನ್‌ನಲ್ಲಿ ಅತ್ಯಾಚಾರ ಮತ್ತು ಹತ್ಯೆ ನಡೆದಾಗ, ಪುಣೆಯಲ್ಲಿ ಮುಸಲ್ಮಾನ ಎಂಬ ಒಂದೇ ಕಾರಣಕ್ಕೆ ನಿಷ್ಪಾಪಿ ಟೆಕ್ಕಿಯನ್ನು ಹಿಂದೂ ಹರಾಮಿಗಳು ಕೊಂದು ಹಾಕಿದಾಗ ಮತ್ತು ಕೇರಳದ 18 ವಿದ್ಯಾರ್ಥಿಗಳು ತಮ್ಮ ಕಾಲೇಜು ಮ್ಯಾಗಝೀನ್‌ನಲ್ಲಿ ಮೋದಿ ಬಗ್ಗೆ ಅನಿಸಿದ್ದನ್ನು ಹೇಳಿದ್ದಕ್ಕೆ ಅಧಿಕಪ್ರಸಂಗಿ ಪೊಲೀಸರು ಬಂಧಿಸಿದಾಗ ಮೋದಿ ಎಂಬ ಪ್ರಧಾನಿಯ ಖಚಿತ ಅಭಿಪ್ರಾಯ ಅಪೇಕ್ಷಿತವಾಗಿತ್ತು.

ಆಗೆಲ್ಲ ಮೋದಿ ಸ್ಪಷ್ಟವಾಗಿ ಬಾಯಿಯೇ ಬಿಡಲಿಲ್ಲ. ಮೊದಲಿನ ಎರಡು ಘಟನೆಗಳನ್ನು ಮೋದಿ ತನ್ನ ಪಾರ್ಲಿಮೆಂಟ್ ಭಾಷಣದಲ್ಲಿ ಒಲ್ಲದ ಮನಸ್ಸಿನಿಂದಲೇ ಅಲ್ಪಸ್ವಲ್ಪ ಪ್ರಸ್ತಾಪಿಸಿದ್ದ. ಇದು ಕೇವಲ ಪ್ರಸ್ತಾಪ ಮಾತ್ರವೇ ಆಗಿತ್ತಲ್ಲದೆ ತುಂಬ ತಡವಾಗಿ ವ್ಯಕ್ತವಾಗಿತ್ತು. ಕೇರಳದ ಪ್ರಕರಣದಲ್ಲಿ ಮೋದಿ ತಳೆದ ನಿಲುವು ಆತ್ಮಘಾತುಕವಾಗಿತ್ತು. ಪಾಪದ ವಿದ್ಯಾರ್ಥಿಗಳನ್ನು ಬಂಧಿಸಿದ್ದು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗಿತ್ತು. ಮೋದಿಯ ಈ ಉಡಾಫೆ ಪ್ರಶ್ನಾರ್ಹವಷ್ಟೆ ಅಲ್ಲ, ಖಂಡನಾರ್ಹವೂ ಹೌದು. ಇದು ಹಿಂದೂತ್ವದ ದ್ವೇಷ ರಾಜಕಾರಣಕ್ಕೆ ಸಂಕೇತ.

ಡಿಗೆಯೊಳಗಿನ ಅಕ್ಕಿ ಅನ್ನವಾಗಿದೆಯಾ ಎಂದು ಡಲು ಒಂದೆರಡು ಅಗಳು ಹಿಸುಕಿದರೆ ಸಾಕಲ್ಲವಾ? ಘೋಷಿತ ದೇಶೋದ್ಧಾರಕ ಅವತಾರ ಪುರುಷ ಮಹಾತ್ಮನ ಒಂದೇ ಒಂದು ತಿಂಗಳ ದರ್ಬಾರು ಭಾರತವನ್ನು ಯಾವ ದಿಕ್ಕಿನಲ್ಲಿ ಸಾಗಿಸಬಹುದು ದನ್ನು ತೋರಿಸಿದೆ. ಸುಳ್ಳುಗಾರಿಕೆಯನ್ನೇ ಸಿದ್ಧಾಂತ ಕೊಂಡಿರುವ ಮೋದಿ ಬಳಗ ಅಚ್ಛೇ ದಿನಗಳ ಲುಚ್ಚಾ ಯಿಂದ ಅಮಾಯಕ ಜನರ ಬೇಸ್ತು ಬೀಳಿಸಿರುವುದು ಖಾತ್ರಿಯಾಗಿದೆ. ಬರೀ ಮೂವತ್ತು ದಿನಗಳಲ್ಲಿ ಗಟ್ಟಲೆ ದಗಲ್ಬಾಜಿತನ ಮಾಡಿರುವ ಮೋದಿ ಸರ್ಕಾರ ಕವಾಗಿ ಒಂದೇ ಒಂದು ದೃಢ ಹೆಜ್ಜೆ ಇಟ್ಟಿಲ್ಲ. ಯಾರನ್ನೂ ನಂಬದ ಸರ್ವಾಧಿಕಾರಿ ಸ್ವಭಾವದ ಗೆ ತನ್ನ ಮಂತ್ರಿ ಗಣದ ಬಗ್ಗೆಯೇ ನಂಬಿಕೆ ಇದ್ದಂತಿಲ್ಲ. ನ್ನು ಭೇಟಿಯಾಗುವವರು ಪೆನ್‌ನಂಥ ವಸ್ತುಗಳನ್ನು ಮಾತಿಲ್ಲವೆಂದು ರಹಸ್ಯ ಫರ್ಮಾನು ಹೊರಡಿಸಿರುವ ಆಡಳಿತ ಹಿಡನ್ ಕ್ಯಾಮರಾಕ್ಕೆ ಹೆದರಿದಂತಿದೆ. ಯು ಮಂತ್ರಿಗಳು ಪ್ರಾಮಾಣಿಕರಾಗಿದ್ದರೆ ಆತನಿಗೆ ಕೊಂದು ಭಯ ಕಾಡುತ್ತಿತ್ತಾ? ಇದು ಮೋದಿ ದನ ನೈತಿಕತೆಯನ್ನೇ ಸಂಶಯಕ್ಕೀಡುಮಾಡಿದೆ. ರಹಸ್ಯ ಸೂಚಿ ಇಟ್ಟುಕೊಂಡಿರುವುದರಿಂದಲೇ ಮೋದಿ ನಿಗೂಢ ನಡೆ-ನುಡಿ. ರೈಲು ಪ್ರಯಾಣ ದರ ದಷ್ಟೆ ಎನ್‌ಡಿಎ ಸರ್ಕಾರ ಕೊಡುವ ಸಬೂಬು ಯುಪಿಎ ಸರ್ಕಾರವೇ ಈ ನಿರ್ಧಾರಕ್ಕೆ ಎಂಬುದು. ಹಾಗಿದ್ದರೆ ಮುದಿ ಮೋದಿಯ ರಹಸ್ಯ ಯ ಸ್ನೂಪ್‌ಗೇಟ್ ತನಿಖೆಗೇಕೆ ಎನ್‌ಡಿಎ ಸರ್ಕಾರ ಮಾಡುತ್ತಿಲ್ಲ? ಈ ಪ್ರಕರಣದ ನ್ಯಾಯಾಂಗ ತನಿಖೆಗೆ ಎ ಮುಂದಾಗಿತ್ತಲ್ಲವಾ?

ಹೇಳೋದು ವೇದಾಂತ; ಇಕ್ಕೋದು ಗಾಳ. ಇದು ಮತ್ತವನ ಹಿಂದೂತ್ವದ ಪಡೆಯ ನೀತಿ-ನಿಯಮ. ಪದಾರ್ಥಗಳ ಬೆಲೆ ಏರಿಕೆ ನಿಯಂತ್ರಿಸಲಾಗದ ಎ ವೈಫಲ್ಯವನ್ನೇ ಬಂಡವಾಳ ಮಾಡಿಕೊಂಡು ಬೊಬ್ಬೆ ಯುದ್ಧ ಮೋದಿಗೆ ತನ್ನ ಮುವ್ವತ್ತು ದಿನಗಳ ಆಡಳಿತದಲ್ಲಿ ಬ್ಬರಕ್ಕೆ ಕಡಿವಾಣ ಹಾಕುವ ಸಣ್ಣ ಸ್ಕೆಚ್ ಸಹ ಸಿದ್ಧ ವಾಗಿಲ್ಲ. ಅಷ್ಟೇ ಅಲ್ಲ, ಆಹಾರ ಧಾನ್ಯ, ತೈಲ,



370 ನೇ ವಿಧಿ ಆಟ!

ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನ-ಮಾನ ನೀಡಿರುವ 370ನೇ ವಿಧಿ ರದ್ದುಪಡಿಸುವ ಅಸಲೀ ಕೇಸರೀಕರಣ ಪ್ರಕ್ರಿಯೆ ಪ್ರಾರಂಭವಾಗಿದೆ ಎಂಬ ಸುಳಿವು ಪ್ರಧಾನಿ ಕಚೇರಿಯ ಸಹಾಯಕ ಮಂತ್ರಿ ಜಿತೇಂದ್ರ ಸಿಂಗ್ ನೀಡಿದ್ದೇ ತಡ ಕಾಶ್ಮೀರದಲ್ಲಿ ತಲ್ಲಣ ಶುರುವಾಯ್ತು. ಮತೀಯ ಭಾವನೆ ಕೆರಳಿಸುವ ಆಟ ಶುರು ಹಚ್ಚಿಕೊಂಡಿದ್ದ ಕಾಶ್ಮೀರ ಮೂಲದವನೇ ಆದ ಸಿಂಗ್ ಎಂಬ ಹೆಡ್ಡನಿಗೆ 370 ನೇ ವಿಧಿ ಭಾರತ ಮತ್ತು ಜಮ್ಮು-ಕಾಶ್ಮೀರ ಮಧ್ಯದ ಏಕೈಕ ಸಾಂವಿಧಾನಿಕ ಸಂಬಂಧವೆಂಬ ಅಲ್ಪಜ್ಞಾನವೂ ಇಲ್ಲ. ಆಗಲೂ ಮೋದಿ ದಿವ್ಯ ನಿರ್ಲಕ್ಷವೇ ಪ್ರದರ್ಶಿಸಿದ. ಆದರೆ ದೇಶ ದಾದ್ಯಂತ ಈ ಹೇಳಿಕೆಗೆ ಪ್ರಬಲ ವಿರೋಧ ವ್ಯಕ್ತವಾಯ್ತು.

ಶಿಕ್ಷಣ ಮಂತ್ರಿಣಿಯ ವಿಲಕ್ಷಣ ಅರ್ಹತೆ

ಡ್ರಾಪ್‌ಔಟ್ ಸ್ಮೃತಿ ಇರಾನಿಗೆ ಮಹತ್ವದ ಮಾನವ ಸಂಪನ್ಮೂಲ ಖಾತೆ ಕೊಟ್ಟಾಗಲೇ ಮೋದಿಯ ರಹಸ್ಯ ಕಾರ್ಯಸೂಚಿಗಳ ಕಮಟು ವಾಸನೆ ಹಬ್ಬಿತು. ನೆಟ್ಟಗೊಂದು ಡಿಗ್ರಿಯೂ ಮುಗಿಸದ ಸ್ಮೃತಿ ಈ ದೇಶದ ಶೈಕ್ಷಣಿಕ ಹಣೆಬರಹ ಬದಲಿಸುವ "ಸರಸ್ವತಿ" ಆಗಿದ್ದರ ಹಿಂದೆ ಆರೆಸ್ಸೆಸ್ ರಿಂಗಮಾಸ್ಟರ್‌ಗಳ ಮ್ಯಾಜಿಕ್ ಅಡಗಿತ್ತು. ಶಿಕ್ಷಣವನ್ನು ಕೇಸರೀಕರಣ ಮಾಡಲು ಚಡ್ಡಿಗಳಿಗೆ ತಾವು ಹೇಳಿದಂತೆ ಗೋಣು ಹಾಕುವ ಸ್ವಂತಿಕೆಯಿಲ್ಲದ ಪೆದ್ದರು ಶಿಕ್ಷಣ ಮಂತ್ರಿಯಾಗಬೇಕಿತ್ತು. ಆ ಅರ್ಹತೆ ಅರ್ಧಕ್ಕೇ ಕಾಲೇಜು ಬಿಟ್ಟ ಸ್ಮೃತಿಯಲ್ಲಿ ಸಂಘ ಪರಿವಾರ ಕಂಡಿದೆ. ಸ್ಮೃತಿ ಪಕ್ಕಾ ಆರೆಸ್ಸೆಸ್ ಬ್ರಾಂಡ್!

ಈ ಸ್ಮೃತಿಗೆ ತನ್ನದೇ ಶೈಕ್ಷಣಿಕ ಅರ್ಹತೆ ಗೊತ್ತಿಲ್ಲ. ಆಕೆ ಎರಡು ಎಲೆಕ್ಷನ್‌ನಲ್ಲಿ ಎರಡು ರೀತಿ ಶೈಕ್ಷಣಿಕ ಅರ್ಹತೆಯ ಅಫಿಡವಿಟ್ ಕೊಟ್ಟಿದ್ದಾರೆ. 2004 ರಲ್ಲಿ ತಾನು ದಿಲ್ಲಿ ವಿವಿಯ ದೂರಶಿಕ್ಷಣ ಶಾಲೆಯಲ್ಲಿ 1996 ರಲ್ಲಿ ಬಿ.ಎ., ಮುಗಿಸಿದ್ದೇನೆಂದಿದ್ದ ಈಯಮ್ಮ ಕಳೆದ ಲೋಕಸಭೆ ಇಲೆಕ್ಷನ್ ವೇಳೆ ಬಿ.ಕಾಂ- ಭಾಗ 1ವರೆಗೆ ದಿಲ್ಲಿ ವಿವಿಯಲ್ಲಿ 1994 ರಲ್ಲಿ ಮಾಡಿದ್ದೇನೆಂದಿದ್ದಾರೆ. ಇದು ಸ್ಮೃತಿಯನ್ನಷ್ಟೇ ಅಲ್ಲ, ಆಕೆಯ ದೊರೆ ಮೋದಿಯನ್ನೂ ನಗೆಪಾಟಲಿಗೀಡುಮಾಡಿತು. ಭಾರತದ ಶೈಕ್ಷಣಿಕ ಅಚ್ಛೇ ದಿನ್‌ಗಳ ಬಗ್ಗೆ ನೀವೇ ಊಹಿಸಿ!

ರೇಪಿಸ್ಟ್ ಮಿನಿಸ್ಟರ್!

ಮೋದಿ ಸಂಪುಟದಲ್ಲಿ ಮದೋನ್ಮತ್ತ ಹದಿಹರೆಯದ ಹುಡುಗನೊಬ್ಬ ಮಂತ್ರಿಯಾಗಿದ್ದಾನೆ. ಆತ ರಾಜಸ್ಥಾನದ ನಿಹಾಲ್‌ಚಂದ ಮೇಘವಾಲ್. ಜೈಪುರದ 24ರ ಹೆಂಗಸೊಬ್ಬಳ ಮೇಲೆ ಆಕೆಯ ಗಂಡನ ಜೊತೆಗೇ ಈ ಮಂತ್ರಿ ಅತ್ಯಾಚಾರ ಮಾಡಿದ್ದ. ಈತನ ಜೊತೆ ಇನ್ನೂ



15 ಕೀಚಕರ ಗ್ಯಾಂಗ್ ಇತ್ತು ರೇಪ್ ಹೊತ್ತಲ್ಲಿ. ಹಾಗಂತ ಸಂತ್ರಸ್ತ ಮಹಿಳೆಯೇ ಎಫ್‌ಐಆರ್ ದಾಖಲಿಸಿದ್ದಾರೆ. ಮೇಘವಾಲ್ ಮಂತ್ರಿಯಾಗುತ್ತಲೇ ಮಹಿಳಾ ಸಂಘಟನೆಗಳು, ಸಂತ್ರಸ್ತ ಹೆಂಗುಸು ಪ್ರತಿಭಟಿಸಿದರು. ಮೋದಿ ಏನೂ ಆಗಿಯೇ ಇಲ್ಲವೆಂಬಂತೆ ನಿರ್ಲಿಪ್ತರಾಗೇ ಉಳಿದುಕೊಂಡ. ಮಹಿಳೆಯರನ್ನು "ಮಾತೆ" ಎಂದು ಭಾಷಣ ಕುಟ್ಟುವ ಬಿಜೆಪಿಯಲ್ಲಿ ದುಶ್ಯಾಸನರೂ ಮಹನೀಯರೇ!!

ನಜ್ಮಾ ನಖರಾ

ಇಳಿವಯಸ್ಸಿನಲ್ಲಿ ಮಂತ್ರಿಗಿರಿ ಸಿಕ್ಕಿದ್ದೇ ದೊಡ್ಡ ಪುಣ್ಯವೆಂದು ಭಾವಿಸಿರುವ ಮೋದಿಯ ಅಲ್ಪಸಂಖ್ಯಾತರ ವ್ಯವಹಾರಗಳ ಮಂತ್ರಿಣಿ ನಜ್ಮಾ ಹೆಪ್ತುಲ್ಲಾ ಕುಲಕ್ಕೆ ಮೃತ್ಯು ಕೊಡಲಿ ಕಾವು ಎಂಬಂತಾಡುತ್ತಿದ್ದಾರೆ. ಮೋದಿಯ ಹಿಂದಿನ ಸೂತ್ರಧಾರ ಹಿಂದೂತ್ವವಾದಿಗಳಿಗಿದ್ದ ಇಂಥ ಮುಸ್ಲಿಮ್ "ನಾಯಕಿ"ಯ ಅವಶ್ಯಕತೆ ನಜ್ಮಾ ನೀಗಿದ್ದಾರೆ. ಮುಸ್ಲಿಮರಿಗೆ ಮೀಸಲಾತಿ ಅವಶ್ಯಕತೆಯಿಲ್ಲ ಎಂಬುದು ನಜ್ಮಾ ಅಭಿಪ್ರಾಯ. ಆಕೆಯ ಪ್ರಕಾರ ಸ್ಪರ್ಧಾಸ್ಫೂರ್ತಿಯನ್ನು ಮೀಸಲಾತಿ ಕೊಂದು ಹಾಕುತ್ತದಂತೆ. ನಜ್ಮಾರ ಈ ಅಪಕ್ವ ಮಾತುಗಾರಿಕೆ ಅನೇಕ ಅನುಮಾನ-ವಿವಾದಕ್ಕೆ ಕಾರವಾಯ್ತು. ಬಿಜೆಪಿ ಸರ್ಕಾರದ ಬಣ್ಣವನ್ನೂ ಬಯಲಾಗಿಸಿತು.

ಜನರಲ್ ನೇಮಕಾತಿಗೆ ಮಂತ್ರಿ ಕ್ಯಾತೆ

ಭೂಸೇನೆಯಲ್ಲಿದ್ದಾಗ ವಿ.ಕೆ. ಸಿಂಗ್ ಕ್ಯಾತೆಗಳ ಕೇಂದ್ರವಾಗಿದ್ದರು. ಬಿಜೆಪಿ ಸೇರಿ ಈ ದೇಶದ ದುರದೃಷ್ಟಕ್ಕೆ ಮಂತ್ರಿಯೂ ಆದರು. ಆದರೆ ಹಳೆಯ ಚಾಳಿ ಮಾತ್ರ ಬಿಡಲೇ ಇಲ್ಲ. ಮೋದಿ ಹೊಸ ಭೂಸೇನಾ ದಂಡನಾಯಕನ ಆಯ್ಕೆ ಮಾಡಿದಾಗ ಆತನದೇ ಸರ್ಕಾರದ ಈ ಎಡವಟ್ಟು ಮಂತ್ರಿ ಆಕ್ಷೇಪಿಸಿದರು; ಹೊಸ ದಂಡನಾಯಕನನ್ನು ಟೀಕಿಸಿದರು.

ಸೇನೆಯಲ್ಲಿದ್ದಾಗ ವಿ.ಕೆ. ಸಿಂಗ್ ಕೈಗೊಂಡಿದ್ದ ಕಾನೂನು ಬಾಹಿರ ಮತ್ತು ಪೂರ್ವನಿಯೋಜಿತ ನಿರ್ಧಾರಗಳ ವಿರುದ್ಧ ರಕ್ಷಣಾ ಸಚಿವಾಲಯ ಸುಪ್ರೀಂಕೋರ್ಟಿಗೆ ಅಫಿಡವಿಟ್ ಸಲ್ಲಿಸಿತ್ತು. ಲೆಫ್ಟಿನೆಂಟ್ ಜನರಲ್ ಸಿಂಗ್‌ರನ್ನು ಮುಂದಿನ ಜನರಲ್ ಆಗಿ ನೇಮಿಸುವುದನ್ನು ತಡೆಯಲು ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಬೇಕೆಂದು ಲೆಫ್ಟಿನೆಂಟ್ ಜನರಲ್ ರವಿ ದಸ್ತಾನೆ ಸಲ್ಲಿಸಿದ್ದ ಅರ್ಜಿಗೆ ಉತ್ತರವಾಗಿ ರಕ್ಷಣಾ ಇಲಾಖೆಗೆ ಅಫಿಡವಿಟ್ ದಾಖಲಿಸಿತ್ತು. ಈ ನಂಜು ವಿ.ಕೆ. ಸಿಂಗ್‌ರ ಕಾಡುತಿತ್ತು. ಅದು ಹೊಸ ದಂಡನಾಯಕನ ನೇಮಕಾತಿ ಹೊತ್ತಲ್ಲಿ ತಾನೊಬ್ಬ ಮಂತ್ರಿ ಎಂಬುದನ್ನೂ ಮರೆತು ಆತ ಆಸ್ಫೋಟಿಸಿಕೊಂಡರು. ಮೋದಿ ಸರ್ಕಾರ ಮುಜುಗರ ಅನುಭವಿಸಿದರೂ ಅಧಿಕಪ್ರಸಂಗಿ ಮಂತ್ರಿಗೆ ಏನೂ ಮಾಡಲಿಲ್ಲ.

ಹಿಂದಿ ಹೇರಿಕೆ ವಿವಾದ

ಕೇಂದ್ರ ಗೃಹ ಇಲಾಖೆ ಮೇ 27 ರಂದು ಒಂದು ಸುತ್ತೋಲೆ ಹೊರಡಿಸಿ ಭಾಷೆಯ ಬಗ್ಗೆಗೊಂದು ಕಿತಾಪತಿ ಮಾಡಿತು. ಇಂಗ್ಲಿಷ್‌ಗಿಂತ ಹಿಂದಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಆಡಳಿತ ನಡೆಸುವಂತೆ ಎಲ್ಲ ಮಂತ್ರಿ ಇಲಾಖೆ, ಬ್ಯಾಂಕ್ ಮತ್ತು ಸಾರ್ವಜನಿಕ ವಲಯದ ಉದ್ಯಮಗಳಿಗೆ ಈ ಸುತ್ತೋಲೆ ತಾಕೀತು ಮಾಡಿತ್ತು. ಅಂತರ್‌ಜಾಲದಲ್ಲಂತೂ ಹಿಂದಿಗೆ ಪ್ರಾಧಾನ್ಯತೆ ಕೊಡುವಂತೆ ಹೇಳಲಾಗಿತ್ತು. ಇದು ಸಹಜವಾಗೇ ಭಾಷೆಯ ಜೇನುಗೂಡಿಗೆ ಬೆಂಕಿ ಇಟ್ಟಂತೆ ಗೊಂದಲ-ಗಲಾಟೆಗೆ ಕಾರಣವಾಯ್ತು. ತಮಿಳುನಾಡು, ಕರ್ನಾಟಕ ಮತ್ತಿತರ ಹಿಂದಿಯೇತರ ರಾಜ್ಯಗಳಲ್ಲಿ ಮೋದಿ ಸರ್ಕಾರದ ಹೇರಿಕೆ ವಿರುದ್ಧ ಸೊಲ್ಲೆದ್ದಿತು. ಶಿವಸೇನೆ-ಸಮಾಜವಾದಿ ಪಕ್ಷ ಹಿಂದಿ ಉತ್ತೇಜನ ಬೆಂಬಲಿಸಿದರೆ ಕಾಂಗ್ರೆಸ್, ಡಿಎಂಕೆ, ಎಐಡಿಎಂಕೆ... ಮುಂತಾದ ಪಕ್ಷಗಳು ಇದು ತಿರುಗುಬಾಣವಾದೀತೆಂದು ಮೋದಿ ಮಹಾತ್ಮನಿಗೆ ವಾರ್ನಿಂಗ್ ನೀಡಿದವು.


ಯೋಜನಾ ಆಯೋಗ ರದ್ದತಿ ರಗಳೆ

ಸರ್ಕಾರ ಕೊಡುವ ನಿಧಿ ಹಾಗು ಅದನ್ನು ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಹೇಗೆ ಸಮರ್ಥವಾಗಿ-ಪರಿಣಾಮಕಾರಿಯಾಗಿ ಬಳಸಬಹುದೆಂದು ಅಂದಾಜಿಸಲು ದೇಶದ ಪ್ರಪ್ರಥಮ ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ "ಯೋಜನಾ ಆಯೋಗ" ಹುಟ್ಟು ಹಾಕಿದ್ದರು. ರಾಜ್ಯಗಳ ಅಭಿವೃದ್ಧಿಗೆ ಈ ಆಯೋಗ ಸಹಕಾರಿಯಾಗಿತ್ತು. ಅಲ್ಲದೆ ಸರ್ವಶಕ್ತವಾಗಿ ಬೆಳೆದಿತ್ತು. ಇದರ ಮೇಲೆ ಮೋದಿ ಮಹಾತ್ಮನ ಚಿಂತನ ಚಿಲುಮೆಯ ಕೆಂಗಣ್ಣು ಬೀಳಬೇಕಾ?

ಈ ಆಯೋಗದ ರೂಪ ಬದಲಾಗುವ ಊಹಾಪೋಹಗಳು ಎದ್ದವು. ಪ್ರಧಾನಿ ಮೋದಿಜೀ ಆಯೋಗದ ಹಣಕಾಸು ಅಧಿಕಾರ ಮೊಟಕುಗೊಳಿಸಲು ಚಿಂತಿಸುತ್ತಿದ್ದಾರೆಂಬ ಸುದ್ದಿ ಹಬ್ಬಿತು; ಅದೊಂದು ಅಭಿವೃದ್ಧಿ ಚಿಂತನಾ ವೇದಿಕೆಯಾಗಿ ರೂಪಾಂತರವಾಗಬಹುದೆಂಬ ವರದಿಗಳು ಬಂದವು. ವಿವಾದ-ವಿರೋಧ ಭುಗಿಲೆದ್ದಿತು.

ಮೋದಿ ಆಡಳಿತದ ಆರಂಭಿಕ ಎಡವಟ್ಟುಗಳನ್ನು ಈಗ ದೊಡ್ಡ ಚರ್ಚೆಗೆ ಗ್ರಾಸವಂತೂ ಆಗಿದೆ. ಒಂದು ತಿಂಗಳಲ್ಲಿ ಮೋದಿ ಸರ್ಕಾರದ ಬಗ್ಗೆ ಅಂತಿಮ ತೀರ್ಪು ಬರೆಯುವುದು ಸರಿಯಲ್ಲ ನಿಜ. ಆದರೆ ಒಂದಂತೂ ಖರೆ. ಮೋದಿಯನ್ನು ಅವತಾರವೆಂದು ಭಾವಿಸಿದವರಿಗೆ ಆತ ಸಣ್ಣ ಮನುಷ್ಯನೆಂಬುದು ಖಾತ್ರಿ ಪಡಿಸುವಂತಿವೆ [illegible] ದರ್ಬಾರಿಂದ ಹೊರಬರುತ್ತಿರುವ ಹಗರಣಗಳು!!

● ತುದ್ಯೋದನ





ಬಳ್ಳಾರಿ ಜಿಲ್ಲೆ ಎಸ್.ಆರ್. ಪುರ ದಲಿತರ 'ನಮ್ಮ ಭೂಮಿ ನಮ್ಮ ಹಕ್ಕು' ಭೂ ಹೋರಾಟ

ಗಣಿ ಹಗರಣಗಳಿಂದ ದೇಶದ ಗಮನ ಸೆಳೆದ ಬಳ್ಳಾರಿ ಜಿಲ್ಲೆ ಇದೀಗ ಶ್ರೀರಾಮ ರಂಗಾಪುರ ದಲಿತರ 'ನಮ್ಮ ಭೂಮಿ ನಮ್ಮ ಹಕ್ಕು' ಭೂ ಹೋರಾಟದಿಂದ ದೇಶದ ಗಮನ ಸೆಳೆಯುತ್ತಿದೆ. ಹೊಸಪೇಟೆ ತಾಲ್ಲೂಕು ಸುಗ್ಗೇನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಶ್ರೀರಾಮ ರಂಗಾಪುರ (ಕೊಟ್ಟಾಲ್) ಗ್ರಾಮದ 12 ಮಾದಿಗರ ಕುಟುಂಬಗಳೂ ಒಳಗೊಂಡಂತೆ ಆ ಗ್ರಾಮದ ಇನ್ನಿತರ ಕುರುಬರು, ಮುಸ್ಲಿಮರು, ಕಮ್ಮ, ರೆಡ್ಡಿ ಸಮುದಾಯದ 26 ಕುಟುಂಬಗಳಿಗೆ 229 ಎಕರೆಯಷ್ಟು ಭೂಮಿಯನ್ನು ಈ ಕೆಳಗಿನ ಸರ್ವೆ ನಂ. ಅನುಸಾರ 45/ಬಿ, 45/ಸಿ, 116, 51, 116ಎ, 38, 120/ಬಿ2, 20ಸಿ/1, 120ಸಿ/2, 20ಸಿ/1, 120ಸಿ/ಎ, 120ಸಿ/1, 13, 229/ಬಿ, 11, 349, 116/ಸಿ, 348, 45/ಸಿ, 304, 303, 300, 309, 298 ಅನ್ನು ದಿನಾಂಕ 27.09.1978ರಂದು ಭೂನ್ಯಾಯಮಂಡಳಿ (ಲ್ಯಾಂಡ್ ಟ್ರಿಬ್ಯೂನಲ್). ಹೊಸಪೇಟೆ ಇವರು ಕಂಪ್ಲಿ ಪ್ರವಾಸಿಮಂದಿರದಲ್ಲಿ ಸಭೆ ಸೇರಿ, ಮೇಲ್ಕಂಡ ಜಮೀನನ್ನು ಸದರಿ ಕುಟುಂಬಗಳಿಗೆ ಭೂ ಮಂಜೂರು ಮಾಡಿತ್ತು. ಇವರೆಲ್ಲ ಈ ಮೊದಲು ಇದೇ ಭೂಮಿಯಲ್ಲಿ ಆಗಿನ ಭೂಮಾಲೀಕರಾಗಿದ್ದ ಭೀಮನೇನಿ ಕುಟುಂಬದಲ್ಲಿ ಕೂಲಿಕಾರರಾಗಿಯೋ, ಜೀತಗಾರರಾಗಿಯೋ ದುಡಿಯುತ್ತಿದ್ದವರೇ ಆಗಿದ್ದರು. ಆದರೆ ಮಾದಿಗರ ಸಮುದಾಯದ ಕುಟುಂಬಗಳೆಲ್ಲರೂ ಮೂರು ತಲೆಮಾರುಗಳಿಂದಲೂ ಜೀತಗಾರರಾಗಿ ದುಡಿಯುತ್ತಲೇ ಬರುತ್ತಿರುವುದು ಈ ದೇಶದ ಸ್ವಾತಂತ್ರ್ಯವನ್ನು ಗೇಲಿ ಮಾಡುವಂತಿದೆ. ಅನಕ್ಷರಸ್ಥರಾದ ಇವರ ಅಜ್ಞಾನವನ್ನು ಬಂಡವಾಳ ಮಾಡಿಕೊಂಡ ಭೀಮನೇನಿ ಕುಟುಂಬ ವರ್ಗವು ಆಗಿನ ಮುಖ್ಯಮಂತ್ರಿ ದೇವರಾಜು ಅರಸರ ಭೂಸುಧಾರಣಾ ಶಾಸನದ ಅನ್ವಯ ರಚಿಸಲಾದ ಭೂ ನ್ಯಾಯಮಂಡಳಿಯು ಹಂಚಿಕೆ ಮಾಡಿದ್ದ ಭೂಮಿಯನ್ನು ದಲಿತರಿಗೆ ಬಿಟ್ಟುಕೊಡದೆ ಅದೇ ಫಲಾನುಭವಿಗಳನ್ನು ದುಡಿಸಿಕೊಳ್ಳುತ್ತಲೇ ಇದುವರೆಗೂ ಬರುತ್ತಿದ್ದಾರೆ. 1978ರ ಭೂನ್ಯಾಯಮಂಡಳಿ ಆದೇಶವನ್ನು ಯಾವ ಲೆಕ್ಕಕ್ಕೂ ತೆಗೆದುಕೊಳ್ಳದ ಭೂಮಾಲೀಕರು ಈ ದೇಶದ ಕಾನೂನನ್ನು ಎಷ್ಟರಮಟ್ಟಿಗೆ ಗಾಳಿಗೆ ತೂರಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ. ಕಳೆದ 36 ವರ್ಷಗಳಿಂದಲೂ ಜಿಲ್ಲಾಡಳಿತವು ಕಾನೂನು ಉಲ್ಲಂಘನೆ ಬಗ್ಗೆ ತಲೆ ಕೆಡಿಸಿಕೊಳ್ಳದೆ ಕೆಳಹಂತದ ಅಧಿಕಾರಿಗಳಿಂದ ಉನ್ನತಾಧಿಕಾರಿಗಳವರೆಗೂ ಪರೋಕ್ಷವಾಗಿ ಈ ಕಾನೂನನ್ನು ಪಾಲಿಸದೆ ಆರೋಪಿಗಳಾಗಿದ್ದಾರಲ್ಲದೆ, ಭೀಮನೇನಿ ಕುಟುಂಬಕ್ಕೆ ಬೆನ್ನೆಲು ಬಾಗಿ ನಿಲ್ಲುತ್ತ ಬಂದಿದ್ದಾರೆ. ಶೋಷಿತ ದಲಿತ ಸಮುದಾಯಗಳು, ಕೂಲಿಕಾರರು ಭೂಮಾಲೀಕರ ದರ್ಪ ದೌರ್ಜನ್ಯದಲ್ಲಿ ನಲುಗಿ ಹೋಗಿರುವಾಗ ನಮ್ಮ ಭೂಮಿ ನಮಗೆ ಕೊಡಿರೆಂದು ಕೇಳುವುದು ಅಸಾಧ್ಯ ಆಗಿದೆಯಲ್ಲದೆ ಇವರ ಪರವಾಗಿ ಧ್ವನಿಯೆತ್ತುವವರು ಯಾರೂ ಇರಲಿಲ್ಲ; ಈ ಶೋಷಿತ ಸಮುದಾಯಕ್ಕೆ ತಮ್ಮ ಹೆಸರಿನಲ್ಲಿ ಭೂಮಿ ಇದೆಯೆಂದು ತಿಳಿದುಕೊಳ್ಳಲು ತಮ್ಮ ವಂಶದ ಮೂರನೇ ತಲೆಮಾರಿನ ಅಕ್ಷರಸ್ಥರವರೆಗೂ ಕಾಯಬೇಕಾಯಿತು.


ಕಳೆದ ಕಾಲಕ್ಕೆ ಹೋದರೆ, ಭೀಮನೇನಿ ಸೋಮಪ್ಪ ಈ ಭಾಗದ ಆಗಿನ ದೊಡ್ಡ ಭೂಮಾಲೀಕ. ಇವರ 8 ಜನ ಮಕ್ಕಳಲ್ಲಿ ಒಬ್ಬ ಮಗ ಭೀಮನೇನಿ ಕೊಂಡಯ್ಯ ಒಮ್ಮೆ ಎಂಎಲ್ಎ ಸಹ ಆಗಿದ್ದವರು. ಗೂಂಡಾಗಿರಿ, ದೌರ್ಜನ್ಯ, ದರ್ಪ ಅಧಿಕಾರದ ಕಾರಣಗಳಿಂದಲೇ ಹತ್ಯೆಯಾದದ್ದು ಈಗ ಇತಿಹಾಸ. ಈ ಘಟನೆ ನಡೆಯುವವರೆಗೂ ಈ ಕುಟುಂಬಗಳದ್ದೇ ಸಾಮ್ರಾಜ್ಯ. ಇಷ್ಟು ವರ್ಷಗಳಿಂದ ಮಾಡಿದ ವಂಚನೆ ಸಾಲದೆಂದು ಇತ್ತೀಚೆಗೆ ಭೀಮನೇನಿ ಜ್ಯೋತಿ ಗಂಡ ಭೀಮನೇನಿ ಸೋಮಪ್ಪ ಇವರುಗಳು ಸರ್ವೆ ನಂ. 38/1ರ ಪೈಕಿ 11.31 ಎಕರೆ, ಸರ್ವೆ ನಂ. 120/ಸಿ/ಎ/2ರ ಪೈಕಿ 8.06 ಪೈಕಿ ಎಕರೆ ಜಮೀನನ್ನು ಫೋರ್ಜರಿಯಾಗಿ ಕಂಪ್ಲಿ ನೋಂದಣಾಧಿಕಾರಿ ಕಚೇರಿಯಲ್ಲಿ ಬೇನಾಮಿ ವ್ಯಕ್ತಿಯ ನಕಲಿ ಸಹಿ ಹಾಕಿಸಿ ನೋಂದಣಿ ಮಾಡಿಸಿಕೊಂಡಿರುತ್ತಾರೆ. ಮತ್ತು ಹೊಸಪೇಟೆ ಖಾ.ನಂ.15 ಗೋನಾಳ ವ್ಯಾಪ್ತಿಗೆ ಬರುವ ಸರ್ವೆ ನಂ. 120ಸಿ2ಎ 13/3ರ ಪೈಕಿ 4 ಎಕರೆಯನ್ನು ಶ್ರೀಮತಿ ವಿಮಲ ತಂದೆ ಭೀಮನೇನಿ ನೀಲಕಂಠಪ್ಪ ಇವರುಗಳು ಫೋರ್ಜರಿಯಾಗಿ ನೋಂದಣಿ ಮಾಡಿಕೊಂಡಿದ್ದಾರೆ. ಸದರಿ ಜಮೀನುಗಳು 1978ರ ಭೂನ್ಯಾಯ ಮಂಡಳಿ ಆದೇಶದನ್ವಯ 1) ಹರಿಜನ ಪೆದ್ದಣ್ಣ ತಂದೆ ಹರಿಜನ ಮರ್ರಿ ರಾಮುಡು 2) ಲಕ್ಷ್ಮಮ್ಮ ಗಂಡ ಲೇಟ್ ಹರಿಜನ ರೋಷಣ್ಣ 3) ಹೆಚ್. ಮಲ್ಲಮ್ಮ ಗಂಡ ದಿವಂಗತ ದೊಡ್ಡ ಹನುಮಣ್ಣ ಇವರುಗಳಿಗೆ ಹಂಚಿಕೆಯಾಗಿದ್ದವು. ಇದರಲ್ಲಿ ಹರಿಜನ ಮರ್ರಿ ರಾಮುಡು ಅವರು 1990ರಲ್ಲಿ ಮೃತ ಪಟ್ಟಿದ್ದಾರೆ. ಆದರೂ ನೊಂದಣಿ ಕಚೇರಿಯಲ್ಲಿ ಈತ ಜೀವಂತವಾಗಿದ್ದಾನೆಂದು ಸುಳ್ಳು ಮಾಹಿತಿ ನೀಡಿ ಬೇನಾಮಿ ವ್ಯಕ್ತಿಯೊಂದಿಗೆ ನೊಂದಣಿ ಮಾಡಿಸಿಕೊಂಡಿದ್ದಾರೆ. ಈ ರೀತಿಯಾಗಿ ದಲಿತರ ಮೇಲೆ ನಿರಂತರವಾಗಿ ದೌರ್ಜನ್ಯ, ವಂಚನೆ, ಮೋಸಗಳು ನಡೆಯುತ್ತಲೇ ಬಂದಿವೆ. ಭೀಮನೇನಿ ಕುಟುಂಬದವರ ವಂಚನೆ ಪ್ರಕರಣಗಳು ದಲಿತರಿಗಷ್ಟೇ ಸೀಮಿತಗೊಳ್ಳದೆ ಇವರ ಬೀಗರಾದ ಗುಂಡಾಲ ಯರ್ರಿಸ್ವಾಮಿ ಇವರ ಹೆಸರಿಗೆ ಕಮ್ಮ ಜನಾಂಗದ ರಾಜೇಂದ್ರ ಪ್ರಸಾದ್ ತಂದೆ ಗೋವಿಂದಪ್ಪ 11 ಎಕರೆ ಭೂಮಿಯಲ್ಲಿ 6 ಎಕರೆಯನ್ನು ಫೋರ್ಜರಿಯಾಗಿ ನೊಂದಾಯಿಸಿಕೊಂಡಿದ್ದಾರೆ. ಹಾಗೆ ನೋಡಿದರೆ ಕಾನೂನಾತ್ಮಕವಾಗಿ ದಲಿತರ ಜಮೀನುಗಳನ್ನು ಸ್ವತಃ ಅವರೇ ಮಾರುವುದಾಗಲೀ ಮತ್ತು ಬೇರೆಯವರು ಅದನ್ನು ಕೊಳ್ಳುವುದಾಗಲೀ ಸಾಧ್ಯವಿಲ್ಲ. ನೊಂದಣಿ ಅಧಿಕಾರಿಗಳು ಈ ಕಾನೂನಿನ ತಿಳಿವಳಿಕೆ ಇದ್ದೂ ಇಲ್ಲವೆಂಬಂತೆ ವರ್ತಿಸಿದ್ದಾರೆ. ಈ ಪ್ರಕರಣಗಳ ಹಿಂದಿರುವ ಲಂಚ ರುಷುವತ್ತನ್ನು ಯಾರೂ ಊಹಿಸಬಹುದಾಗಿದೆ. ಸ್ವಾತಂತ್ರ್ಯ ಬಂದು ಆರು ದಶಕ ಕಳೆಯುತ್ತ ಬಂದರೂ ರಾಜ್ಯದ ಭೂ ನ್ಯಾಯಮಂಡಳಿ ಆದೇಶವನ್ನು ಪಾಲಿಸದೆ ಇರುವುದು ಭಾರಿ ಅನ್ಯಾಯ. ಇಷ್ಟೆಲ್ಲಾ ದೌರ್ಜನ್ಯ ಮೋಸ ನಡೆಯುತ್ತಿದ್ದರೂ ಸ್ಥಳೀಯ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ದನಿ ಎತ್ತದಿರುವುದು ಇನ್ನೊಂದು ದೊಡ್ಡ ಆಘಾತ. ಶೋಷಣೆಗೆ ಒಳಗಾಗಿರುವ ದಲಿತರು ನೀರಾವರಿ ಭೂಮಿ ಇದ್ದರು ಬದುಕುವುದಕ್ಕಾಗಿ ಊರೂರು ಅಲೆಯುತ್ತಿದ್ದಾರೆ. ಆದರೆ ಹೊಸ ತಲೆಮಾರಿನ ಯುವಜನರಿಗೆ ತಮಗಾಗಿರುವ ವಂಚನೆಯ ಅರಿವು ಉಂಟಾಗಿ ಸಾಮಾಜಿಕ ನ್ಯಾಯಕ್ಕಾಗಿ ಧೈರ್ಯದಿಂದ ಹೋರಾಡಲು ಮುಂದಾಗಿದ್ದಾರೆ. ಆದ್ದರಿಂದ ಇವರ ನ್ಯಾಯಯುತ ಬೇಡಿಕೆಯ ಹೋರಾಟಕ್ಕೆ ಕರ್ನಾಟಕ ಮಾದಿಗರ ರಕ್ಷಣಾ ವೇದಿಕೆ (ಕೆಎಂಆರ್ವಿ) ಮತ್ತು ಕರ್ನಾಟಕ ಜನ ಶಕ್ತಿ (ಕೆಜೆಎಸ್) ಇವು ಎಡಬಲಕ್ಕೆ ಬೆಂಬಲವಾಗಿ ನಿಂತು ಕಳೆದ ಎರಡು ಮೂರು ವರ್ಷದಿಂದ ಹೋರಾಟಕ್ಕೆ ಜನರನ್ನು ಅಣಿಗೊಳಿಸುತ್ತಿವೆ. ಪತ್ರಿಕಾ ಗೋಷ್ಠಿಗಳು, ಎಸ್.ಪಿ, ಡಿ.ಸಿ, ಕಂದಾಯ ಇಲಾಖೆಗಳಿಗೆ ಅಲೆದಾಡಿ ಮಾಹಿತಿಗಳನ್ನು ಸಂಗ್ರಹಿಸಿವೆ; ಮನವಿ ಪತ್ರಗಳನ್ನು ಸಲ್ಲಿಸಿವೆ. ಈ ಹೋರಾಟದ ಪರಿಣಾಮವಾಗಿ ಭೀಮನೇನಿ ಕುಟುಂಬಗಳ ವಿರುದ್ಧ ಕಂಪ್ಲಿ ಪೊಲೀಸ್ ಠಾಣೆಯಲ್ಲಿ ನಾಲ್ಕು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ.


ಹೀಗೆ ಕಳೆದ ನಾಲ್ಕು ದಶಕಗಳಿಂದ ಅನಕ್ಷರತೆ, ಅಜ್ಞಾನದಿಂದ ಎಸ್.ಆರ್.ಪುರದ ದಲಿತ ಕುಟುಂಬಗಳು ವಂಚನೆಗೊಳಗಾಗಿ ಕಷ್ಟಗಳನ್ನು ಅನುಭವಿಸುತ್ತಲೇ ಬಂದಿವೆ. ಭೂನ್ಯಾಯಮಂಡಳಿ ಹಂಚಿದ ಸಂಪದ್ಭರಿತ ನೀರಾವರಿ ಭೂಮಿ ಇವರ ಹೆಸರಿನಲ್ಲಿದ್ದರೂ ಸ್ವಾಧೀನ ಪಡಿಸಿಕೊಳ್ಳಲಾರದೆ ಇವರ ಮಕ್ಕಳು ಮರಿಗಳು ಮಾತ್ರ ಭೀಮನೇನಿ ಜಮೀನ್ದಾರ ಕುಟುಂಬಗಳ ಜೀತ ಮಾಡುತ್ತಲೇ ಬಂದಿದ್ದಾರೆ- ಭಯ ಹಾಗೂ ಭಕ್ತಿಯಿಂದ. ಆದರೀಗ ಅವರು ಸ್ವಾಭಿಮಾನದಿಂದ ಮತ್ತು ಆರ್ಥಿಕ ಅನಿವಾರ್ಯತೆಯಿಂದ ಎದ್ದು ನಿಂತಿದ್ದಾರೆ.


'ನಮ್ಮ ಭೂಮಿ ನಮ್ಮ ಹಕ್ಕು' ಎಂಬ ಇವರ ಹೋರಾಟಕ್ಕೆ ನಾಡಿನ ಪ್ರಜ್ಞಾವಂತರು, ಬುದ್ಧಿಜೀವಿಗಳು, ಪ್ರಗತಿಪರ ಸಂಘಟನೆಗಳು ನೂರಾರು ಸಂಖ್ಯೆಯಲ್ಲಿ ನೆರೆದು ಬೆಂಬಲ ಸೂಚಿಸುತ್ತಿವೆ. ಸರ್ಕಾರದ ಗಮನ ಇತ್ತ ಹರಿಯಬೇಕಾಗಿದೆ. 1978ರಲ್ಲಿ ಭೂನ್ಯಾಯ ಮಂಡಳಿ ನೀಡಿದ ಆದೇಶದ ಅನ್ವಯ ಪಟ್ಟಾ, ಪಹಣಿ ಎಲ್ಲವೂ ಇವರುಗಳ ಹೆಸರಿನಲ್ಲಿ ಇವೆ. ಜಿಲ್ಲಾಡಳಿತ ತಕ್ಷಣ ಭೂಮಿಯನ್ನು ಸರ್ವೆ ನಡೆಸಿ ಆ ಪ್ರಕಾರ ಉಳುಮೆ ಮಾಡಲು ಈ ಜನರಿಗೆ ರಕ್ಷಣೆ ನೀಡಬೇಕಿದೆ. ಈ ಹೋರಾಟವನ್ನು ಒಂದು ಅಂತಿಮ ಘಟ್ಟಕ್ಕೆ ತಂದು ಮುಟ್ಟಿಸಲು 'ನಮ್ಮ ಭೂಮಿ ನಮ್ಮ ಹಕ್ಕು' ಘೋಷಣೆಯೊಂದಿಗೆ ಇದೇ ದಿನಾಂಕ 29.06.2014ರಂದು ಭಾನುವಾರ ಭೂಮಿಯನ್ನು ಉಳುಮೆ ಮಾಡಲು ನಿರ್ಧರಿಸಿದ ಈ ಶೋಷಿತರು ಸಾಂಕೇತಿಕವಾಗಿ 'ನೊಗ ಹೊತ್ತು ಉಳುಮೆ ಮಾಡುವ' ಮೂಲಕ ತಮ್ಮ ತಮ್ಮ ಆತ್ಮಸ್ಥೈರ್ಯವನ್ನೂ, ಶ್ರಮ ಶಕ್ತಿಯ ಘನತೆಯನ್ನೂ ತೋರಿಸಿಕೊಟ್ಟರು. ಕರ್ನಾಟಕದಲ್ಲಿ ಇದೊಂದು ಚಾರಿತ್ರಾರ್ಹ ಘಟನೆಯೇ ಸರಿ.

ಕೊನೆಯದಾಗಿ, 'ನಮ್ಮ ಭೂಮಿ ನಮ್ಮ ಹಕ್ಕು' ಶ್ರೀರಾಮ ರಂಗಾಪುರ ಹೋರಾಟದ ಮಾದರಿಯಲ್ಲಿ ರಾಜ್ಯಾದ್ಯಂತ ಕೇಳಿಬರುವ ಊರುಗಳಲ್ಲಿಯೂ ಈ ಬಗೆಯ ಆಂದೋಲನ ನಡೆಯಬೇಕಾಗಿದೆ. ಭೂ ನ್ಯಾಯಮಂಡಳಿ ಹಂಚಿದ್ದೂ ಹಸ್ತಾಂತರ ಆಗದೆ ಇರುವ ಜಮೀನನ್ನು ಉಳುವವನಿಗೆ ಬಿಟ್ಟು ಕೊಡದೆ ವಂಚಿಸಿ ತಾವೇ ಕಬ್ಜ ಮಾಡಿಕೊಂಡಿರುವ ಜಮೀನ್ದಾರರನ್ನು ಗುರ್ತಿಸಿ, ಅವರ ವಶದಲ್ಲಿರುವ ಜಮೀನನ್ನು ಸರ್ಕಾರ ಹಿಂದೆ ಪಡೆದುಕೊಂಡು ಉಳುವವನಿಗೆ ಹಂಚುವುದು, ಇಲ್ಲವೇ ತನ್ನ ಸ್ವಾಧೀನದಲ್ಲೇ ಇಟ್ಟುಕೊಳ್ಳುವುದು ಆಗಬೇಕು. ಈ ನಿಟ್ಟಿನಲ್ಲಿ ಇತ್ತೀಚೆಗೆ ಗೌರಿ ಲಂಕೇಶ್ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಹೆಸರಿನಲ್ಲಿ 4671 ಎಕರೆ ಜಮೀನು ಇದ್ದು ಇದು ಯಾರಿಂದ, ಯಾವಾಗ, ಹೇಗೆ ಬಂತು ಎಂಬ ಬಗ್ಗೆ ಸವಿವರ ದಾಖಲೆಗಳನ್ನು ಆಗಸ್ಟ್ ತಿಂಗಳೊಳಗೆ ಒದಗಿಸುವಂತೆ ಮಂಗಳೂರಿನ ಜಿಲ್ಲಾಧಿಕಾರಿಗಳು ತನ್ನ ಅಧೀನ ಅಧಿಕಾರಿಗಳಿಗೆ ತುರ್ತು ಪತ್ರ ರವಾನಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಹೀಗೆ ರಾಜ್ಯಾದ್ಯಂತ ಹಾಗೇ ರಾಷ್ಟ್ರವ್ಯಾಪ್ತಿ ಸರ್ವೆ ನಡೆಯಬೇಕು. ಆಗ ಇದೊಂದು ಚಾರಿತ್ರಾರ್ಹ ಸ್ವಾತಂತ್ರ್ಯ ಆಂದೋಲನವೇ ಆಗುತ್ತದೆ. ಮುಖ್ಯವಾಗಿ ಆಳುವ ಸರ್ಕಾರಗಳಿಗೆ ಸಾಮಾಜಿಕ ನ್ಯಾಯಬದ್ಧತೆ ಹಾಗೂ ಸಂಕಲ್ಪಶಕ್ತಿ ಇರಬೇಕು. ನಮ್ಮ ರಾಜ್ಯ ಸರ್ಕಾರಕ್ಕೆ ಈ ಒಂದು ಇಚ್ಛಾಶಕ್ತಿ ಇದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

● ಪ್ರೊ.ಶಿವರಾಮಯ್ಯ, ಬೆಂಗಳೂರು







ಚೋರಡಿಯ ಉದ್ದಕೂದಲಿನ ಹುಲಿ

1

ಹುಲಿಗಳು ನರಭಕ್ಷಕಗಳಾಗುವ ಅನಿವಾರ್ಯತೆಯನ್ನು ಸೃಷ್ಟಿಸುವ ಮಾನವ

ಇದು ಒಂದು ದೊಡ್ಡ ಗಾತ್ರದ ಹುಲಿಯ ಕಥೆ. ಈ ಹುಲಿ ವಾಸವಿದ್ದ ...ಲ್ಲಿ ಇದ್ದ ಜನಗಳಿಗೆ ಬಹಳ ತೊಂದರೆ ಕೊಟ್ಟಿತ್ತು. ಅಷ್ಟೇ ಅಲ್ಲ ...ಲ್ಲಿ ಬೆನ್ನುಹತ್ತುವುದು ಸಾಕಷ್ಟು ಕಷ್ಟವಾಗಿತ್ತು. ಅಂತೂ ಕೊನೆಗೆ ಈ ...ಯನ್ನು ಮಣಿಸಲಾಗಿತ್ತು.

...ಬೇಟೆಯ ಕತೆಗಳನ್ನು ಹೇಳುವಾಗ ಕೇಳುಗರ ಆಸಕ್ತಿಯನ್ನು ...ಕೊಳ್ಳುವುದು ಕತೆ ಹೇಳುವವನ ಉದ್ದೇಶವಾಗಿರುತ್ತದೆ. ಈ ಉದ್ದೇಶ ...ವಾಗಿ ಬೇಟೆಗಾರ ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗಿ ತಾನು ಕೊಂದ ...ಗಳ ಕತೆಯನ್ನು ಮಾತ್ರ ಹೇಳಬೇಕಾಗುತ್ತದೆ. ಹಾಗೆ ಮಾಡದೆ ತಾನು ...ನಾದ ಅಥವಾ ನಿರಾಶೆಗೊಂಡ ಕತೆಗಳನ್ನೆಲ್ಲಾ ಹೇಳುತ್ತಾ ಹೋದರೆ ...ಗರು ಆಸಕ್ತಿ ಕಳೆದುಕೊಳ್ಳುತ್ತಾರೆ. ಆದರೆ ಹೀಗೆ ಯಶೋಗಾಥೆಗಳನ್ನು ... ಹೇಳುವುದರಿಂದ ಕೇಳುಗರು ತಪ್ಪು ಕಲ್ಪನೆಗೆ ಒಳಗಾಗುವ ಸಾಧ್ಯತೆ ... ನರಹಂತಕ ಹುಲಿ ಅಥವಾ ಚಿರತೆಯನ್ನು ಕೊಲ್ಲುವ ಪ್ರಯತ್ನದಲ್ಲಿ ...ಗಾರ ಯಾವಾಗಲೂ ಕೆಲವೇ ದಿನಗಳಲ್ಲಿ ಸುಲಭವಾಗಿ ಯಶಸ್ವಿಯಾಗುತ್ತಾನೆ ...ಬ ಅಭಿಪ್ರಾಯ ಮೂಡಬಹುದು. ಆದರೆ ವಾಸ್ತವ ಇದಕ್ಕೆ ತದ್ವಿರುದ್ಧವೂ ...ಬಹುದು. ಎಷ್ಟೋ ಬಾರಿ ಬೇಟೆಗಾರ ಎದುರಿಸ ಬೇಕಾದ ಪರಿಸ್ಥಿತಿಗಳು ... ಕಷ್ಟಕರವಾಗಿರುತ್ತದೆ. ನರಭಕ್ಷಕನನ್ನು ಹಿಡಿದು ಕೊಲ್ಲಲು ಹಲವಾರು ...ಂಗಳು ಅಥವಾ ಒಮ್ಮೊಮ್ಮೆ ವರ್ಷಗಳೂ ಬೇಕಾಗಬಹುದು. ಕೆಲವೊಮ್ಮೆ ...ಗಳನ್ನು ಕೊಲ್ಲಲು ಆಗದೇ ಹೋಗುವ ಸಾಧ್ಯತೆಗಳೂ ಇವೆ.

ಈಗ ನಾನು ಐದು ವರ್ಷಗಳ ಕಠಿಣ ಪರಿಶ್ರಮದ ನಂತರ ಮುಕ್ತಾಯಗೊಂಡ ...ಯೊಂದರ ಬೇಟೆಯ ಕತೆಯನ್ನು ಹೇಳುತ್ತೇನೆ. ಹಾಗಂತ ಈ ಕತೆ ... ವರ್ಷಗಳ ನಿರಂತರ ಹುಡುಕಾಟವೇನೂ ಆಗಿರದೆ, ಆಗಾಗ ನಡೆದ ...ತ್ನಗಳ ದೊಡ್ಡ ಸರಪಣಿಯಾಗಿದೆ. ನಾನೊಬ್ಬನೇ ಅಲ್ಲದೆ ಮುಂಬೈ ... ಬೆಂಗಳೂರಿನಿಂದ ಬಂದ ಇತರ ಬೇಟೆಗಾರರು ಹಾಗೂ ಸ್ಥಳೀಯ ...ರೂ ಕೂಡ ಈ ಕುತಂತ್ರಿಯ ಪತನಕ್ಕಾಗಿ ಪ್ರಯತ್ನಿಸಿದ್ದರು. ಸುಮಾರು ... ವರ್ಷಗಳ ಕಾಲ ನಾವೆಲ್ಲ ನಮ್ಮ ಪ್ರಯತ್ನದಲ್ಲಿ ವಿಫಲರಾಗಿದ್ದೆವು.

ಈ ಹುಲಿಯ ಕುತ್ತಿಗೆಯ ಸುತ್ತ ಗಂಟಲು ಮತ್ತು ಗದ್ದವನ್ನು ...ಸಿಕೊಂಡಂತೆ ಉದ್ದವಾದ ಕೂದಲಿತ್ತು. ಇಂತಹ ...ಮಾನ್ಯವಾದ ಕೂದಲಿನಿಂದಾಗಿ ಹುಲಿಗೆ 'ಉದ್ದಕೂದಲಿನ ...' ಎಂಬ ಹೆಸರು ಬಂದಿತ್ತು. ಈ ಉದ್ದ ಕೂದಲ ...ಕ್ಕಾಗಿ ಹುಲಿಯ ತಲೆ ಬಹಳ ದೊಡ್ಡದಾಗಿ ಕಾಣುತ್ತಿತ್ತು. ...ಹುಲಿಯನ್ನು ನೋಡಿದ ವರಾರೂ ಬದುಕಿ ...ಉಳಿಯದಿದ್ದರೂ ಎಲ್ಲರೂ ತಮ್ಮ ಕೈಗಳನ್ನು ಅಗಲ ಮಾಡಿ ... ತಲೆಯ ಗಾತ್ರವನ್ನು "ಇಷ್ಟು ದೊಡ್ಡದು" ಎಂದು ...ಸುತ್ತಿದ್ದರು!

...ಚೋರಡಿ ಎಂಬ ಗ್ರಾಮದ ಬಳಿ ಆ ಹುಲಿ ಮೊದಲ ... ಕಾಣಿಸಿಕೊಂಡು ತನ್ನ ಬಲಿಯನ್ನು ತೆಗೆದುಕೊಂಡಿತ್ತು. ...ರಡಿ ಶಿವಮೊಗ್ಗದಿಂದ 16 ಮೈಲು ದೂರವಿರುವ ... ಗ್ರಾಮದಿಂದ ಮುಂದೆ ನಾಲ್ಕು ಮೈಲು ದೂರದಲ್ಲಿತ್ತು. ... ಕಾಡುಗಳಿಂದ ಆವೃತ್ತವಾದ ರಸ್ತೆ ಬದಿಯ ಚಿಕ್ಕ ...ಮವಾಗಿತ್ತು. ಇಲ್ಲಿಂದ ಮುಂದೆ ಆನಂದಪುರಂ ಎನ್ನುವ ...ವನ್ನು ದಾಟಿ ಸಾಗರದ ಮೂಲಕ ತಾಳಗುಪ್ಪ ಎಂಬ ... ಹೋಗಬಹುದಿತ್ತು. ತಾಳಗುಪ್ಪದ ಹತ್ತಿರವೇ ಶರಾವತಿ ನದಿ 950 ... ಕೆಳಕ್ಕೆ ಧುಮುಕಿ ಜೋಗ ಜಲಪಾತವನ್ನು ಸೃಷ್ಟಿಸಿ, ಹುಲುಮಾನವರ ...ಲ್ಲಿ ಒಂದು ಅದ್ಭುತ ಮತ್ತು ಆಶ್ಚರ್ಯವನ್ನುಂಟುಮಾಡುತ್ತಿತ್ತು.

...ಜೋಗ ಜಲಪಾತದ ಮೇಲ್ಭಾಗದಲ್ಲಿ ಎರಡು ಪ್ರವಾಸಿ ಮಂದಿರಗಳಿದ್ದವು. ...ಳೂರು ಬಂಗಲೆ ಎಂದು ಕರೆಸಿಕೊಳ್ಳುತ್ತಿದ್ದ ಸ್ವಲ್ಪ ಆಧುನಿಕ ಕಟ್ಟಡ ಆಗಿನ ...ಳೂರು ರಾಜ್ಯದ ವ್ಯಾಪ್ತಿಗೆ ಬರುತ್ತಿತ್ತು. ಇದರ ಎದುರಿನ ದಂಡೆಯಲ್ಲಿದ್ದ ...ಂದು ಹಳೆಯ ಕಟ್ಟಡ ಆಗಿನ ಮುಂಬೈ ರಾಜ್ಯದ ವ್ಯಾಪ್ತಿಗೆ ಬರುತ್ತಿದ್ದ ... ಅದನ್ನು ಬಾಂಬೆ (ಬ್ರಿಟಿಷ್) ಬಂಗಲೆ ಎಂದು ಕರೆಯುತ್ತಿದ್ದರು. ... ಅಪರೂಪಕ್ಕೆ ಮಾತ್ರ ಜನ ಬರುತ್ತಿದುದರಿಂದ ನಾನು ಬಾಂಬೆ ...ಲೆಯಲ್ಲಿ ಉಳಿಯಲು ಇಷ್ಟಪಡುತ್ತಿದ್ದೆ. ಇಲ್ಲಿ ಕೊಠಡಿಯನ್ನು ...ರಿಸಿಕೊಂಡು ಬರುತ್ತಿದ್ದ ಸಾಕಷ್ಟು ಜನ ಕಾವ್ಯ ಸೃಷ್ಟಿಯ ...ಶಮಾಡಿಕೊಂಡಿರುತ್ತಿದ್ದುದು ಅಸಹಜವಷ್ಟೇ ಅಲ್ಲ ತಮಾಷೆಯಾಗಿಯೂ ...ತ್ತು. ಅಲ್ಲಿಯವರೆಗೂ ಸಾಹಿತ್ಯದ ಬಗೆಗೆ ಆಸಕ್ತಿ ತೋರಿಸುತ್ತಿದ್ದವರ ...ಲ್ಲಿಯೂ ಜಲಪಾತದ ಭವ್ಯ ನೋಟ ಸುಪ್ತವಾಗಿದ್ದ ಕಾವ್ಯಾಸಕ್ತಿಯನ್ನು ...ಸುವ ಸಾಧ್ಯತೆ ಇತ್ತು. ಕೆಲವರು ಕಾವ್ಯ ರಚನೆಯಲ್ಲಿ ಪ್ರಾಮಾಣಿಕವಾದ ... ಚೇತೋಹಾರಿ ಯಾದ ಪ್ರಯತ್ನವನ್ನು ಮಾಡಿದ್ದರು ಕೂಡ. ಆದರೆ ... ಹಲವು ಇಷ್ಟರಮಟ್ಟಿನ ಸಾಹಿತ್ಯಾಸಕ್ತಿಯನ್ನು ಉದ್ದೀಪನಗೊಳಿಸುವ ...ಶಿಸುತ್ತಿರಲಾರದು ಎಂದು ಬರುತ್ತಿದ್ದಿರಬೇಕು!

...ಹಾರಕ್ಕಾಗಿ ಪ್ರಾಣಿಗಳ ಕೊರತೆ ಉಂಟಾಗುವುದಕ್ಕೂ, ಮತ್ತು ಹುಲಿಗಳು ...ಕಗಳಾಗಿ ಬದಲಾಗುವುದಕ್ಕೂ, ಹತ್ತಿರದ ಸಂಬಂಧವಿದೆ. ಕಾಡುಪ್ರಾಣಿಗಳನ್ನು ...ಬೇಟೆ ಕೊಂದುತ್ತಿದ್ದ ಈ ಉದ್ದ ಕೂದಲಿನ ಹುಲಿ ಇದೇ ಕಾರಣಕ್ಕಾಗಿ, ನಿಧಾನವಾಗಿ ಸಾಕುಪ್ರಾಣಿಗಳನ್ನು ಕದಿಯುವ ದರತ್ತ ಹೊರಳಿಕೊಂಡಿತ್ತು. ಶಿವಮೊಗ್ಗ ಜಿಲ್ಲೆಯ ಸುರಕ್ಷಿತ ಅರಣ್ಯಗಳಲ್ಲಿ ಮೇಯಲು ಹೋಗುತ್ತಿದ್ದ ದಷ್ಟಪುಷ್ಟ ಪ್ರಾಣಿಗಳನ್ನು ಹಿಡಿಯುವುದು, ಕಾಡುಪ್ರಾಣಿಗಳನ್ನು ಬೇಟೆಯಾಡುವುದಕ್ಕಿಂತ ಸುಲಭದ ಕೆಲಸವಾಗಿತ್ತು ಈ ಹುಲಿಗೆ. ಹಾಗಾಗಿ ನಿರುಪಾಯಕಾರಿಯಾಗಿದ್ದ ಹುಲಿ ನಿಧಾನವಾಗಿ ಚೋರಡಿಯ ಸುತ್ತಲಿನ ದನಗಾಹಿಂಗಳಿಗೆ ಅತ್ಯಂತ ವಿನಾಶಕಾರಿಕಂಟಕವಾಗಿ ರೂಪಗೊಂಡಿತ್ತು.

ಈ ಉದ್ದ ಕೂದಲಿನ ಹುಲಿ ಒಂದರ ಮೇಲೊಂದರಂತೆ ಸಾಕು ಪ್ರಾಣಿಗಳನ್ನು ಕೊಲ್ಲತೊಡಗಿತು. ಕೊನೆಗೊಂದು ದಿನ ಈ ದನಗಾಹಿಂಗಳ ತಾಳ್ಮೆ ಮುಗಿದು ಅವರು ಹುಲಿಯನ್ನು ಕೊಲ್ಲಲು ಏನಾದರೂ ಮಾಡಬೇಕೆಂದು ನಿರ್ಧರಿಸಿದರು. ಇದರ ಪರಿಣಾಮವಾಗಿ ಒಂದು ದಿನ ಚೋರಡಿ ಊರಿನವನೊಬ್ಬ ತನ್ನ ಸಾಕುಪ್ರಾಣಿಗಳನ್ನು ಕಾಡಿಗೆ ಮೇವಿಗಾಗಿ ಬಿಡುವಾಗ ತನ್ನ ಬಳಿಯಿದ್ದ ಬಂದೂಕನ್ನು ತೆಗೆದುಕೊಂಡು ಹೋಗಲು ಸಿದ್ಧನಾದ. ಸುರಕ್ಷಿತ ಅರಣ್ಯದಲ್ಲಿ ಪರವಾನಗಿ ಇಲ್ಲದೆ ಬಂದೂಕನ್ನು ತೆಗೆದುಕೊಂಡು ಹೋಗುವುದು ಅರಣ್ಯ ಇಲಾಖೆಯ ನಿಯಮಗಳಿಗೆ ವಿರುದ್ಧವಾಗಿದ್ದರೂ ಆತ ಇಂತಹ ಸಾಹಸಕ್ಕಿಳಿದಿದ್ದ.

ಕಾಕತಾಳೀಯವೆಂಬಂತೆ ಅದೇ ದಿನ ಉದ್ದ ಕೂದಲಿನ ಹುಲಿ ಆಕ್ರಮಣ ಮಾಡಿ ಅವನ ಒಂದು ಹಸುವನ್ನು ಕೆಳಕ್ಕುರುಳಿಸಿತು. ಆ ವ್ಯಕ್ತಿ ಮರದ ಹಿಂದೆ ನಿಂತುಕೊಂಡು ಹುಲಿಯ ಕಡೆ ಗುಂಡನ್ನು ಹಾರಿಸಿದ. ದೇಹದ ಬಲಭಾಗದಲ್ಲಿ ಗಾಯಗೊಂಡು ಓಡಿಹೋದ ಹುಲಿ ತಾತ್ಕಾಲಿಕವಾಗಿ ಚೋರಡಿಯ ಪಕ್ಕದ ಕಾಡಿನಿಂದ ಮಾಯ ವಾಯಿತು. ಗ್ರಾಮದ ಎಲ್ಲಾ ಸಾಕುಪ್ರಾಣಿಗಳ ಮಾಲಿಕರೂ ಹುಲಿಯನ್ನು ಓಡಿಸಿದ್ದಕ್ಕಾಗಿ ಆ ವ್ಯಕ್ತಿಗೆ ಕೃತಜ್ಞತೆ ಸಲ್ಲಿಸಿದರು.

ಆದರೆ ಕೆಲವೇ ದಿನಗಳಲ್ಲಿ ಆ ಹುಲಿ ಹಲವಾರು ಮೈಲು ದೂರದ ಆನಂದಪುರಂನ ಸುತ್ತಲಿನ ಪೊದೆ ಕಾಡುಗಳಲ್ಲಿ ಕಾಣಿಸಿಕೊಂಡಿತು. ಬಂದೂಕಿನ ಏಟಿನಿಂದ ಆದ ಗಾಯ ಅದಕ್ಕೆ ಯಾವುದೇ ಹಾನಿ ಮಾಡಿರಲಿಲ್ಲ. ಹಾಗಾಗಿ ಅದು ಇನ್ನೂ ನರಭಕ್ಷಕನಾಗಿ ಬದಲಾಗದೆ ಸಾಕುಪ್ರಾಣಿಗಳ ಬೇಟೆಯ ತನ್ನ ಹಳೆಯ ಅಭ್ಯಾಸವನ್ನೇ ಮುಂದುವರೆಸಿತ್ತು. ಇದರಿಂದ ಕುಪಿತರಾದ ಅಲ್ಲಿನ ಗ್ರಾಮಸ್ಥರು ಹುಲಿ ತಮ್ಮ ದನಕರುಗಳನ್ನು ಹಿಡಿಯಲು ಬಂದಾಗ ಮಚಾನಿನಿಂದ ಮತ್ತೆ ಅದರತ್ತ ಗುಂಡು ಹಾರಿಸಿದರು. ಅದು ಹುಲಿಯ ಬಲಮುಂಗಾಲಿಗೆ ಗಾಯವನ್ನು ಮಾಡಿತು. ಹುಲಿ ಮತ್ತೆ ತಾತ್ಕಾಲಿಕವಾಗಿ ಕಣ್ಮರೆಯಾಗಿ ಜನರಲ್ಲಿ ಹುಸಿ ಭರವಸೆಯನ್ನು ಮೂಡಿಸಿತು.

ಪುನಃ ಆ ಹುಲಿ ಎರಡನೆಯ ಬಾರಿಗೆ ಚೋರಡಿ ಸಮೀಪ ಕಾಣಿಸಿಕೊಂಡಾಗ ಅದು ಹಿಂದಿನಂತೆ ಸಾಕುಪ್ರಾಣಿಗಳ ಮೇಲೆ ಮಾತ್ರ ಆಕ್ರಮಣ ಮಾಡುತ್ತಾ ಮನುಷ್ಯರಿಗೆ ನಿರುಪಾಯಕಾರಿಯಾಗಿ ಉಳಿದಿರಲಿಲ್ಲ. ಕಾಡಿನಲ್ಲಿ ದನಗಾಹಿಂಗಳ





ಮೇಲೆ ಆಕ್ರಮಣ ಮಾಡುವ ಅತ್ಯಂತ ಅಪಾಯಕಾರಿಯಾದ ನರಭಕ್ಷಕ ಹುಲಿಯಾಗಿ ಅದು ಪರಿವರ್ತನೆ ಹೊಂದಿತ್ತು.

ಅದರ ಕಾಲಿಗೆ ಬಡಿದಿದ್ದ ಗುಂಡು ಮೂಳೆಯನ್ನು ಪುಡಿ ಮಾಡಿತ್ತು. ಆಗ ಆದ ಗಾಯ ನಿಧಾನವಾಗಿ ಮಾಗಿದರೂ ಹುಲಿಯ ಬಲಗಾಲು ಸ್ವಲ್ಪ ಗಿಡ್ಡವಾಗಿ ತಿರುಚಿಕೊಂಡಿತ್ತು. ಹಾಗಾಗಿ ಹಿಂದಿನಂತೆ ಅದು ಸದ್ದು ಮಾಡದೆ ತನ್ನ ಬಲಿಯ ಬಳಿ ಬಂದು ಅದರ ಮೇಲೆ ಜಿಗಿದು ಕುತ್ತಿಗೆಯನ್ನು ಮುರಿಯಲು ಸಾಧ್ಯವಾಗುತ್ತಿರಲಿಲ್ಲ. ಅದರ ನಡಿಗೆ ಬಲಿಗಳಿಗೆ ಹುಲಿಯ ಆಗಮನದ ಸೂಚನೆ ನೀಡುವ ಸದ್ದು ಮಾಡುತ್ತಿತ್ತು. ಆಕ್ರಮಣ ಮಾಡುವುದರಲ್ಲಿ ಹುಲಿಗೆ ಹಿಂದಿನಂತೆ ಚುರುಕುತನವಿರಲಿಲ್ಲ. ಮೊಂಡಾದ ಕಾಲಿನಿಂದಾಗಿ ಹುಲಿ ಹಿಡಿದ ಬಲಿಯೂ ತಪ್ಪಿಸಿಕೊಂಡು ಹೋಗುತ್ತಿತ್ತು. ಕ್ರೂರ ವನ್ಯಮೃಗಗಳ ಚುರುಕುತನವನ್ನು ಪಡೆಯದಿದ್ದ ದನಕರುಗಳೂ ಹುಲಿಯ ಬರುವಿಕೆಯನ್ನು ಗುರುತಿಸಲಾರಂಭಿಸಿದ್ದವು. ಅವು ತಮ್ಮ ಮೇಲೆ ಆಕ್ರಮಣ ಮಾಡಿದ್ದ ಈ ಹುಲಿಯನ್ನೇ ಆಚೆ ತಳ್ಳಿ ಓಡಿಹೋಗ ಲಾರಂಭಿಸಿದ್ದವು. ಪರಿಣಾಮವಾಗಿ ಉಪವಾಸದಿಂದ ಕಂಗೆಟ್ಟ ಹುಲಿ ದೈಹಿಕ ಶಕ್ತಿಯನ್ನು ಕಳೆದುಕೊಂಡು ಬಿದಿರು ಮೆಳೆಗಳಲ್ಲಿ ಓಡುತ್ತಿದ್ದ ಇಲಿಗಳನ್ನು ಹಿಡಿಯುವ ದಯನೀಯ ಸ್ಥಿತಿಗೆ ಬಂದಿತ್ತು. ಆ ಇಲಿಗಳೂ ಕೂಡ ಹುಲಿಯ ಕೈಗೆ ಸಿಗದೆ ತಪ್ಪಿಸಿಕೊಳ್ಳತೊಡಗಿದ್ದವು! ಕೊನೆಗೆ ಈ ಹುಲಿಯ ಪೇಗಕ್ಕೆ ಸಿಗಬಹುದಾಗಿದ್ದ ಪ್ರಾಣಿಗಳೆಂದರೆ ಕೆಸರು ಹೊಂಡಗಳಲ್ಲಿ ಇರುತ್ತಿದ್ದ ಬಡಕಲು ಕಪ್ಪೆಗಳು, ಹೊಂಡದ ದಂಡೆಯಲ್ಲಿ ಬದುಕುತ್ತಿದ್ದ ಗಟ್ಟಿ ಕವಚದ ಏಡಿಗಳು ಮತ್ತು ಮಾನವ. ಹೀಗೆ ತೀರಾ ಅನಿವಾರ್ಯವಾಗಿ ಚೋರಡಿಯ ಉದ್ದ ಕೂದಲಿನ ಹುಲಿ ನರಭಕ್ಷಕನಾಗಿತ್ತು.

ಮೇಲಿನ ಎಲ್ಲಾ ಮಾಹಿತಿಯನ್ನು ನಾನು ಆಗಾಗ ಆ ಹಳ್ಳಿಗಳಿಗೆ ಭೇಟಿಮಾಡಿದಾಗ ಸಂಗ್ರಹಿಸಿದ್ದೆ. ಆದರೆ ಹುಲಿಗೆ ಆಗಿದ್ದ ಗಾಯದ ವಿವರಗಳು ಮಾತ್ರ ವರ್ಷಗಳ ಮೇಲೆ ಅದನ್ನು ಬೇಟೆಯಾಡಿದ ನಂತರ ಶವಪರೀಕ್ಷೆ ಮಾಡಿದಾಗ ತಿಳಿದುಬಂದಿತು.

ನರಭಕ್ಷಕನ ಅವಾಂತರಗಳು

ಒಂದು ದಿನ ಆನಂದಪುರಂನ ಬಳಿಯ ಹಳ್ಳಿಗನೊಬ್ಬ ಶಿವಮೊಗ್ಗಕ್ಕೆ ಹೋಗಿ ಮರುದಿನ ಹಿಂತಿರುಗುವುದಾಗಿ ಮನೆಯಲ್ಲಿ ಹೇಳಿ ಹೋಗಿದ್ದ. ಆದರೆ ಅವನು ಮರುದಿನ ಬರಲಿಲ್ಲ. ಇದರಿಂದ ಆತನ ಮನೆಯವರೇನು ತಕ್ಷಣ ಆತಂಕಕ್ಕೆ ಒಳಗಾಗಲಿಲ್ಲ. ಆದರೆ ಮೂರನೆಯ ದಿನವೂ ಅವನು ಹಿಂತಿರುಗಿದ್ದಾಗ ಆ ಹಳ್ಳಿಗನ ದೊಡ್ಡ ಮಗ ಶಿವಮೊಗ್ಗದಿಂದ ತನ್ನ ತಂದೆ ಎರಡು ದಿನದ ಹಿಂದೆಯೇ ಹೊರಟಿದ್ದಾನೆಂಬ ಮಾಹಿತಿ ಸಂಗ್ರಹಿಸಿದ. ಐದನೇ ದಿನವೂ ಅವನು ಮನೆಗೆ ಬರದಿದ್ದಾಗ ಕಾಡಿನ ದಾರಿಯಲ್ಲಿ ಬರುವಾಗ ಯಾರೋ ಡಕಾಯಿತರು ಅವನಲ್ಲಿದ್ದ ಹಣವನ್ನು ಕಸಿದುಕೊಂಡು ಅವನನ್ನು ಕೊಂದಿರಬಹುದೆಂದು ಊಹಿಸಿ ಪೊಲೀಸರಿಗೆ ಅವನ ಮನೆಯವರು ದೂರನ್ನು ನೀಡಿದರು. ನಂತರದ ಹುಡುಕಾಟದಲ್ಲಿ ಊರಿಗೆ ಹೋಗುವ ಕಾಲುದಾರಿಯ ಪಕ್ಕದ ಪೊದೆಯಲ್ಲಿ ಅವನ ಚಪ್ಪಲಿಯೊಂದು ದೊರಕಿತು. ಹಾಗೆಯೇ ಹುಡುಕುತ್ತಾ ಹೋದಂತೆ ಅವನ ಹರಿದ ಬಟ್ಟೆಗಳು ಮತ್ತು ರಕ್ತದ ಗುರುತುಗಳು ಕಂಡುಬಂದವು. ಅಲ್ಲಿದ್ದ ಒಣಗಿದ ಹಳ್ಳದಲ್ಲಿ ಹುಲಿಯ ಹೆಜ್ಜೆಗುರುತುಗಳೂ ಇದ್ದವು. ಇನ್ನೂ ಮುಂದೆ ಹೋದಂತೆ ಯಾವ ಗುರುತುಗಳು ಕಂಡುಬರಲಿಲ್ಲ. ಆಗಿನ ಕಾಲದಲ್ಲಿ ಆನಂದಪುರಂನ ಸುತ್ತಲಿನ ಕಾಡುಗಳಲ್ಲಿ ಹುಲಿಗಳು ಸಾಕಷ್ಟು ಇದ್ದರೂ, ಈ ಹಳ್ಳಿಗನನ್ನು ಹುಲಿಯೇ ಕೊಂದಿದೆ ಎನ್ನುವುದಕ್ಕೆ ಯಾವುದೇ ಖಚಿತ ಪುರಾವೆಗಳಿರಲಿಲ್ಲ. ಹಾಗಾಗಿ ಅವನ ಸಾವು ನಿಗೂಢವಾಗಿಯೇ ಉಳಿಯಿತು.

ಹದಿನೈದು ದಿನಗಳ ನಂತರ ಕುಂಸಿಯಿಂದ ಚೋರಡಿಗೆ ಸೈಕಲ್‌ನಲ್ಲಿ ಹೋಗುತ್ತಿದ್ದ ವ್ಯಕ್ತಿಯೊಬ್ಬ ದಾರಿಯಲ್ಲಿ ಹರಿಯುವ ಹೊಳೆಯೊಂದರಲ್ಲಿ ನೀರು ಕುಡಿಯುತ್ತಿದ್ದ ಹುಲಿಯೊಂದನ್ನು ನೋಡಿದ. ಕುತೂಹಲಗೊಂಡ ಅವನು ಸೈಕಲ್‌ನಿಂದ ಇಳಿಯದೆ ನದಿಗೆ ಅಡ್ಡಲಾಗಿ ಹಾಕಿದ್ದ ಸೇತುವೆಯ ಗೋಡೆಯ ಮೇಲೆ ಒಂದು ಕಾಲಿಟ್ಟುಕೊಂಡು ನೋಡತೊಡಗಿದ. ಇವನನ್ನು ಗಮನಿಸದ ಹುಲಿ ನೀರು ಕುಡಿದು ದಂಡೆಯನ್ನೇರಿ ಪೊದೆಗಳಡಿ ಮರೆಯಾಗುವು ದರಲ್ಲಿತ್ತು. ಸುಮ್ಮನೆ ತಮಾಷೆಗೆ ಆ ವ್ಯಕ್ತಿ "ಶೂ ಶೂ" ಎಂದು ಕೂಗಿದ. ತಕ್ಷಣ ನಿಂತು ಹಿಂತಿರುಗಿ ನೋಡಿದ ಹುಲಿ ಇವನ ಕಡೆ ಗುರುಗುಟ್ಟಿ ಗರ್ಜಿಸಿತು. ಗಾಬರಿಗೊಂಡ ಅವನು ಕೂಡಲೆ ಜೋರಾಗಿ ಸೈಕಲ್ಲನ್ನು ತುಳಿದು ಚೋರಡಿಗೆ ತಲುಪಿ ಎಲ್ಲರಿಗೂ ತನ್ನ ಕತೆ ಹೇಳಿದ.

ಮುಂದೆ ಸುಮಾರು ಒಂದು ತಿಂಗಳು ಯಾವುದೇ ಅಪಾಯಕಾರೀ ಘಟನೆಗಳು ಸಂಭವಿಸಲಿಲ್ಲ. ಆಮೇಲೆ ಒಂದು ದಿನ ತುಪ್ಪೂರು ಎಂಬ ಹಳ್ಳಿಯಲ್ಲಿ ಹುಲಿ ಅಧಿಕೃತವಾಗಿ ತನ್ನ ಮೊದಲ ನರಬಲಿಯನ್ನು ತೆಗೆದುಕೊಂಡಿತು. ಆ ಊರಿನ ಹೆಂಗಸೊಬ್ಬಳು ತನ್ನ ಎಮ್ಮೆಗೆ ಸ್ನಾನ ಮಾಡಿಸಲು ಹತ್ತಿರದ ಹೊಳೆಗೆ ಕರೆದುಕೊಂಡು ಹೋಗಿದ್ದಳು. ತಲೆಯನ್ನು ಮಾತ್ರ ಹೊರಗಿಟ್ಟು ನೀರಿನಲ್ಲಿ ಬಿದ್ದುಕೊಂಡಿದ್ದ ತನ್ನ ಎಮ್ಮೆಯನ್ನು ನೋಡುತ್ತಾ ಕುಳಿತಿದ್ದ ಹೆಂಗಸಿನ ಮೇಲೆ ಹುಲಿ ಆಕ್ರಮಣ ಮಾಡಿತ್ತು. ಕೆಲವೇ ಕ್ಷಣಗಳ ಹಿಂದೆ ಈ ಹೆಂಗಸಿನೊಂದಿಗೆ ಮಾತನಾಡಿಕೊಂಡು, ಹೊಳೆಯಿಂದ ನೀರನ್ನು ತೆಗೆದುಕೊಂಡು ಹೋಗುತ್ತಿದ್ದ ಮತ್ತೊಬ್ಬಳು ಇವಳ ಮಾರಣಾಂತಿಕ ಕೂಗನ್ನು ಕೇಳಿದಳು. ಹಿಂತಿರುಗಿ ನೋಡಿದಾಗ ಹುಲಿ ಹೆಂಗಸನ್ನು ಬಾಯಲ್ಲಿ ಕಚ್ಚಿಕೊಂಡು ಕಾಡಿನಲ್ಲಿ ಪರಾರಿಯಾಗುತ್ತಿತ್ತು.

ಗಾಬರಿಗೊಂಡ ಮತ್ತೊಬ್ಬಳು ನೀರಿನ ಕೊಡವನ್ನು ಅಲ್ಲೇ ಬಿಸಾಕಿ ಹಳ್ಳಿಗೆ ಬಂದು ಸುದ್ದಿಯನ್ನು ತಿಳಿಸಿದಳು. ನಂತರ ಇಂತಹ ಘಟನೆಗಳಲ್ಲಿ ಸಾಮಾನ್ಯವಾಗಿ ನಡೆಯುವುವಂತಹುದೇ ನಡೆಯಿತು. ಸಾಕಷ್ಟು ಜನರನ್ನು ಒಟ್ಟಾಗಿಸಿಕೊಂಡು ಕಾಡಿಗೆ ಹೋದಾಗ ಆ ಹೆಂಗಸಿನ ಶವದ ಅವಶೇಷಗಳು ಮಾತ್ರ ದೊರೆತವು.

ಇದು ಪ್ರಾರಂಭ ಮಾತ್ರವಾಗಿತ್ತು. ಆನಂತರ ಉದ್ದಕೂದಲಿನ ಹುಲಿ ನರಬಲಿಗಳ ಸರಣಿಯನ್ನೇ ಪ್ರಾರಂಭಿಸಿತು. ಅದರ ಕಾರ್ಯಕ್ಷೇತ್ರ ಜೋಗದ ಬಾಂಬೆ ಬಂಗಲೆಯವರೆಗೂ ವ್ಯಾಪಿಸಿತು. ಮಾಮೂಲಿನಂತೆ ಇಲ್ಲಿನ ಅಧಿಕಾರಶಾಹಿ ನಿಧಾನವಾಗಿ ಎಚ್ಚರಗೊಂಡಿತು. ಹಾಗಾಗಿ ಸಾಕಷ್ಟು ಸಮಯದ ನಂತರ ಹುಲಿಯನ್ನು ಬೇಟೆಯಾಡಲು ಮೀಸಲು ಅರಣ್ಯವನ್ನು ಜನಸಾಮಾನ್ಯರಿಗೆ ಮುಕ್ತಗೊಳಿಸಲಾಯಿತು.

(ಮುಂದುವರೆಯುವುದು)

ವಸಂತ ಕಣ್ಣಬಿರಾನ್ ಅವರ ಬಹುಚರ್ಚಿತ ಕೃತಿ 'ಎ ಗ್ರೀಫ್ ಟು ಬರಿ'ಯ ಕನ್ನಡಾನುವಾದ 'ಹುದುಗಲಾರದ ದುಃಖ'ಕೃತಿಯನ್ನು ಅಹರ್ನಿಶಿ ಪ್ರಕಾಶನ ಪ್ರಕಟಿಸಿದ್ದು, ಜುಲೈ 6 ರ ಬೆಳಿಗ್ಗೆ 10ಕ್ಕೆ ಶಿವಮೊಗ್ಗೆಯ ಕರ್ನಾಟಕ ಸಂಘದಲ್ಲಿ ಈ ಕೃತಿ ಬಿಡುಗಡೆ ಸಮಾರಂಭವಿದೆ. ವಿವಿಧ ಕ್ಷೇತ್ರಗಳಲ್ಲಿ ಅಪೂರ್ವವೆನಿಸುವ ಸಾಧನೆ ಮಾಡಿದ ಹನ್ನೆರಡು ಜನ ಮಹಿಳೆಯರು ತಮ್ಮ ವೃತ್ತಿ-ಪ್ರೀತಿ ಮತ್ತು ವ್ಯಥೆಗಳ ನೆನಪನ್ನು ಅಪ್ಪಟ ಪ್ರಾಮಾಣಿಕತೆಯಲ್ಲಿ ಬಿಚ್ಚಿಟ್ಟಿರುವ ಕಥನವೇ 'ಹುದುಗಲಾರದ ದುಃಖ' ಈ ಕೃತಿಯನ್ನು ಕನ್ನಡದ ಹನ್ನೆರಡು ಜನ ಸೃಜನಶೀಲ ಲೇಖಕರು ಅನುವಾದಿಸಿದ್ದು, ಎಂ.ಎಸ್. ಆಶಾದೇವಿ ಅನುವಾದ ಸಂಯೋಜನೆ ಮಾಡಿದ್ದಾರೆ. ಇಲ್ಲಿ ಮೂಡಿಬಂದಿರುವ ತೆಲುಗು ಲೇಖಕಿ ಅಬ್ಬೂರಿ ಛಾಯಾದೇವಿ ಅವರ ನೆನಪುಗಳನ್ನು ಅಗ್ರಹಾರ ಕೃಷ್ಣಮೂರ್ತಿ ಅನುವಾದಿಸಿದ್ದಾರೆ


ಅಬ್ಬೂರಿ ಛಾಯಾದೇವಿ


ನನ್ನ ತಂದೆ ನನಗೊಬ್ಬ ವರನನ್ನು ನಿಶ್ಚಯ ಮಾಡಿದಾಗ ನಾನು ರಾಜಮಂಡ್ರಿಯಲ್ಲಿ ಕಲಿಯುತ್ತಿದ್ದೆ. ಹುಡುಗ ಪೈಲಟ್. ಆತನಿಗೆ ತಾಯಿಯಿರಲಿಲ್ಲ, ಬಹುಶಃ ನನ್ನ ಜೊತೆ ಮದುವೆ ಆತನಿಗೆ ಇಷ್ಟವಿರಲಿಲ್ಲ ಅನಿಸುತ್ತೆ ಆದರೆ ತನ್ನ ತಂದೆ ಹಾಗು ಅಕ್ಕನನ್ನು ಎದುರುಹಾಕಿಕೊಳ್ಳಲಾರದೆ ನಿಶ್ಚಿತಾರ್ಥಕ್ಕೆ ಒಪ್ಪಿದ್ದ. ಮುಂದಿನ ಕೆಲವೇ ದಿನಗಳಲ್ಲಿ ಆತ ತನ್ನ ಮಾತಿಗೆ ತಪ್ಪಿದ. ಎಲ್ಲರೂ ಮದುವೆ ಯಾವಾಗ, ಏನಾಯ್ತು ಅಂತ ಕೇಳತೊಡಗಿದರು. ಅವರಿಗುತ್ತರಿಸುವ ಮುಜುಗರವನ್ನು ಅರಿತುಕೊಂಡ ನನ್ನ ತಂದೆ ನನ್ನನ್ನು ಹೈದರಾಬಾದಿಗೆ ಕಳಿಸಿಬಿಟ್ಟರು. ಹೈದರಾಬಾದಿನಲ್ಲಿ ನಾನು ನನ್ನ ಅಣ್ಣನ ಮನೆಯಲ್ಲಿದ್ದೆ. ಆತ ತಾರನಾಕದಲ್ಲಿದ್ದ ಆಮೇಲೆ ನಾನು ಹೈದರಾಬಾದಿನ ನಿಜಾಂ ಕಾಲೇಜಿನಲ್ಲಿ ಎಂ.ಎ.ಗೆ ಸೇರಿಕೊಂಡೆ. ರೇಡಿಯೊದಲ್ಲಿ ಭಾಷಣ ಹಾಗು ನಾಟಕಗಳಲ್ಲಿ ಭಾಗವಹಿಸತೊಡಗಿದೆ. ಆ ಸಮಯದಲ್ಲೇ ನಾನು ಭಾಸ್ಕರಭಾಟ್ಲ ಕೃಷ್ಣರಾವ್ ಅವರ ಸಂಪರ್ಕಕ್ಕೆ ಬಂದದ್ದು. ನನ್ನ ಬಗ್ಗೆ ಕಾಳಜಿಯಿಟ್ಟಿದ್ದ ಭಾಸ್ಕರಭಾಟ್ಲ ಅವರು ನನಗೆ ಬಹಳಷ್ಟು ಸಾಹಿತ್ಯಕ ಸಲಹೆಗಳನ್ನು ಕೊಡುತ್ತಿದ್ದರು. ಒಂದು ಸಲ ಅವರು "ಗಂಡನನ್ನು ಆಯ್ದುಕೊಳ್ಳುವುದು ಹೇಗೆ" ಎನ್ನುವ ವಿಷಯದ ಬಗ್ಗೆ ಭಾಷಣ ಮಾಡಲು ಹೇಳಿದರು. ನಾನು, ಸಾಮಾನ್ಯವಾಗಿ ಹುಡುಗಿಯರು ತಮ್ಮ ಗಂಡಂದಿರನ್ನು ಬುದ್ಧಿವಂತಿಕೆಯಿಂದ ಆಯ್ಕೆಮಾಡಿಕೊಳ್ಳಬೇಕೆಂದೂ, ಆದರೆ ವರದಕ್ಷಿಣೆಯ ಬೇಡಿಕೆಗಳನ್ನು ದೃಢವಾಗಿ ನಿರಾಕರಿಸಬೇಕೆಂದು ಹೇಳಿದೆ. ಏನೇ ಆದರೂ ಮದುವೆಯೆಂಬುದು ಒಂದು ಸಾಮಾಜಿಕ ಸಂಸ್ಥೆ ಅಲ್ಲಿ ಲೆಕ್ಕಾಚಾರದ ಒಂದು ಅಂಶವಿದ್ದೇ ಇರುತ್ತೆ ಹುಡುಗಿಯರು ಕುರುಡುಕುರುಡಾಗಿ ಪ್ರೇಮಕ್ಕೆ ಬಲಿ ಯಾಗದೆ ಈ ಎಲ್ಲಾ ಅಂಶಗಳನ್ನು ಪರಿಗಣಿಸಬೇಕು. ಆಗ ಭಾಸ್ಕರಭಾಟ್ಲ ನೀನು ಯಾವಾಗ ಮದುವೆಯಾಗ ಬೇಕೆಂದಿರುವೆ ಎಂದು ನನ್ನನ್ನು ಕೇಳಿದರು. ಮೊದಲು ನಾನು ಒಬ್ಬ ಒಳ್ಳೆ ಮನುಷ್ಯನನ್ನು ಹುಡುಕಬೇಕು ಎಂದು ನಾನು ಅವರಿಗೆ ಹೇಳಿದೆ. ನಾನೊಬ್ಬ ಒಳ್ಳೆಯ ಮನುಷ್ಯನನ್ನು ಕರೆತಂದರೆ ಅವನನ್ನ ನೀನು ಮದುವೆ ಮಾಡಿಕೊಳ್ಳುವೆಯಾ ಎಂದು ಅವರು ನನ್ನನ್ನು ಕೇಳಿದರು. ನಾನು, "ಅವನು ವರದಕ್ಷಿಣೆ ಕೇಳದಿದ್ದರೆ ಮಾತ್ರ !" ಎಂದೆ.

ನನ್ನ ಪತಿಯನ್ನು ನನಗೆ ಭಾಸ್ಕರಭಾಟ್ಲ ಅವರು ಪರಿಚಯಿಸಿದರು. ವಾಸ್ತವವಾಗಿ ಅದೊಂದು ಸಮಸ್ಯೆಯ ವಿಷಯವಾಗಿತ್ತು, ಕುಲಗೋತ್ರಗಳ ಬಗ್ಗೆ ಅಲ್ಲ, ನಾವ್ಯಾರೂ ಈ ಸಂಗತಿಯನ್ನು ಅವರ ಕುಟುಂಬದವರಿಗೆ ತಿಳಿಸಬಾರ ದೆಂದು ನನ್ನ ಪತಿ ಒತ್ತಾಯಿಸಿದರು. ತಮ್ಮ ಕುಟುಂಬ ದವರಿಗೆ ತಾವೇ ಈ ಸಂಗತಿಯನ್ನು ತಿಳಿಸಬೇಕೆಂಬ ಅವರ ಬಯಕೆ ನನಗೊಂದು ದೊಡ್ಡ ತಪ್ಪಾಗಿ ಗೋಚರಿ ಸಿತು. ಏನು ಸಮಾಚಾರ? ಯಾಕೆ ಹೀಗೆ ವರ್ತಿಸುತ್ತಿದ್ದಾರೆ? ಎಂಬ ಹಲವು ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಮೂಡಿದವು. ನನ್ನ ಒಂದು ಫೋಟೊ ಪಡೆದು ಅವರು ಹೊರಟು ಹೋದರು. ತಿಂಗಳಾದರೂ ಅವರು ಯಾವ ಮಾತನ್ನೂ ತಿಳಿಸದಿದ್ದಾಗ ನಮ್ಮ ತಂದೆಯವರಿಗೆ ಆತಂಕವುಂಟಾಯಿತು. ಆಗ ಕೆಲವು ಮುಹೂರ್ತಗಳಿದ್ದವು, ಆ ಶ್ರಾವಣ ಮಾಸ ಕಳೆದರೆ ಮತ್ತೆ ಮುಹೂರ್ತಗಳಿಗಾಗಿ ಬಹಳ ದಿನ ಕಾಯಬೇಕಾಗುತ್ತಿತ್ತು, ಅವರಿಗಾಗಲೇ ಒಂದು ನಿಶ್ಚಿತಾರ್ಥ ಮುರಿದು ಬಿದ್ದಿತ್ತು, ಈಗಿನ ಈ ಒಳ್ಳೆಯ ಸಂಬಂಧವೂ ತಪ್ಪಿದರೆ.....

ಯಾವುದಾದರೂ ಒಂದು ಮುಹೂರ್ತ ನಿಗದಿ ಮಾಡಲೇಬೇಕೆಂದು ನಮ್ಮ ತಂದೆ ನನ್ನ ಭಾವಿ ಮಾವನ ವರನ್ನು ಕಂಡು ನಮ್ಮ ಮದುವೆ ಮಾತುಕತೆಯಾಡಲು ವಿಶಾಖಪಟ್ಟಣಕ್ಕೆ ಹೋದರು. ಅವರಿಗೆ ಆಶ್ಚರ್ಯವಾಗಿತ್ತು, ಅದೃಷ್ಟಕ್ಕೆ ನನ್ನ ಪತಿ ತಮ್ಮ ಸೋದರಿಯ ಬಳಿ ತಾನು ಒಬ್ಬ ಹುಡುಗಿಯನ್ನು ಭೆಟ್ಟಿಯಾಗಿ ರುವೆನೆಂದೂ, ಅವಳನ್ನು ಮದುವೆ ಮಾಡಿಕೊಳ್ಳುವ ತೀರ್ಮಾನ ಮಾಡಿರುವೆನೆಂದೂ ತಿಳಿಸಿದ್ದರು. ಆಗಲೇ ಆಕೆ ತಮ್ಮ ತಂದೆಗೊಂದು ಪತ್ರ ಬರೆದು, ವರದ (ಪ್ರಸಿದ್ಧ ಲೇಖಕ, ವಿಮರ್ಶಕ ವರದ ರಾಜೇಶ್ವರ ರಾವ್ ಅಬ್ಬೂರಿ) ಒಬ್ಬಳು ಹುಡುಗಿಯನ್ನು ನೋಡಿದ್ದಾನೆ, ಅವಳನ್ನು ಮದುವೆಯಾಗಲು ಬಯಸಿದ್ದಾನೆ ಎಂದು ತಿಳಿಸಿದ್ದರು. ಆದರೆ ಅವರ ಮನೆಯವರು ಈ ಬೆಳವಣಿಗೆಯ ಬಗ್ಗೆಯಾಗಲಿ, ಅಂತಹದೊಂದು ಪತ್ರ ಬಂದಿರುವ ಬಗ್ಗೆಯಾಗಲಿ ಯಾವ ವಿಷಯವನ್ನೂ ಬಹಿರಂಗ ಮಾಡಲಿಲ್ಲ, ಹಾಗಾಗಿ ನನ್ನ ತಂದೆ ತಮ್ಮ ಭೆಟ್ಟಿಯ ಕಾರಣವನ್ನು ಅವರಿಗೆ ವಿವರಿಸಬೇಕಾಯಿತು. ಗೋತ್ರ ತೋರಿಸಿರುವು ದಾಗಿಯೂ ಅವು ಚೆನ್ನಾಗಿ ಹೊಂದಾಣಿಕೆಯಾ ಗಿವೆಯೆಂದೂ ನಮ್ಮ ತಂದೆಯವರು ಆಶ್ವಾಸನೆ ಕೊಟ್ಟರು.

ಮಳೆಗಾಲದಲ್ಲಿ, ರಾಜಮಂಡ್ರಿಯಲ್ಲಿ ಸತತವಾಗಿ ಪ್ರವಾಹವಿದ್ದ ದಿನಗಳಲ್ಲಿ ಮದುವೆ ನಡೆಯಿತು. ಮದುವೆ ಇನ್ನೆರಡು ದಿನಗಳಿದ್ದಾಗ ಮನೆಗೆ ಸುಣ್ಣಬಣ್ಣ ಬಳಿಯಲು ಸಾಧ್ಯವಾಯಿತು. ನನ್ನ ಮಾವ ಮದುವೆಗೆ ಬಂದೇ ತೀರಬೇಕೆಂಬುದು ನಮ್ಮ ತಂದೆಯವರ ಒತ್ತಾಯ. ಹಣ ಕೊಡುತ್ತೇನೆ, ನೀನು ಏನಾದರೂ ಮಾಡಿಕೋ, ನಾನು ಮದುವೆಯಲ್ಲಿ ಇರಬೇಕೂಂದರೆ ವರನ ತಂದೆತಾಯಿಗಳು ಮದುವೆಗೆ ಬರಲೇಬೇಕು ಅಂದುಬಿಟ್ಟರು. ಅಂತೂ ಕೊನೆಗಳಿಗೆಯಲ್ಲಿ ಅವರು ಬರುವುದಾಗಿ ತಂತಿ ಮೂಲಕ ತಿಳಿಸಿದರು. ಪ್ರವಾಹ ಬೇರೆ.......ನನ್ನ ಗಂಡನ ಸಹೋದ್ಯೋಗಿಗಳು ವರದನ ಮದುವೆ ಪ್ರವಾಹದಲ್ಲಿ ಕೊಚ್ಚಿಹೋಯಿತೆಂದು ತಮಾಷೆ ಮಾಡಿದರು (ತೆಲುಗಿನಲ್ಲಿ ವರದ ಎಂದರೆ ಪ್ರವಾಹ). ಮದರಾಸಿನಿಂದ ನನ್ನ ಭಾವ ಬಂದಿದ್ದರು. ಆರಂಭದ ಶಾಸ್ತ್ರಗಳಿಗೆ ಅವರೆ ಕುಳಿತಿದ್ದರು. ಆನಂತರ ನಮ್ಮ ಮಾವ ಮದುವೆ ಮಂಟಪ ತಲುಪಿದರು. ಮದುವೆ ಮಧ್ಯರಾತ್ರಿಯಲ್ಲಿ ನಡೆಯಿತು. ಅವರು "ವರದ ಭಡ್ತಿಲು" ಅಂದರು, ಆ ಮಾತಿನ ಇಂಗಿತ, "ಮನೆಯಲ್ಲೆ ವರದ ಇರುವುದರಿಂದ ನಮ್ಮೆಲ್ಲರಿಗೂ ಪ್ರವಾಹದ ತೊಂದರೆಯುಂಟಾಯಿತು," ಎಂದು. ನನ್ನ ಅತ್ತೆ ಮಾವಂದಿರು ತುಂಬಾ ದಣಿದಿದ್ದರಿಂದ ಮದುವೆ ಶಾಸ್ತ್ರಗಳನ್ನು ಕಡಿಮೆ ಮಾಡಬೇಕೆಂದರು. ಗೃಹಪ್ರವೇಶದ ಶಾಸ್ತ್ರ ಮಾಡಲಿಲ್ಲ. ಜೊತೆಗೆ ಸಮಯವೂ ಇರಲಿಲ್ಲ, ಮದುವೆ ಮುಗಿಯಿತು,





ಮರುದಿನ ಅವರು ಹೋದರು. ವರದ ಉಳಿದರು. ಆನಂತರದ ಒಂದು ದಿನಕ್ಕೆ ನಮ್ಮ ಪ್ರಯಾಣದ ಟಿಕೆಟ್ಟುಗಳು ಬುಕ್ಕಾಗಿದ್ದವು.

ನಮ್ಮ ಮೊದಲ ರಾತ್ರಿ ನಮ್ಮ ಮನೆಯಲ್ಲೆ ಕಳೆಯಿತು. ಅವರಿದ್ದ ಕೋಣೆಯೊಳಕ್ಕೆ ನಾನು ಹೋದಾಗ ಅವರೊಂದು ಕುರ್ಚಿಯ ಮೇಲೆ ಕುಳಿತಿದ್ದರು. ನಿಮಗೊಂದು ಹಿನ್ನೆಲೆ ಬೇಕಿರುವುದರಿಂದ ಇದನ್ನೆಲ್ಲ ಹೇಳುತ್ತಿದ್ದೇನೆ. ಹೂವಿನ ಯಾವ ಅಲಂಕಾರಗಳೂ ಇರಲಿಲ್ಲ, ನಮ್ಮಮ್ಮ ನನ್ನ ಕೈಗೆ ಒಂದು ತಂಬಿಗೆ ನೀರು ಕೊಟ್ಟು, "ಒಳಗೆ ಹೋಗಿ ಅವರ ಕಾಲನ್ನು ಒತ್ತು" ಅಂದರು. ನನ್ನ ತಂದೆಯವರಿ ಗೇನಾದರೂ ಜ್ವರ ಬಂದಾಗ ಅವರ ಕಾಲನ್ನು ಒತ್ತುತ್ತಿದ್ದೆ. ಆದರೆ ಇವರ ಕಾಲು ಒತ್ತುವುದನ್ನು ನಾನೆಂದೂ ಕಲ್ಪಿಸಿಕೊಂಡಿರಲಿಲ್ಲ. ನಡುಗುತ್ತಾ ಒಳಗೆ ಹೋಗಿ ನೀರಿನ ತಂಬಿಗೆಯನ್ನು ಅವರ ಬಳಿಯಿಟ್ಟು, ಅವರ ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕುಳಿತೆ. ಅವರು ಕೇಳಿದ ಮೊದಲ ಪ್ರಶ್ನೆ, "ನಿಮ್ಮಪ್ಪ ಹೋಗಿ ಯಾಕೆ ನಮ್ಮಪ್ಪನ್ನ ಭೆಟ್ಟಿಯಾಗಿದ್ದ ?" ನಮ್ಮ ಮದುವೆಯ ಮೊದಲ ರಾತ್ರಿಯೇ ನಮ್ಮ ತಂದೆಯ ಬಗ್ಗೆ ಹೀಗೆ ಸೌಜನ್ಯವಿಲ್ಲದೆ ಏಕವಚನದಲ್ಲಿ ಮಾತಾಡಿದ್ದು ನನಗೆ ಆಘಾತವ ನ್ನುಂಟುಮಾಡಿತು. ನಾನು, "ಅದೂ...ನಿಮ್ಮಿಂದ ಯಾವ ಸುದ್ದಿಯೂ ಬರಲಿಲ್ಲವಲ್ಲ... ಕೆಲವು ಮುಹೂರ್ತಗಳಿದ್ದವು. ಅದಕ್ಕೇ ನಿಮ್ಮ ತಂದೆಯನ್ನು ಭೆಟ್ಟಿಯಾಗಬೇಕು ಅಂದುಕೊಂಡರು," ಅಂದೆ. ಅವರು ತಮ್ಮ ತಂದೆ ಆಪಾದನೆಯ ಧಾಟಿಯಲ್ಲಿ ತಮ್ಮ ಸೋದರಿಗೆ ಬರೆದ ಪತ್ರವೊಂದನ್ನು ತೆಗೆದುಕೊಟ್ಟರು. ನಾನು ಅದನ್ನು ಓದುವವರೆಗೂ ನನ್ನನ್ನೇ ನೋಡುತ್ತಿದ್ದರು. ಮೊದಲೇ ನನಗೆ ಆತಂಕವಿತ್ತು, ಇವರು ಬರುವರೊ ಇಲ್ಲವೊ? ಕೆಟ್ಟ ಪ್ರವಾಹ ಒಂದು ಕಡೆ. ಇವರಿಂದ ಯಾವ ಸುದ್ದಿಯೂ ಇರಲಿಲ್ಲ, ಇವರಿಗೆ ಮದುವೆಯಾಗುವ ಯೋಚನೆಯೇ ಇರಲಿಲ ವೇನೋ, ಗೆಳೆಯರು ಒತ್ತಾಯ ಮಾಡಿದ್ದರು. ನಾವು ಹಸೆಮಣೆ ಮೇಲೆ ಕೂತಾಗ ನನ್ನ ಕರ್ಚೀಫು ಕೆಳಗೆ ಬಿದ್ದು ಹೋಗಿತ್ತು, ನಾನು ಮೇಲೆದ್ದಾಗ ಇವರು ಅದನ್ನು ಎತ್ತಿ ನನಗೆ ಕೊಟ್ಟರು. ಆಗ ನನಗೆ, ಎಲ್ಲಾ ಸರಿಯಿದೆ, ಇವರು ನನ್ನನ್ನು ಇಷ್ಟಪಟ್ಟಿದ್ದಾರೆ ಅನ್ನಿಸಿದ್ದು. ಆನಂತರ ಅವರು ತುಂಬಹೊತ್ತು ಕೋಪದಿಂದಿರದೆ ಸರಿ ಹೋದರಾ ದರೂ ನನಗೆ ಅದೊಂದು ದೊಡ್ಡ ಆಘಾತವಾಗಿತ್ತು,

ಆಮೇಲೆ ಸರಿಹೋಯಿತು. ಅವರನ್ನು ಅಪ್ಪಿಕೊಂಡ

ಪುಸ್ತಕ ಪರಿಚಯ

ನಾನು ಅವರಿಗೆ ಮೊದಲು ಹೇಳಿದ್ದು "ನನ್ನನ್ನ
ಬಿಟ್ಟು ಹೋಗಬೇಡಿ". ನಾನು ಅಷ್ಟೊಂ
ಅಸಹಾಯಕಳಾಗಿದ್ದೆ, ರಾಜಮಂಡ್ರಿಯ ಮಧ್ಯಮ ವ
ಬಹುತೇಕ ಕುಟುಂಬಗಳಲ್ಲಿ ಹೆಂಡತಿಯರನ್ನು ಬಿ
ಗಂಡಂದಿರ ಹಾಗು ವರದಕ್ಷಿಣೆ ಪೀಡಿಸುವ ಗಂಡ
ಇತ್ಯಾದಿ ಹಲವಾರು ಕಥೆಗಳಿದ್ದವು. ನಾನು ತು
ಹೆದರಿಬಿಟ್ಟಿದ್ದೆ, ಒಂದು ಸ್ನಾತಕೋತ್ತರ ಪದವಿಯಿ
ದುಡಿಯುವ ಹಾಗು ಪ್ರಗತಿಪರ ವಿಚಾರಗಳನ್ನು ಬ
ಕೊಳ್ಳುವ ಶಕ್ತಿಯಿದ್ದೂ ನಾನು ಅಸಹಾಯಕಳೂ, ಭೀ
ಆಗಿದ್ದೆ.

ಅವರು, "ಛೆ ! ಹಾಗೇನೂ ಆಗುವುದಿಲ್ಲ, ನ
ನಿನ್ನನ್ನು ಬಿಡುವುದಿಲ್ಲ ! ನಾನು ಮದುವೆಯಾಗಿರುವ
ನಿನ್ನನ್ನು ಬಿಟ್ಟುಹೋಗುವುದಕ್ಕೇನು ?" ಅಂದರು. ಅ
ನನ್ನನ್ನು ಇಲ್ಲಿಗೆ ಕರೆತಂದರು, ಅವರಿಂದ ನಾನು ತು
ಉತ್ತೇಜನ ಪಡೆದೆ.

ನಾನು ಅವರ ಸ್ನೇಹಿತರನ್ನು ಭೆಟ್ಟಿಯಾದೆ. ಅವ
ತುಂಬ ಕುಡಿಯುತ್ತಿದ್ದರು. ನಾವು ಮೊದಲ ಬಾರಿ ಒ
ಪಾರ್ಟಿಗೆ ಹೋಗಿದ್ದಾಗ ಇವರು ಕುಡಿಯಲಿಲ್ಲ, ಅ
ಬಹುಶಃ ನನ್ನ ಸಮಾಧಾನಕ್ಕಾಗಿಯೆ ಇರಬೇಕು. ನ
ಮನೆಗೆ ಹಿಂತಿರುಗುವಾಗ, ನಮ್ಮಣ್ಣ ಒಮ್ಮೆ ಒಂದು ಪಾ
ಕರೆದುಕೊಂಡು ಹೋಗಿದ್ದು ಅಲ್ಲಿ ಮದ್ಯಪಾನ ಸರಬರ
ಮಾಡಿದ್ದು, ವಿಧವಿಧವಾದ ಹಾಗು ಮಹಿಳೆಯ
ಇಷ್ಟಪಡುವ ಮದ್ಯಪಾನಗಳ ಬಗ್ಗೆ ಹೇಳಿದೆ. ನಾನು ಇ
ಹೇಳಿದ ಮರುಕ್ಷಣದಲ್ಲಿ ಕಾರನ್ನು ಹಿಂತಿರುಗಿಸಿ ಒ
ಬಾಟಲ್ ಶಾಂಪೇನ್ ಕೊಂಡು ಸೆಲಿಬ್ರೇಟ್ ಮಾಡಿದ

ಶ್ರೀಶ್ರೀ (ಶ್ರೀರಂಗಂ ಶ್ರೀನಿವಾಸರಾವ್ (19
1983), ಶ್ರೀಶ್ರೀ ಎಂದೇ ಕರೆಯಲ್ಪಡುತ್ತಿದ್ದ ಅವರು
ಜನಪ್ರಿಯ ಕ್ರಾಂತಿಕಾರಿ ಕವಿ ಮತ್ತು ಗೀತ ರಚನ
ಹಾಗು ಆರುದ್ರ (ಭಾಗವತುಲ ಸದಾಶಿವ ಶಂಕರ
(1925-1998) ಆರುದ್ರ ಎಂಬ ಕಾವ್ಯನಾಮದಿ
ಪ್ರಸಿದ್ಧರಾಗಿದ್ದ ಅವರು ಆಧುನಿಕ ತೆಲುಗು ಸಾಹಿ
ಪ್ರಸಿದ್ಧ ಪ್ರಗತಿಶೀಲ ಕವಿ) ಮುಂತಾದವರು ಇವರ ಸ್ನೇಹಿ
ಅವರು ಮದರಾಸಿನಿಂದ ಬಂದರೆ ಸ್ನೇಹಿತರೆಲ್ಲ
ಪಾರ್ಟಿ ಮಾಡಿ ಖುಷಿ ಪಡುತ್ತಿದ್ದರು. ಅಡಿಗ
ಬಾರ್‌ಗಳಿಗೆ ಹೋಗುತ್ತಿದ್ದರು. ಅದರ ಬಗ್ಗೆ ನಮ್ಮ ನ
ಪದೇಪದೇ ವಾದವಿವಾದಗಳಾಗುತ್ತಿದ್ದವು. ಮದುವೆ
ನಮ್ಮ ತಂದೆ ಮನೆಯಿಂದ ಯಾವ ವರದಕ್ಷಿಣೆಯ
ಸಿಗದಿದ್ದುದನ್ನುದ್ದೇಶಿಸಿ ಅವರು, "ನಾನು ತುಂಬಾ ಚೀ
ಸಿಕ್ಕಿಬಿಟ್ಟೆ ಅಂತ ನೀನು ಹೀಗೆಲ್ಲ ಮಾತಾಡ್ತಿಯ" ಅಂದ
ನಾನು ಹಿಂತಿರುಗಿಸಿ, "ಇಲ್ಲಾ ನೀವು ನನಗೆ ಚೀಪ
ಬಾರ್ ನಲ್ಲಿ ಸಿಕ್ಕಿರಿ," ಎಂದು ಹೇಳಿದೆ. ಅವರು ಮ
ಬರೋಕೆ ಮುಂಚೆ ಸುಮಾರು ಗಂಟೆಗಳವರೆಗೆ ಕಾಯು
ಒಂದೊಂದು ಸಲ ಮಧ್ಯರಾತ್ರಿ ಅಥವಾ ಬೆಳಗಿನ ಒ
ಗಂಟೆಗೆ ಬರ್ತಿದ್ದರು. ಅವರು ಬಾರ್‌ಗಳಿಗೆ ಹೋಗುತ್ತಿ
ನಾನು ಹೇಳುತ್ತಿದ್ದೆ, "ನೀವು ಹನ್ನೆರಡು ಗಂಟೆವ
ಹೊರಗಿರತೀರ, ನಾನು ಮನೆಯಲ್ಲಿ ಒಬ್ಬಳೆ. ನೀ
ಮನೆಯಲ್ಲೇ ಸೇರಿಕೊಬಾರದು?" ಸಾಮಾನ್ಯ
ಬೇರೆಯವರ ಹೆಂಡತಿಯರು ಇದಕ್ಕೆ ಒಪ್ಪುವುದಿಲ್ಲ, ನ
ಅವರೆಲ್ಲ ಮನೆಯಲ್ಲೆ ಸೇರುವುದಕ್ಕೆ ಅನುವು ಮಾಡಿಕೊ


ಅವರಿಗೆ ಪಕೋಡ ಮತ್ತಿತರ ಕುರುಕು ತಿ
ಕೊಡುತ್ತಾ ಅವುಗಳ ಜೊತೆ ಇರುತ್ತಿದ್ದೆ. "ಹೋ
ಇಲ್ಲಿ ಕೂರಬೇಡ, ಹೋಗಿ ಪರದೆ ಹಿಂದೆ ಕೂತುಕೊ
ಅಂತ ಅವರು ಎಂದೂ ಹೇಳಿದವರಲ್ಲ, ಅವರ ಜೊ
ಕುಳಿತುಕೊಳ್ಳುವುದಕ್ಕೆ ಬಿಡುತ್ತಿದ್ದರು. ನಾನು ಹಲವ
ಸಂಗತಿಗಳನ್ನು ಕಲಿತೆ. ಕಲಿಕೆ ಮತ್ತು ತಿಳಿವಳಿಕೆಯಿಂ
ಅದೊಂದು ಶ್ರೀಮಂತ ಅನುಭವವಾಗಿತ್ತು, ಅವರ ಜೊ
ಇರುವುದು ನನಗೆ ಸಂತೋಷ ಕೊಡುತ್ತಿತ್ತು, ಅ
ಕುಡಿಯುವುದನ್ನು ನಾನೆಂದೂ ವಿರೋಧಿಸಲಿಲ್ಲ, ಅ
ಸಮ್ಮತವಲ್ಲ ಎಂದು ನನಗೆಂದೂ ಅನಿಸಲಿಲ್ಲ, ನಾನೆಂ
ಬಿಯರ್ ಇಷ್ಟಪಡಲಿಲ್ಲ - ಅದರ ರುಚಿಯನ್ನಾಗಲಿ ಅಥ
ವಾಸನೆಯನ್ನಾಗಲಿ. ಅದರ ರುಚಿ ಸೀಗೇಕಾಯಿ
ಜ್ಯೂಸ್‌ನಂತಿರುತ್ತದೆ. ಆನಂತರ ನನಗೆ ಜಿಮ್ಲೆಟ್‌ಗಳ
ಕೊಡುತ್ತಿದ್ದರು. ಆಮೋದಕ್ಕೇನೊ ಅದು ಸರಿ, ಆ
ನಾನು ಅದನ್ನೂ ಅಷ್ಟೇನೂ ಇಷ್ಟಪಡಲಿಲ್ಲ, ನಾನು ಫ
ದೇಶಕ್ಕೆ ಹೋಗಿದ್ದಾಗ ಹಲವಾರು ಬಗೆಯ ವೈನ
ರುಚಿ ನೋಡಿದೆ. ಜಿಮ್ಲೆಟ್ ಗಳನ್ನು ಕುಡಿದೆ.
ನಿಷೇಧವಿರಲಿಲ್ಲ, ನಾನು ಕೆಟ್ಟುಹೋಗಿಬಿಡುತ್ತೇನೆ
ಪ್ರತ್ಯೇಕವಾಗಿ ಕುಳಿತುಕೊಳ್ಳುತ್ತಿರಲಿಲ್ಲ, ನನ್ನ ತಂದ

ನೆಯಲ್ಲಿ ಯಾರೂ ಪ್ರೋತ್ಸಾಹ ...ುತ್ತಿರಲಿಲ್ಲವಾದರೂ, ಕ್ರಮಕ್ರಮೇಣ ಇವರುಗಳ ...ುಲೀಲೆಗೂ ನಾನು ಒಗ್ಗಿಕೊಂಡೆ. ನನಗೆ ಸಾಹಿತ್ಯದಲ್ಲಿ ...ವಾಗಲೂ ಆಸಕ್ತಿ. ಹಾಗಾಗಿ ಇವರು 1954ರಲ್ಲಿ ...ಎಂಬ ತೆಲುಗು ಕಾವ್ಯದ ಪತ್ರಿಕೆಗೆ ಅವರು ನನ್ನನ್ನು ...ನಿಕ ತೆಲುಗು ಕಾವ್ಯದ ಸಂಪಾದಕಳನ್ನಾಗಿ ಮಾಡಿದ್ದರು. ...ಬೌದ್ಧಿಕ ಪ್ರೋತ್ಸಾಹ ನೀಡಿದರು.

...ಸಂಪಾದಕತ್ವದ ಜವಾಬ್ದಾರಿಗಳು ಕೂಡ ಆಗ ನನಗೆ ...ರಲಿಲ್ಲ, ಎಲ್ಲಾ ಕೆಲಸಗಳನ್ನು ಅವರು ಮಾಡುತ್ತಿದ್ದರೆ ...ಕರಡು ತಿದ್ದುವ ಕೆಲಸ ಮಾಡುತ್ತಿದ್ದೆ. ಕ್ರಮೇಣ ...ದಲ್ಲೂ ಆಸಕ್ತಿ ಬೆಳೆಸಿಕೊಂಡೆ. ಸ್ವಂತವಾಗಿ ವಿದ್ಯಾಭ್ಯಾಸ ...ನನ್ನ ಕೌಶಲ್ಯಗಳನ್ನು ಬೆಳೆಸಿಕೊಳ್ಳತೊಡಗಿದೆ. ಇಂಗ್ಲಿಷ್ ...ಗಳನ್ನು ನಾನು ತೆಲುಗಿಗೆ ಅನುವಾದಿಸಲು ಅವರು ...ತ್ಸಾಹ ನೀಡುತ್ತಿದ್ದರು. ನಾನು ಮೊಟ್ಟಮೊದಲ ಬಾರಿಗೆ ...ಅಪಾರ ಇಂಗ್ಲಿಷ್ ಸಾಹಿತ್ಯ ಅವರ ಬಳಿ ಇತ್ತು. ...ಗಳನ್ನು ಓದುವುದರಲ್ಲಿ ಸದಾ ಮಗ್ನಳಾಗಿರುತ್ತಿದ್ದೆ. ...ು, ನಾನು ತೃಪ್ತಳಾಗಿರಲಿಲ್ಲ. ಅವರು ಯಾವಾಗಲೂ ...ತರ ಜೊತೆಗಿರುತ್ತಿದ್ದರು. ಅದು ನನಗೆ ...ವಾಗುತ್ತಿರಲಿಲ್ಲ, ಅವರ ಸನಿಹಕ್ಕಾಗಿ ಹಾತೊರೆಯುತ್ತಿದ್ದೆ. ...ಜೊತೆಗೆ ನಮ್ಮ ನಡುವೆ ವಯಸ್ಸಿನ ಅಂತರವಿತ್ತು. ...ಎಲ್ಲ ಬಲ್ಲವನು, ಇವಳು ಚಿಕ್ಕವಳು ಎಂದು ...ು ತಿಳಿದಿದ್ದರು. ಅವರೆಂದೂ ಅಧಿಕಾರ ಚಲಾಯಿಸುವ ...ಯಾಗಿರಲಿಲ್ಲ, ಸಂಬಳ ತಂದು ನನ್ನ ಕೈಗಿಟ್ಟುಬಿಡುತ್ತಿದ್ದರು. ...ದಲಬಾರಿಗೆ ನನ್ನ ಕೈಯಲ್ಲಿ ನೂರರ ನೋಟು ...ಡತೊಡಗಿದ್ದು ಆಗ. ಅದುವರೆಗೆ ಚಿಲ್ಲರೆ ಕಾಸುಗಳಲ್ಲೇ ...ಹಿಸಿದ್ದ ನನಗೆ ಇದೊಂದು ದೊಡ್ಡ ಜವಾಬ್ದಾರಿ ...ಿಸಿತು. ಅವರು ನನ್ನನ್ನು ನಂಬಿರುವರೆಂದು ಅಚ್ಚರಿಯಾ...ತ್ತು, ಅಲ್ಲದೆ ನಾನು ತುಂಬಾ ಎಚ್ಚರವುಳ್ಳವಳೆಂದು ...ು ಹೇಳುತ್ತಿದ್ದರು.

...ಅವರು ಬಿರ್ಲಾ ಬ್ರದರ್ಸ್‌ನಲ್ಲಿ ಸಾರ್ವಜನಿಕ ಸಂಪರ್ಕ ...ಕಾರಿಯಾಗಿದ್ದಾಗ ಬೆಳಗ್ಗೆ ಕಾಫಿ ಕುಡಿದು ಹೋದರೆ ...ಾಹ್ನ ಊಟಕ್ಕೆ ತುಂಬಾ ತಡವಾಗಿ ಬರುತ್ತಿದ್ದರು. ...ಕಾಫಿ ಟೀ ಯಾವುದೂ ಅಷ್ಟಾಗಿ ಪ್ರಿಯವಾಗುತ್ತಿರಲಿಲ್ಲ ...ಅವರಿಗಾಗಿ ಕಾಯುತ್ತಿದ್ದೆ. ಒಂದೊಂದು ಸಲ ...ವಾಸ ಇರೋಕೆ ಮದುವೆಯಾದೆನೆ ಅನಿಸುತ್ತಿತ್ತು. ...ಗಿಂತ ಮೊದಲು ಊಟ ಮಾಡುವುದು ಮರ್ಯಾದೆ ...ಯವಾಗಿರಲಿಲ್ಲ !

...ಬದುಕು ಹೀಗೆ ಸಾಗುತ್ತಿದ್ದರೂ ಒಂದು ರೀತಿಯ ...ತನ ಇದ್ದೇ ಇತ್ತು. ನಾನು ಪುಸ್ತಕಗಳನ್ನು ...ವಾದಿಸುತ್ತಿದ್ದೆ ಬೇರೆ ಕೆಲಸಗಳನ್ನು ಮಾಡುತ್ತಿದ್ದೆ ಆದರೂ ...ು ನಿಮಗ್ಯಾಕೆ ಮಕ್ಕಳಿಲ್ಲ ಎಂದು ಕೇಳುತ್ತಲೇ ಇದ್ದರು. ...ಕ್ಕೆ ಹೆಚ್ಚು ತಲೆಕೆಡಿಸಿಕೊಳ್ಳದೆ ನನ್ನನ್ನು ನಾನು ಬೌದ್ಧಿಕವಾಗಿ ...ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಉನ್ನವ ವಿಜಯಲಕ್ಷ್ಮಿ ...ರಗ ಜಾನಕಿರಾಣಿ, ನಾಯನಿ ಕೃಷ್ಣಕುಮಾರಿಯವರಂತಹ ...ಲೇಖಕಿಯರ ಪರಿಚಯವಾಯಿತು. ದುರ್ಗಾಬಾಯಿ ...ಶಮುಖ್ ಅವರನ್ನೂ ಭೇಟಿಯಾಗಿದ್ದೆ. ...ಲ್ಯಕಾಲದಿಂದಲೂ ನನ್ನ ತಾಯಿ ಹಾಗು ಸೋದರಿ ...ಹೇಳಿದ್ದರಾದರೂ, ಇವರೆಲ್ಲರ ಪರಿಚಯದಿಂದ ...ಳಾ ವಿಷಯಗಳ ಬಗ್ಗೆ ಇನ್ನೂ ಹೆಚ್ಚು ಯೋಚಿಸುವುದಕ್ಕೆ ...ಕಾಶವಾಯಿತು. ಈಗ ಅದೊಂದು ಬೇರೆಯದೇ ಕಥೆ......



ಅವರನ್ನು ಯಾವಾಗಲೂ ಕಾಡುತ್ತಿದ್ದೆ. ನನಗೆ ತುಂಬಾ ಬೇಸರವಾಗುತಿತ್ತು, ಹೊರಗೆ ಹೋಗುವ ಬದಲು ಮನೆಯಲ್ಲೇ ಇದ್ದು ನನ್ನ ಜೊತೆ ಕಾಲ ಕಳೆಯಿರಿ ಎಂದು ಸದಾ ಬೇಡುತ್ತಿದ್ದೆ. ಸಿನಿಮಾಗೆ ಕರೆದೊಯ್ಯಲೆಂದು ಬಯಸುತ್ತಿದ್ದೆ. ಅವರಿಗೆ ಸಿನಿಮಾ ಅಂದರೆ ಆಗುತ್ತಿರಲಿಲ್ಲ, ನಾನು ಬೇರೆ ಯಾರ ಜೊತೆಯೂ ಹೋಗುತ್ತಿರಲಿಲ್ಲ, ಆದ್ದರಿಂದ ಆ ವಿಷಯದ ಬಗ್ಗೆ ಯಾವಾಗಲೂ ತಿಕ್ಕಾಟವಿದ್ದೇಯಿರುತಿತ್ತು, ಅವರು, ಬೇಸರ ನೀಗಿಸಿಕೊಳ್ಳಲು ನಾನು ಯಾವುದಾದರೂ ನೌಕರಿ ಹಿಡಿಯಬೇಕೆಂದು ಹೇಳಿದರು. ಪಾಠ ಮಾಡುವ ಕೆಲಸ ನನಗೆ ಸರಿಯಾಗಿ ಬರುತ್ತಿರಲಿಲ್ಲ, ನನ್ನ ದನಿ ಸರಿಯಿಲ್ಲವೆಂಬ ಸ್ವಪ್ರಜ್ಞೆಗೆ ಒಳಗಾಗಿ ಬಿಡುತ್ತಿದ್ದೆ. ವಿದ್ಯಾರ್ಥಿಗಳು ನನ್ನನ್ನು ಗೇಲಿ ಮಾಡಿ ನಾನು ನನ್ನ ಪಾಠಗಳನ್ನು ಮರೆತುಬಿಡುವೆನೆಂಬ ಹೆದರಿಕೆಯಿತ್ತು. ಒಂದು ಸಂದರ್ಶನಕ್ಕೆ ಹಾಜರಾಗಿದ್ದೆನಾದರೂ, ಸಿದ್ಧತೆ ಮಾಡಿಕೊಂಡು ಹೋಗಿರಲಿಲ್ಲ, ನನ್ನ ಅತ್ತೆ ಮಾವಂದಿರ ಜೊತೆಯಿದ್ದು ಗ್ರಂಥಾಲಯ ವಿಜ್ಞಾನವನ್ನು ಕಲಿಯಲು ಅವರು ಸಲಹೆ ಮಾಡಿದರು. ನನ್ನ ಮಾವನವರು ಆಂಧ್ರ ವಿಶ್ವವಿದ್ಯಾಲಯದ ಗ್ರಂಥಾಲಯ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದರು. ನಾವಿಬ್ಬರೂ ತೀರ್ಮಾನಕ್ಕೆ ಬರುವ ಮೊದಲು ಅವರು ನನ್ನ ಮಾವನವರ ಬಳಿ ಮಾತನಾಡಿದರು. ಆದರೆ ಈ ಬಗ್ಗೆ ಅವರಿಬ್ಬರಲ್ಲಿ ಯಾರೂ ನನ್ನ ಅತ್ತೆಯವರ ಬಳಿ ಚರ್ಚಿಸಲಿಲ್ಲ ಅಥವಾ ಮುಂಚಿತವಾಗಿ ಅವರಿಗೆ ತಿಳಿಸಲಿಲ್ಲ. ಹೇಗೆ ಮಹಿಳೆಯರನ್ನು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲವೆಂಬ ವಿಷಯ ನಿಮಗೆ ಗೊತ್ತೇಯಿದೆ. ನಾನು ಅಲ್ಲಿಗೆ ಹೋದೆ, ಆದರೆ ನಾನು ಅವರಲ್ಲಿರುವುದು ಅವರಿಗೆ ಸ್ವಲ್ಪವೂ ಸಂತೋಷವುಂಟುಮಾಡಲಿಲ್ಲ, ಮಾವ ನನ್ನೊಡನೆ ಮಾತನಾಡಿದಾಗೆಲ್ಲಾ ಅವರು ಕೋಪಿಸಿಕೊಳ್ಳುತ್ತಿದ್ದರು. ನಾನು ಮಾತೇ ಆಡದೆ ಇರಲು ಹೇಗೆ ಸಾಧ್ಯವಿತ್ತು ? ನಾನೊಂದು ಇಕ್ಕಟ್ಟಿನ ಸ್ಥಿತಿಯಲ್ಲಿದ್ದು ನನ್ನ ಓದನ್ನು ಮುಂದುವರಿಸಲಾರೆನೆಂದು ಗಂಡನಿಗೆ ಪತ್ರ ಬರೆದು ತಿಳಿಸಿದೆ. ಅವರು, ತಕ್ಷಣ ಹೊರಟು ಬಾ ಮನೆಯಲ್ಲಿ ಏನೋ ಕೆಲಸವಿದೆ ಎಂದು ಪತ್ರ ಬರೆದರು. ಅವರು ನನ್ನ ಬೆಂಬಲಕ್ಕಿದ್ದರು. ಆದರೆ, ತಾವು ವಿದ್ಯಾಭ್ಯಾಸ ಮುಂದುವರಿಸು ಎಂದರೂ ನಿಮ್ಮ ಮಗಳು ಒಪ್ಪುತ್ತಿಲ್ಲ ಎಂದು ಅವರು ನನ್ನ ತಂದೆಯವರಿಗೆ ಪತ್ರ ಬರೆದಿದ್ದರೆನಿಸುತ್ತದೆ. ಮಹಿಳೆಯರು ವಿದ್ಯಾಭ್ಯಾಸ ಪಡೆಯಬೇಕೆಂಬ ವಿಚಾರದ ಪರವಾಗಿದ್ದವರು ನಮ್ಮ ತಂದೆ. ಓದು ಮುಂದುವರಿಸು ಅನ್ನುವಂತಹ ಗಂಡ ನನಗಿನ್ನೆಲ್ಲಿ ಸಿಕ್ಕಾನು? ಅವರೊಡನೆ ಸಹಕರಿಸದಿರುವ ನನ್ನ ಬಗ್ಗೆ ತಮಗೆ ನಾಚಿಕೆಯಾಗುತ್ತಿದೆ ಎಂದರು ಅವರು. ತಂದೆಯ ಭಯದಿಂದಾಗಿ ಮತ್ತೆ ಓದಲು ಹೋದೆ. ಮಾವ ಹೇಗೊ ಮತ್ತೆ ಪ್ರವೇಶ ದೊರಕಿಸಿಕೊಟ್ಟರು, ನಾನು ಸೇರಿಕೊಂಡೆ. ಅತ್ತೆ, ಸಂಪ್ರದಾಯಶೀಲ ರಾಗಿದ್ದ ನನ್ನ ತಾಯಿಗಿಂತಲೂ ಹೆಚ್ಚು ಆಧುನಿಕರಾಗಿದ್ದ ಒಳ್ಳೆಯ ಮಹಿಳೆ. ಆದರೂ ನನ್ನ ಪರೀಕ್ಷೆಗಳ ಸಮಯದಲ್ಲಿ ವಿರೋಧಿಸಿ ಮನೆ ಬಿಟ್ಟು ಹೋಗಿ ತಮ್ಮ ಮಗಳ ಮನೆಯಲ್ಲಿದ್ದರು. ಅದನ್ನೆಲ್ಲ ನಾನು ಸಹಿಸಿಕೊಳ್ಳಬೇಕಾಯಿತು........

ಆನಂತರ ಗಂಡ ಬಿರ್ಲಾರವರಲ್ಲಿ ರಾಜೀನಾಮೆ ಕೊಟ್ಟು ಯಾವುದೋ ಪ್ರಾಜೆಕ್ಟ್ ತೆಗೆದುಕೊಳ್ಳಲು ದೆಹಲಿಗೆ ಹೋದರು. ಹೆಚ್.ಸಿ. ಹೆಡಾ ಆಗ ಲೋಕಸಭೆಯ ಸದಸ್ಯ(ಎಂ.ಪಿ.)ರಾಗಿದ್ದರು. ಅವರ ಹೆಂಡತಿ ಗ್ಯಾನ್ ಕುಮಾರಿ ವುಮನ್ ಸ್ಕೇಪ್‌ನಲ್ಲಿದ್ದರು (ವೋಲ್ಗಾ, ವಸಂತ ಕಣ್ಣಾಬಿರನ್ ಮತ್ತು ಕಲ್ಪನಾ ಕಣ್ಣಾಬಿರನ್, ಮಹಿಳಾವರಣಮ್/ವುಮನ್ಸ್ಕೇಪ್: ಅಸ್ಮಿತ, 2001). ಸುಮಾರು ಮೂರು ತಿಂಗಳು ನಾವು ಅವರ ಮನೆಯಲ್ಲಿದ್ದೆವು. ನನ್ನ ಗಂಡನ ಬಹುತೇಕ ಪತ್ರಕರ್ತರು ಅಥವಾ ರಾಜಕಾರಣಿಗಳಾಗಿದ್ದ ಅನೇಕ ಮಿತ್ರರು ದೆಹಲಿಯಲ್ಲಿದ್ದರು. ಆಗಲೇ ಅವರು 'ಆಧುನಿಕ ಭಾರತೀಯ ಕಾವ್ಯ' ಸಂಪುಟವನ್ನು ಹೊರತಂದದ್ದು, ಅದನ್ನು ಅವರು ಜವಹರಲಾಲ್ ನೆಹರೂ ಅವರಿಗೆ ನೀಡಿದ್ದರು. ನೆಹರೂ ಅವರಿಗೆ 'ಆಧುನಿಕ ತೆಲುಗು ಕಾವ್ಯವನ್ನು ಕೊಡು ಎಂದು ನನ್ನ ಗಂಡ ನನಗೆ ಹೇಳಿದಾಗ, ನಾನು ನಾಚಿ ಅದನ್ನು ಇಂದಿರಾ ಗಾಂಧಿಯವರಿಗೆ ಕೊಟ್ಟುಬಿಟ್ಟೆ, ಅವರು ಅದನ್ನು ನೆಹರೂ ಅವರಿಗೆ ಕೊಟ್ಟರು.

ನಾವಿಬ್ಬರೂ ಒಂದೇ ದಿನ ನೌಕರಿ ಶುರು ಮಾಡಿದೆವು. ಅವರು ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತು (ಐಸಿಸಿಆರ್) ನಲ್ಲಿ ಸಂಪಾದಕರಾಗಿ, ನಾನು ಯುನೈಟೆಡ್ ಸರ್ವಿಸ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾ(ರಕ್ಷಣಾ ಸೇವೆಗಳು)ದಲ್ಲಿ ಸೇರಿಕೊಂಡೆವು. ಕೆಲಸ ನನಗೆ ಇಷ್ಟವಾಯಿತಾದರೂ, ಕಚೇರಿಯಲ್ಲಿ ಮಹಿಳೆಯರೇ ಇರಲಿಲ್ಲ, ಮನೆಯಲ್ಲಿ ಗಂಡ ಸಹಕರಿಸುತ್ತಿದ್ದರು. ಅಡುಗೆಮನೆಯಲ್ಲಿ ಸಹಾಯ ಮಾಡದಿದ್ದರೂ, ಅಡುಗೆ ಬಗ್ಗೆ ಯಾವ ತಕರಾರೂ ತೆಗೆಯುತ್ತಿರಲಿಲ್ಲ, ಇಬ್ಬರೂ ಬೇರೆ ಬೇರೆ ಬಸ್ ಸ್ಟಾಪ್‌ಗಳಲ್ಲಿ ಇಳಿಯುತ್ತಿದ್ದೆವಾದರು ಬಹುತೇಕ ದಿನಗಳಲ್ಲಿ ಒಂದೇ ಬಸ್‌ನಲ್ಲಿ ಕಚೇರಿಗೆ ಹೋಗುತ್ತಿದ್ದೆವು. ಒಂದುದಿನ ನಾವು ನಮ್ಮ ಬಸ್ಸಿಗೆ ಕಾಯುತ್ತಿದ್ದಾಗ ಅದೇದಾರಿಯಲ್ಲಿ ಹೋಗುತ್ತಿದ್ದ ನನ್ನ ಸಹೋದ್ಯೋಗಿಯೊಬ್ಬರು ಲಿಫ್ಟ್ ಕೊಡುತ್ತೇನೆಂದರು. ಹೋಗುತ್ತಿರುವಾಗ ಇವರಿನ್ನೂ ಬಸ್ಸಿಗೆ ಕಾಯುತ್ತಿರುವುದನ್ನು ನೋಡಿದೆ. ಅವರಿಗೆ ಅನುಮಾನ ಬರಬಹುದೆಂಬ ಯೋಚನೆ ನನ್ನ ತಲೆ ಹೊಕ್ಕಿತು. ಈ ಯೋಚನೆ ನನ್ನನ್ನು ಕೊಲ್ಲುತ್ತಿತ್ತು. ಕೊನೆಗೆ ಇದನ್ನು ನನ್ನ ಸ್ನೇಹಿತೆ ಹಾಗೂ ಸಹೋದ್ಯೋಗಿ ಶ್ರೀಮತಿ ಮುಖರ್ಜಿಯವರಲ್ಲಿ ಹಂಚಿಕೊಂಡೆ. ಅದನ್ನು ಮರೆತುಬಿಡುವಂತೆ ಸಲಹೆ ನೀಡಿದ ಅವರು, "ಅವರು ನಿನ್ನನ್ನು ನೋಡಿದ್ದರೆ ಹಾಗೆ ಏನಾಗುತ್ತೆ ?" ಎಂದರು. ಇದು ನನಗೆ ಸ್ವಲ್ಪ ಧೈರ್ಯಕೊಟ್ಟರೂ, ಮನಸ್ಸಿನಲ್ಲಿ ಒಂದು ಅಳುಕು ಇದ್ದೇ ಇತ್ತು.

ಪ್ರತಿದಿನ ಸಂಜೆ ನಾವು ನಮ್ಮ ಮನೆಯಲ್ಲಿ ತುಂಬ ಜನ ಸ್ನೇಹಿತರನ್ನ ಉಪಚರಿಸುತ್ತಿದ್ದೆವು. ಅವರೆಲ್ಲ ಮನೆಗೆ ಬಂದಾಗ ತಿನ್ನಲು ಏನಾದರೂ ಕೊಡುತ್ತಿದ್ದೆ, ಒಂದೊಂದು ಸಲ ತಿಂಡಿಗಳು, ಅಡುಗೆ, ಕೆಲಸ ಮುಗಿಸಿ ಬಂದಿದ್ದರೂ ಒಮ್ಮೊಮ್ಮೆ ವಿಶೇಷವಾಗಿ ಏನಾದರೂ ಮಾಡಬೇಕಾಗುತಿತ್ತು, ಆಗ ನಗರದಲ್ಲಿ ಬಾರ್‌ಗಳು ಇರಲಿಲ್ಲವೆನಿಸುತ್ತೆ, ಹಾಗಾಗಿ ಕುಡಿಯಲು ಎಲ್ಲರೂ ನಮ್ಮ ಮನೆಯಲ್ಲಿ ಸೇರುತ್ತಿದ್ದರು. ಸಾಮಾನ್ಯವಾಗಿ ಕೆಲಸದಿಂದ ಬಂದಕೂಡಲೆ ಕುಕ್ಕರ್ ಜೋಡಿಸಿ, ಸ್ವಲ್ಪ ನೋಡಿಕೊಳ್ಳಲು ಇವರಿಗೆ ಹೇಳಿ, ನಾನು ತರಕಾರಿ ತರಲು ಕರೋಲ್ ಬಾಗ್ ಕಡೆಗೆ ಓಡುತ್ತಿದ್ದೆ. ಮನೆಗೆಲಸಗಳಲ್ಲಿ ಅವರು ಸಣ್ಣದಾಗಿ ಸಹಾಯ ಮಾಡುತ್ತಿದ್ದರು. ಮಕ್ಕಳಾಗದಿದ್ದುದರ ಬಗ್ಗೆ ಅವರೆಂದೂ ಆಕ್ಷೇಪಿಸಲಿಲ್ಲ, ಒಂದು ಸಲ ನಮ್ಮವರೆ ಕೆಲವರು ಬಂದು ನನ್ನನ್ನು ವೈದ್ಯರೊಬ್ಬರ ಕಡೆ ತೋರಿಸಿದ್ದರು. ಅವರು ಒಂದು ಸಣ್ಣ ಆಪರೇಶನ್ನಿನಿಂದ ಎಲ್ಲಾ ಸರಿಹೋಗುತ್ತದೆಂದು ಹೇಳಿದರು. ನನಗೆ ಆಪರೇಶನ್ ಇಷ್ಟವಿರಲಿಲ್ಲ, ಮಗುವನ್ನು ಯಾರು ನೋಡಿಕೊಳ್ಳುತ್ತಾರೆ? ಅದೊಂದು ಸಮಸ್ಯೆಯಾಗುತಿತ್ತು, ನಾವು ನಮ್ಮ ಕುಟುಂಬದ ಯಾವ ಹಿರಿಯರ ಜೊತೆಯೂ ವಾಸಮಾಡುತ್ತಿರಲಿಲ್ಲ, ಅಲ್ಲದೆ ಆಯಾ ಒಬ್ಬಳನ್ನು ಗೊತ್ತು ಮಾಡಿಕೊಳ್ಳುವುದಕ್ಕೆ ಬೇಕಾದ ಹಣವೂ ನಮ್ಮ ಬಳಿ ಇರಲಿಲ್ಲ, ನಮ್ಮಿಬ್ಬರಲ್ಲಿ ಯಾರೂ ತಲೆಕೆಡಿಸಿಕೊಳ್ಳಲಿಲ್ಲ. ನಮ್ಮ ಅತ್ತೆ ಎಷ್ಟೊಂದು ಗರ್ಭಪಾತಗಳನ್ನೂ, ಹೆರಿಗೆಗಳನ್ನೂ ನೋಡಿದ್ದರಾದ್ದರಿಂದ ಅವರಿಗೂ ಇದು ಅಷ್ಟು ಮುಖ್ಯವಾಗಲಿಲ್ಲ, ಅಲ್ಲದೆ, ಅವರು ಇನ್ನೂ ನೆಲೆಯೂರದ ತಮ್ಮ ಸ್ವಂತ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ನಿರತರಾಗಿದ್ದರು.

ಇಲ್ಲಿ ದಿಲ್ಲಿಯಲ್ಲಿ ನಮ್ಮ ನೆರೆಯವರೊಬ್ಬರಿದ್ದರು, ಆಟದ ಗೊಂಬೆಗಳನ್ನು ಮಾಡುತ್ತಿದ್ದ ಒಬ್ಬ ಮೊದಲಿಯಾರ್. ಕೇವಲ ಉತ್ಸಾಹಕ್ಕಾಗಿ ನಾನೂ ಗೊಂಬೆಗಳನ್ನು ಮಾಡುವುದನ್ನು ಕಲಿತುಕೊಂಡೆ. ತುಂಬಾ ಸಮಯವನ್ನು ಗೊಂಬೆಗಳನ್ನು ಹೇಗೆ ಮಾಡುವುದು ಎಂದು ನೋಡುವುದರಲ್ಲಿ ಮತ್ತು ಕಲಿಯುವುದರಲ್ಲಿ ಕಳೆಯುತ್ತಿದ್ದೆ. ದೆಹಲಿಯಲ್ಲಿ ಒಂದು ಗೊಂಬೆಗಳ ಸಂಗ್ರಹಾಲಯವಿದೆ. ನಮ್ಮಲ್ಲಿಗೆ ಬಂದವರನ್ನ ಅಲ್ಲಿಗೆ ಕರೆದೊಯ್ಯುವುದು ನನಗೆ ಪ್ರಿಯವಾದ ಕೆಲಸವಾಗಿತ್ತು. ಆದ್ದರಿಂದ ನನ್ನ ಬಿಡುವಿನ ವೇಳೆ ಗೊಂಬೆ ಮಾಡುವ ಕೌಶಲ್ಯವನ್ನು ಹೆಚ್ಚುಮಾಡಿಕೊಳ್ಳುವುದು, ಕಥೆ ಬರೆಯುವುದು ಇತ್ಯಾದಿಗಳಲ್ಲಿ ಕಳೆಯುತ್ತಿತ್ತು, ಆದರೆ ನನಗೆ ಒಂದು ನಿರ್ದಿಷ್ಟ ಗುರಿಯ ಕೊರತೆಯಿತ್ತು, ನಾನು ಹೆಚ್ಚು ಬರೆಯಲಿಲ್ಲ, ನನ್ನ ಗಂಡನ ಬರವಣಿಗೆಯ ಶೈಲಿಯನ್ನು ಅನುಕರಿಸಲು ಪ್ರಯತ್ನಿಸಲಿಲ್ಲ. ನನಗದು ಬೇಕಾಗಿಯೂ ಇರಲಿಲ್ಲ, ಮೂಲತಃ ಅವರೊಬ್ಬ ಕವಿಯಾಗಿದ್ದರು. ಗೊಂಬೆ ಮಾಡಲು ತುಂಬ ಸಮಯ ಹಿಡಿಯುತ್ತಿತ್ತು, ಮನರಂಜಿಸುತ್ತಿದ್ದ ಎಲ್ಲದರಲ್ಲೂ ನನ್ನನ್ನು ನಾನು ತೊಡಗಿಸಿಕೊಂಡುಬಿಡುತ್ತಿದ್ದೆ.

ಕನ್ನಡಕ್ಕೆ: ಅಗ್ರಹಾರ ಕೃಷ್ಣಮೂರ್ತಿ

ನಾನು ಕತೆ ಬರೆಯೋ ವರಸೆ

● ಸಾದತ್ ಹಸನ್ ಮಾಂಟೋ

ಗೌರವಾನ್ವಿತ ಮಹಿಳೆಯರೇ ಹಾಗು ಮಹನೀಯರೇ!

ನಾನು ಕತೆಗಳನ್ನು ಹೇಗೆ ಬರೆಯುತ್ತೇನೆ ಎಂಬುದನ್ನು ವಿವರಿಸಬೇಕೆಂದು ಕೋರಲಾಗಿದೆ.

ನಾನು ಕತೆಗಳನ್ನು ಹೇಗೆ ಬರೆಯುತ್ತೇನೆ ಅಂತ ಹೇಗೆ ವಿವರಿಸೋದು? ಇಲ್ಲಿ, "ಹೇಗೆ" ಅನ್ನೋದೇ ರಗಳೆ. ಇಂಥದ್ದನ್ನೆಲ್ಲ ವಿವರಿಸೋದು ಭಯಂಕರ ಹೊಟ್ಟೆತೊಳೆಸೋ ಸಂಗತಿ. "ಹೇಗೆ" ಬರಿತೇನೆ ಅಂತ ಹೇಳ್ಬೇಕಂದ್ರೆ- ನನ್ನ ಕೋಣೆಯ ಸೋಫಾದ ಮೇಲೆ ಕೂರ್ತೇನೆ, ಪೆನ್ನು ಪೇಪರು ತಗೋತೇನೆ, 'ಬಿಸ್ಮಿಲ್ಲಾ' ಅಂತೇನೆ, ಬರಿಯೋಕೆ ಶುರುಮಾಡ್ತೇನೆ; ಅಲ್ಲೇ ಇರೋ ನನ್ನ ಮೂರು ಹೆಣ್ಮಕ್ಳು, ಗಲಾಟೆ ಮಾಡ್ತಾ ಇರ್ತವೆ, ಅವುಗಳ ಜೊತೆ ಮಾತಾಡ್ತಾ, ಜಗಳ ಆದಿದ್ರೆ ಬಿಡಿಸ್ತಾ ಹಸಿವಾದ್ರೆ ತಿನ್ನೋಕೇನಾದ್ರೂ ಮಾಡ್ಕೊಳ್ತಾ ಯಾರಾದ್ರೂ ಅತಿಥಿಗಳು ಬಂದ್ರೆ ಅವರನ್ನು ಉಪಚರಿಸ್ತಾ-ಬಿಡದೇ ಬರಿತಾನೇ ಇರ್ತೇನೆ ಅಂತ ಹೇಳ್ಬೋದಷ್ಟೇ. ನಿಖರವಾಗಿ ಹೇಳಿ ಅಂದ್ರೆ, ಉಣ್ಕೊ, ಮೀಯೋ, ಸಿಗರೇಟು ಸೇದೋ ಅಥವಾ ಸೋಮಾರಿಯಾಗಿ ಕಾಲಕಳೆಯೋ ಕೈಂಕರ್ಯಗಳ ಹಾಗೇ ಬರಿಯೋದು ಅಂತ ಹೇಳ್ಬೋದಷ್ಟೇ.

ಯಾರಾದ್ರೂ ನೀನು ಯಾಕೆ ಕತೆಗಳನ್ನ ಬರೀತಿ ಅಂತ ಕೇಳಿದ್ರೆ, ಅದಕ್ಕುತ್ತರ ನನ್ನತ್ರ ಇದೆ: ಬರಿಯೋದು ನನ್ನ ಮದ್ಯಪಾನ ವ್ಯಸನದ ಹಾಗೆ ನಂಗೊಂದು ಚಟ. ಬರಿದೇ ಇದ್ರೆ, ಮೀಯದೆ, ಬಟ್ಟೆ ಹಾಕ್ದೇ, ಕುಡಿದೇ ಇರೋವಾಗ ಹ್ಯಾಗನ್ನುತ್ತೋ ಹಾಗೇ ಅನ್ನುತ್ತೆ.

ನಿಜ ಹೇಳ್ಬೇಕು ಅಂದ್ರೆ, ನಾನು ಕತೆಗಳನ್ನು ಬರಿಯೋಲ್ಲ, ಕತೆಗಳು ನನ್ನನ್ನ ಬರಿತವೆ. ನಾನೇನೂ ಭಾರಿ ವಿದ್ವಾಂತನಲ್ಲ, ನನ್ನ ಹೆಸರಲ್ಲಿ ಇಪ್ಪತ್ತು ಪುಸ್ತಕ ಪ್ರಕಟವಾಗಿದ್ರೂ, ಅವುಗಳಲ್ಲಿರೋ ಬಲು ಸೂಕ್ಷ್ಮವಂತ ಕತೆಗಾರನನ್ನು ಕಂಡು ನನಗೇ ಅಚ್ಚರಿಯಾಗುತ್ತದೆ; ಅವನ ದೆಸೆಯಿಂದ ನಾನು ಮತ್ತೇ ಮತ್ತೇ ಕೋರ್ಟಿಗೆ ಅಲೆಯಬೇಕಾಗುತ್ತದೆ. ಪೆನ್ನೊಂದನ್ನು ಕೈಯಲ್ಲಿ ಹಿಡಿದಿದ್ರೆ, ನಾನು ಪಾರಸಿ, ಇಂಗ್ಲಿಷ್, ಫ್ರೆಂಚ್, ಉರ್ದು ಭಾಷೆಗಳ್ಯಾವು ಗೊತ್ತಿಲ್ಲದ ಸಾದಾಸೀದ



ಸಾದತ್ ಹಸನ್.

ಕತೆಗಳು ನನ್ನ ತಲೆಯೊಳಗಿರೋಲ್ಲ, ನನ್ನ ಕಿಸೆಯೊಳಗಿರ್ತವೆ; ಕಿಸೆಯಲ್ಲಿ ಕತೆಗಳಿವೆ ಅನ್ನೋದು ನಂಗೆ ಗೊತ್ತೇ ಇರೋಲ್ಲ, ಎಷ್ಟೇ ತಲೆಕೆಡಿಸ್ಕೊಂಡ್ರೂ, ತಿಣುಕಾಡಿದ್ರೂ ತಲೆಯಲ್ಲಿ ಒಂದೇ ಒಂದು ಕತೆ ಹುಟ್ಕೊಳ್ಳಲ್ಲ; ಸಿಗ... ಮೇಲೆ ಸಿಗರೇಟ್ ಎಳ್ದು, ಕತೆಗಾರನ ವರಸೆ ತೋರಿದ್ರೂ ಒಂದೇ ಒ... ಕತೆ ತಲೇಲ್ಲಿ ಹೊಳೆಯೋಲ್ಲ, ಹಡೆಯಲಾಗದ ಹೆಣ್ಣಿನಂತೆ ಸುಸ್ತಾಗಿ ನೆಲಕ್ಕೊ...

ಕತೆ ಬರ್ಕೊಳ್ದೇನೆ ಅಂತ ಕಾಸು ಮುಂದಾಗಿ ತಂಗೋದ್ಬಿಟ್ಟಿರ್ತೀನಿ, ... ಬರೋದೆ ಇಲ್ಲ, ಉರಿ ಏಳೋಕೆ ಶುರುವಾಗುತ್ತೆ, ಹಾಸಿಗೇಲಿ ಹೊರಳಾ... ಎದ್ದು ಮನೇಲಿರೋ ಹಕ್ಕಿಗಳಿಗೆ ಕಾಳು ಉಣುಸ್ತೇನೆ, ಮನೆತುಂಬ ಬಿ... ...ಂಡಿರೋ ಸಾಮಾನುಗಳನ್ನ ಹೆಕ್ಕಿ ಒಪ್ಪವಾಗಿ ಜೋಡಿಸ್ತೇನೆ, ಕಸನ್ನೆಲ್ಲಾ ಒ... ಮಾಡಿ ಎಸಿತೇನೆ, ಆದ್ರೂ ಕಿಸೆಯಿಂದ ಕತೆ ತಲೆಗೇರೋದೇ ಇಲ್ಲ, ... ಹೆದ್ರಿಕೆ, ತಳಮಳ ಶುರುವಿಟ್ಕೊಳ್ಳುತ್ತೆ

ತಳಮಳ ನೆತ್ತಿಗೇರಿ ಪಾಯಿಖಾನೆಗೋದ್ತೇನೆ, ಅದ್ರಿಂದ್ಲೂ ... ಉಪಯೋಗವಾಗೋಲ್ಲ, ಎಲ್ಲ ಮಹಾನ್ ವ್ಯಕ್ತಿಗಳ ಮಹಾನ್ ಚಿಂತನೆ... ಪಾಯಿಖಾನೆಯಲ್ಲೇ ಹುಟ್ಟವೆ ಅಂತಾರೆ. ನಂಗೆ ಪಾಯಿಖಾನೆಯಲ್ಲೂ ... ಹುಟ್ಕೋಲ್ಲವಾಗಿ ನಾನು ಮಹಾನ್ ವ್ಯಕ್ತಿಯಲ್ಲ ಅನ್ನೋದು ಸ್ವಾನುಭಾವದಿ... ಖಾತ್ರಿ ಆಗೋಗಿದೆ. ಆದ್ರೂ ನಾನು ಪಾಕಿಸ್ತಾನ-ಹಿಂದುಸ್ತಾನಗಳ ಮಹಾ... ಕತೆಗಾರ-ಎಂಥ ಸೋಜಿಗವಲ್ಲವಾ? ಸರಿ ಬಿಡ್ರಿ, ಒಂದೋ ವಿಮರ್ಶ... ಅನಗತ್ಯವಾಗಿ ನನ್ನ ಕಲೆಗಾರಿಕೆಯನ್ನು ಹೊಗಳಿ ಅಟ್ಟಕ್ಕೇರಿಸಿರ್ಬೇಕು ಅಥ... ನಾನೇ ಹಾಡಾಹಗಲು ಅವರ ಮೇಲೆ ಮಂಕುಬೂದಿ ಎರಚಿರ್ಬೇಕು. ಕ್ಷಮಿ... ವಿಷಯ ಎತ್ಲಾಗೋ ಹೋಯ್ತು, ದೇವರಮೇಲಾಣೆ, ಪಾಪಿ ಪಾಯಿಖಾನೆಗೋ... ಕತೆ ಸುಳಿವು ಸಿಗಲಿಲ್ಲ.

ಹೀಗೆ ಎಷ್ಟೇ ತಿಣುಕಿದ್ರೂ ಕತೆ ಹುಟ್ದೆ ಸೋತು ಸುಣ್ಣವಾದದ್ದನ್ನು ಕ... ನನ್ನ ಹೆಂಡ್ತಿ "ಯೋಚ್ನೆ ಮಾಡ್ಬೇಡ, ಪೆನ್ನೆತ್ಕೋ, ಬರಿಯೋಕೆ ಕೂತ್ಕೊ... ಅಂತಾಳೆ. ಅವಳ ಬೋಧನೆ ನೆಚ್ಚಿ, ಖಾಲಿ ತಲೆ, ಕತೆ ತುಂಬಿ ತುಳುಕ್ತಿರ... ಕಿಸೆ ಹೊತ್ತು ಪೆನ್ನೆತ್ಕೋತೇನೆ. ತಂತಾನೆ ಕತೆ ಪುಟಿಯತೊಡಗುತ್ತೆ.


ಪರಿಸ್ಥಿತಿ ಇಂತಿರಲಾಗಿ, ನಾನೇನೂ ದೊಡ್ಡ ಕತೆಗಾರನಲ್ಲ, ನನ್ನ ಕಿಸೆಯಿ... ನಾನೇ ಕತೆ ಕದ್ದು ನಿಮ್ಮ ಮುಂದೆ ಬಿಚ್ಕೋ ಕಿಸೆಗಳ್ಳ ಅನ್ನೋದು ವಿ... ಪ್ರಪಂಚದ ಮೂಲುಮೂಲೆ ಹುಡುಕಿದ್ರೂ ನನ್ನಂಥ ಇನ್ನೊಬ್ಬ ಹೆಡ್ಡ ನಿ... ಸಿಗೋದಿಲ್ಲ.

● ಅನುವಾದ: ಫಿಜೂಲ್ ರಾ...

ಲಿಂಗಪ್ರತಿಷ್ಠೆ ನಾಯಕ ನರಕ

ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕಡೆದಡೆ, ದೇವರೆತ್ತ ಹೋದರೊ?
ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರಾ.

- ಅಲ್ಲಮಪ್ರಭುದೇವರು



ವ್ಯೋಮಮೂರುತಿ ಅಲ್ಲಮಪ್ರಭುದೇವರು ಶರಣ ಸಂಕುಲದಿಂದ ಕೂಡಿದ್ದ ಅನುಭವಮಂಟಪದ ಶೂನ್ಯಸಿಂಹಾಸನಾಧೀಶ್ವರರಾಗಿ ಅಮರರಾಗಿದ್ದಾರೆ. ಅವರು ಇಷ್ಟಲಿಂಗವನ್ನು ಅರಿವಿನ ರೂಪದಲ್ಲಿ ನೋಡಿದ್ದಾರೆ. ಮಾನವಜನಾಂಗದ ಮಧ್ಯೆ ಇರುವ ಅನಿಷ್ಟ ಭೇದಗಳನ್ನೆಲ್ಲ ಅಳಿಸಿಹಾಕುತ್ತ ಸಕಲಜೀವಿಗಳಿಗೆ ಒಳ್ಳೆಯದಾಗುವಂಥ ಇಷ್ಟಾರ್ಥವನ್ನು ಈಡೇರಿಸುವ ಇಷ್ಟಲಿಂಗವು ಪರಶಿವನ ಸಂಕೇತ. ಚೈತನ್ಯ ರೂಪಿ ದೇವರನ್ನೊಳಗೊಂಡ ವಿಶ್ವದ ಅರಿವಿನ ಕುರುಹು.

ಗುರು ಕಾರುಣ್ಯದ ಮೂಲಕ ಪಡೆದ ಇಷ್ಟಲಿಂಗವನ್ನು ಅಂಗದ ಮೇಲೆ ಧರಿಸುತ್ತ ಸದಾಚಾರಿಯಾಗಿರಬೇಕು ಎಂಬುದು ಶರಣರ ಆಶಯವಾಗಿದೆ. ಈ ಆಶಯದ ಹಿನ್ನೆಲೆಯಲ್ಲಿ ಅಲ್ಲಮಪ್ರಭುಗಳು ಇಂಥ ಅನೇಕ ವಚನಗಳನ್ನು ರಚಿಸಿದ್ದಾರೆ. ಇಷ್ಟಲಿಂಗವು ಜೀವಾತ್ಮ ಮತ್ತು ಪರಮಾತ್ಮನ ಮಧ್ಯೆ ಅದ್ವೈತವನ್ನು ಸಾಧಿಸುವಂಥದ್ದು. ಇಷ್ಟಲಿಂಗ ಪೂಜಕ ತನ್ನೊಳಗಿನ ದೇವರ ಜೊತೆ ಒಂದಾಗುವ ಕ್ರಮ ಶರಣರ ಏಕದೇವೋಪಾಸನೆಯಲ್ಲಿ ಅಡಗಿದೆ. ಹೀಗೆ ದೇಹವೆಂಬ ಗುಹೆಯಲ್ಲಿನ ಗುಹೇಶ್ವರನಾದ ಪರಮಾತ್ಮ ಮತ್ತು ಜೀವಾತ್ಮ ಒಂದಾದಾಗ ವ್ಯಕ್ತಿಯು ವ್ಯಷ್ಟಿಪ್ರಜ್ಞೆಯಿಂದ ಹೊರಬಂದು ಸಮಷ್ಟಿ ಪ್ರಜ್ಞೆಯೊಂದಿಗೆ ವಿಶ್ವಮಾನವನಾಗುತ್ತಾನೆ. ಪ್ರತಿಯೊಬ್ಬರೂ ಹೀಗೆ ವಿಶ್ವಮಾನವರಾಗಬೇಕೆಂಬುದೇ ಅಲ್ಲಮ ಪ್ರಭು ಮೊದಲು ಮಾಡಿ ಶರಣರೆಲ್ಲರ ಆಶಯವಾಗಿತ್ತು.

ಸ್ಥಾವರ ಪ್ರತಿಷ್ಠೆಯಿಂದ ಇಂಥ ಮಹತ್ವದ್ದನ್ನು ಸಾಧಿಸಲಿಕ್ಕಾಗದು ಎಂಬುದು ಶರಣರೆಲ್ಲರ ದೃಢನಿಲುವು. 'ಶಿವ' ಎಂದರೆ ಮಂಗಳಕರವಾದುದು. 'ಯೋಗ' ಎಂದರೆ ಕೂಡುವುದು. 'ಶಿವಯೋಗ' ಎಂದರೆ ಮಂಗಳಕರವಾದುದರ ಜೊತೆಗೆ ಕೂಡುವುದು. ಜೀವಾತ್ಮನು ಮಂಗಳಕರವಾದ ಪರಮಾತ್ಮನ ಜೊತೆ ಸೇರುವುದೇ ಶಿವಯೋಗ. ಇಷ್ಟಲಿಂಗ ಪೂಜೆಯಿಂದ ಇಂಥ ಶಿವಯೋಗವನ್ನು ಸಾಧಿಸಲು ಸಾಧ್ಯ. ಆದರೆ ಸ್ಥಾವರದಿಂದ ಇದನ್ನು ಸಾಧಿಸಲಿಕ್ಕಾಗದು ಎಂಬುದನ್ನು ತಿಳಿಸುವುದಕ್ಕಾಗಿಯೇ ಅಲ್ಲಮಪ್ರಭುಗಳು "ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರಾ" ಎಂದು ತಿಳಿಸಿದ್ದಾರೆ. ಕಲ್ಲ ಮನೆಯಲ್ಲಿ ಕಲ್ಲ ಮೇಲೆ ಇನ್ನೊಂದು ಕೆತ್ತಿದ ಕಲ್ಲನ್ನಿಟ್ಟು ಅದಕ್ಕೆ ದೇವರೆಂದು ಕರೆಯುವುದಾದರೆ, ನಾವು ಸಂಧಿಸಬೇಕಾದ ದೇವರು ಎಲ್ಲಿ ಎಂದು ಪ್ರಭುಗಳು ಪ್ರಶ್ನಿಸುತ್ತಾರೆ. "ಸೃಷ್ಟಿಗೆ ಹುಟ್ಟಿದ ಕಲ್ಲು, ಕಲ್ಲುಕುಟಿಕನಿಂದ ಮೂರ್ತಿಯಾಗಿ, ಮಂತ್ರಕ್ಕೆ ಲಿಂಗವಾಯಿತಲ್ಲಾ. ಇವರಿಗೆ ಹುಟ್ಟಿದ ಕೂಸ ಲಿಂಗವೆಂದು ಕೈವಿಡಿವ ವ್ರತಗೇಡಿಗಳನೇನೆಂಬೆ ಗುಹೇಶ್ವರಾ!" ಎಂದು ಪ್ರಶ್ನಿಸುತ್ತಾರೆ. "ಗುಹೇಶ್ವರಾ ನೀನು ಕಲ್ಲಾದಡೆ ನಾನು ಏನಪ್ಪೆನು?" ಎಂದು ಕೇಳುತ್ತಾರೆ. "ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದರೆ ಎನಗಿದು ಸೋಜಿಗ, ಎನಗಿದು ಸೋಜಿಗ!" ಎಂದು ಹೇಳುವುದರ ಮೂಲಕ ದೇವರು ನಿರಾಕಾರನಾಗಿದ್ದಾನೆ. ಇಷ್ಟಲಿಂಗ ಆತನ ಸಂಕೇತ ಮಾತ್ರ ಎಂದು ಸೂಚಿಸುತ್ತಾರೆ.

ಲಿಂಗಪ್ರತಿಷ್ಠೆಯು ದೇಗುಲ ಸಂಸ್ಕೃತಿಯನ್ನು ಸ್ಥಿರಗೊಳಿಸುತ್ತದೆ. ದೇಗುಲ ಸಂಸ್ಕೃತಿ ಇಡೀ ಸಮಾಜದ ಕೇಂದ್ರಬಿಂದುವಾಗಿತ್ತು, ಆದರೆ ಅರಿವು ಇಡೀ ಸಮಾಜದ ಕೇಂದ್ರಬಿಂದುವಾಗಿರಬೇಕೆಂಬುದು ಶರಣರ ಆಶಯವಾಗಿತ್ತು. ಕಲ್ಲಿನಿಂದ ನಿರ್ಮಿಸಿದ್ದ ದೇವರನ್ನು ಕಲ್ಲ ಮೇಲೆ ಇಟ್ಟು ಅದರ ಸುತ್ತ ಕಲ್ಗುಡಿ ಕಟ್ಟಿ ಪೂಜಿಸುವುದರಿಂದ ನಮ್ಮೊಳಗಿನ ದೇವರ ಜೊತೆ ನಾವು ಒಂದಾಗುವುದು ಸಾಧ್ಯವಾಗುವುದಾದರೂ ಹೇಗೆ ಎಂಬುದು ಅಲ್ಲಮ ಪ್ರಭುಗಳ ಪ್ರಶ್ನೆಯಾಗಿದೆ.


ಭಾರತೀಯ ಸಮಾಜವು ಸ್ವಯಂ ಪರಿಪೂರ್ಣ ಗ್ರಾಮಸಮಾಜ ವ್ಯವಸ್ಥೆಯಿಂದ ರೂಪುಗೊಂಡಿದೆ. ವರ್ಣ, ಜಾತಿ, ಉಪ ಜಾತಿಗಳಿಂದ ಮತ್ತು ಅಸ್ಪೃಶ್ಯತೆಯಿಂದಾಗಿ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆಯ ವಿಷ ತುಂಬಿಕೊಂಡಿದೆ. ದೇಗುಲ ಸಂಸ್ಕೃತಿ ಈ ಅಸಮಾನತೆಯ ವಿಷವನ್ನು ಇತಿಹಾಸದುದ್ದಕ್ಕೂ ಪೋಷಿಸಿಕೊಂಡು ಬಂದಿದೆ. ವೈದಿಕಮಯ ದೇಗುಲ ವ್ಯವಸ್ಥೆಯಲ್ಲಿ ಎಲ್ಲ ಜನಾಂಗದವರೂ ಇರುತ್ತಾರೆ. ಆದರೆ ಅವರಿಗೆ ಅವರದೇ ಆದ ಜವಾಬ್ದಾರಿಗಳಿರುತ್ತವೆ. ಪಂಚಮರು ಬಿಟ್ಟಿಸೇವೆ ಮಾಡುವುದು ಅನಿವಾರ್ಯ.

ಆದರೆ ಅವರಿಗೆ ದೇಗುಲದಲ್ಲಿ ಪ್ರವೇಶವಿಲ್ಲ. ಇತ... ಕೆಳಜಾತಿಗಳವರು ದೇವಸ್ಥಾನಕ್ಕೆ ಸಂಬಂಧಿಸಿದ ಶ್ರಮ... ಕೆಲಸಗಳಲ್ಲಿ ಫಲಾಪೇಕ್ಷೆ ಇಲ್ಲದೆ ತೊಡಗುತ್ತಾರೆ. ಕುಲೀನ... ಜಾತ್ರೆ ಮತ್ತು ಉತ್ಸವಗಳ ಮೇಲ್ವಿಚಾರಣೆ ಮಾಡುತ್ತಾ... ಅರ್ಚಕರಿಗೆ ಪೂಜೆ ಮಾಡುವುದೇ ದುಡಿಮೆ. ಹೀ... ಸ್ವಯಂ ಪರಿಪೂರ್ಣ ಗ್ರಾಮ ಸಮಾಜದ ಆಯಪದ್ಧತಿ... ಪೂರಕವಾಗಿಯೇ ಗುಡಿ ವ್ಯವಸ್ಥೆಯು ಶ್ರೇಣೀಕೃತ ಸಮಾಜ... ವಿವಿಧ ಸ್ತರಗಳ ಜಾತಿ ವರ್ಗಗಳ ಪ್ರತ್ಯೇಕತೆಯನ್ನು... ರಕ್ಷಿಸಿಕೊಂಡಿರುತ್ತದೆ. ಯಥಾಸ್ಥಿತಿಯನ್ನು ಸಂರಕ್ಷಿಸುವುದು... ಈ ವ್ಯವಸ್ಥೆಯ ಉದ್ದೇಶವಾಗಿದೆ. ಆದರೆ ಶೋಷಣೆ... ಒಳಗಾಗುವ ಜನಸಮುದಾಯಗಳ ಅರಿವಿಗೆ ಬರದ ಹಾ... ಈ ಶೋಷಣಾ ವ್ಯವಸ್ಥೆಯ ಸೂಕ್ಷ್ಮತೆಯನ್ನು ಮೇಲ್ಜಾ... ಮತ್ತು ಮೇಲ್ವರ್ಗದ ಜನರು ಕಾಯ್ದುಕೊಂಡು ಬಂದಿರುತ್ತಾ...


ದೇಗುಲಗಳಿಗೆ ಸಂಬಂಧಿಸಿದ ಜಾತ್ರೆಗಳಲ್ಲಿ ಕಲೆ, ಸಂಸ್ಕೃ... ಕ್ರೀಡೆ, ಸಾಹಸಕ್ರೀಡೆ, ಮನರಂಜನೆ ಇರುತ್ತವೆ. ರೈತರನ್ನು... ಒಳಗೊಂಡಂತೆ ವಿವಿಧ ಕಾಯಕಜೀವಿಗಳಿಗೆ ಬೇಕಾ... ವಸ್ತುಗಳ ಮಾರಾಟ ಮತ್ತು ಅವರ ಉತ್ಪನ್ನಗಳ ಮಾರಾಟ... ದನಗಳ ವ್ಯವಹಾರವಿರುತ್ತದೆ. ಶೃಂಗಾರ ಸಾಧನಗಳು... ಆಲಂಕಾರಿಕ ವಸ್ತುಗಳು ಹೀಗೆ ಇಡೀ ಸಮಾಜದ ಜನ... ಬೇಡಿಕೆಗಳನ್ನು ಈಡೇರಿಸುವ ಕ್ಷಣಗಳಾಗಿ ಈ ಜಾತ್ರೆಗಳು... ಮುಂದುವರಿಯುವ ಮೂಲಕ ದೇಗುಲ ವ್ಯವಸ್ಥೆಯನ್ನು... ಗಟ್ಟಿಗೊಳಿಸುತ್ತಲೇ ಬಂದವು. ಲೌಕಿಕದ ಆಶಯಗಳನ್ನು... ಈಡೇರಿಸುವ ದೇಗುಲಗಳು ಭಾವನಾತ್ಮಕವಾಗಿಯೂ ಜ... ಸಮುದಾಯಕ್ಕೆ ನೆಮ್ಮದಿಯನ್ನು ಕೊಡುವ ತಾಣಗಳಾದವು...

ಅರಿವು ಪ್ರಧಾನವಾದ ಬದುಕನ್ನು ಬದುಕಿದ ಅಲ್ಲಮ... ಮುಂತಾದ ಶರಣರ ಅಂತರ್‌ದೃಷ್ಟಿಗೆ ಈ ಶೋಷ... ಮತ್ತು ದೇವರಿಂದ ಮಾನವರನ್ನು ದೂರ ಒಯ್ಯು... ಮಾರ್ಗಗಳು ಗೋಚರಿಸಿದವು. ಇಂಥ ಹೀನಸ್ಥಿತಿಯಿಂ... ಜನಸಮುದಾಯವನ್ನು ಮೇಲಕ್ಕೆತ್ತಿ ಸಾಮಾಜಿ... ಸಮಾನತೆಯೊಂದಿಗೆ ನಿಜವಾದ ದೇವಮಾರ್ಗದ... ಒಯ್ಯಬೇಕೆಂಬುದೇ ಅವರ ಆಶಯವಾಗಿತ್ತು.


ಶರಣರು ಅನುಭವ-ಮಂಟಪದ ಮೂಲಕ ಮಂದಿರ... ಪರ್ಯಾಯವಾದ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಅ... ಎಲ್ಲ ಕಾಯಕಜೀವಿಗಳು ಸಮಾನವಾದ ಸ್ಥಾನ ಪಡೆದರು... ಆರ್ಥಿಕ ಮತ್ತು ಪಾರಮಾರ್ಥಿಕ ವಿಚಾರಗಳೆಲ್ಲ ಅಲ್ಲಿ ಚರ್ಚೆ... ಬಂದವು. ಸಮಾನತೆಯ ದೇವರ 'ದರ್ಶನ'ವನ್ನು ಅವರ... ಪಡೆದರು. ತಮ್ಮ ದೈನಂದಿನ ಕಾಯಕದ ಅನುಭವ... ಮೂಲಕವೇ ಅನುಭಾವಿಗಳಾದರು! ಮಾನವ ಇತಿಹಾ... ದಲ್ಲಿಯೇ ಮೊದಲ ಬಾರಿಗೆ ಇಂಥ ಪ್ರಯೋಗವೊಂದ... ನಡೆಯಿತು.ದೇವಸ್ಥಾನಗಳಿಲ್ಲದ ಶರಣ ಸಮಾಜದ ಉದಯ... ವಾಯಿತು. ಶರಣರಲ್ಲಿ ಎಲ್ಲ ತೆರನಾದ ಕಾಯಕ ದವರು ಮತ್ತು ಕಲಾವಿದರು ಇದ್ದರು. ಶರಣಸಂಕುಲದಲ್ಲಿ ನಿತ್ಯವೂ ಉತ್ಸವದ ವಾತಾವರಣವಿತ್ತು.



● ರಂಜಾನ್ ದರ್ಗಾ



ಮಾತೃಭೂಮಿ: ಮದರ್ ಅರ್ಥ್ ಅಥವಾ ಮದರ್ ಲ್ಯಾಂಡ್?



ಯೋಗೇಶ್ ಮಾಸ್ಟರ್

ಅಥರ್ವ ವೇದದ ಪೃಥಿವೀ ಸೂಕ್ತದಲ್ಲಿ ರಾಷ್ಟ್ರದ ' ಎಂಬ ಲೇಖನವನ್ನು ಶ್ರೀ ಅರೋಬಿಂದೋ ಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆಯವರು ಹೊರತಂದಿರುವ ಸೂಕ್ತದ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಇದರ ಲೇಖಕರು ಎಂ.ಶಿವಕುಮಾರ ಸ್ವಾಮಿ. ಆದರೆ ಈ ಲೇಖನವನ್ನು ಓದುವವರು ಯಾವ ಶಿವಕುಮಾರ ಸ್ವಾಮಿ ಎಂದು ರ್ಥವಾಗುವಂತ ರೀತಿಯಲ್ಲಿ ರಾಷ್ಟ್ರೀಯತೆಯನ್ನು ಲಾಗಿದೆ. ಯಾವುದೋ ಒಂದು ಹಿಂದೂ ಪರ ಟನೆಯ ರಾಷ್ಟ್ರೀಯತೆಯ ಗೀಳಿರುವ ಓರ್ವ ಸಂಕುಚಿತ ವಾದಿಯೊಬ್ಬ ಬರೆದಿರುವಂತೆ ಕಾಣುವ ಈ ಲೇಖನ ಗೆಯ ನಡೆದಾಡುವ ದೇವರು, ಅನ್ನದಾಸೋಹ, ದಾಸೋಹಗಳನ್ನು ನಡೆಸುವ ಶರಣರೊಬ್ಬರು, ದಿ ಪ್ರಮುಥರನ್ನು ಆದರ್ಶವಾಗಿಟ್ಟುಕೊಂಡಿರುವ ಮರೊಬ್ಬರು ಬರೆದಿರುವ ಹಾಗೆ ಕಾಣುವುದಿಲ್ಲ.

ಲೇಖನ ಪ್ರಾರಂಭವಾಗುವುದೇ ಹೀಗೆ: "'ಭಾರತ ರಾಷ್ಟ್ರ ಎಂಬ ಭಾವನೆ ಬಂದದ್ದು ಬ್ರಿಟಿಷರ ಕೆಯಿಂದ; ಅಲ್ಲಿಯವರೆಗೆ ಭಾರತ ಒಂದು ರಾಷ್ಟ್ರವೇ ಲ್ಲ' ಎಂಬ ತಪ್ಪು ಕಲ್ಪನೆ ಹರಡಿದೆ. ಇದು ನಮ್ಮನ್ನು ವರ್ಷಕ್ಕಿಂತ ಹೆಚ್ಚುಕಾಲ ಆಳಿದ ಬ್ರಿಟಿಷರು ಹುಟ್ಟು ದ ಭ್ರಮೆ. ಅವರು ತಮ್ಮದೇ ಶಿಕ್ಷಣ ಪದ್ಧತಿಯ ಲಕ ನಮ್ಮ ದೇಶದ ಶಿಕ್ಷಿತವರ್ಗದಲ್ಲಿ ಅಂತಹ ಭೇದವನ್ನು ಹುಟ್ಟುಹಾಕುತ್ತಲೇ ಬಂದರು.

'ಯಾವುದೇ ಒಂದು ದೇಶ ರಾಷ್ಟ್ರವಾಗಬೇಕಾದರೆ ದೇ ಆದ ಆಡಳಿತ ವ್ಯವಸ್ಥೆಯಿರಬೇಕು. ಭಾರತದಲ್ಲಿ ತಹ ವ್ಯವಸ್ಥೆ ಯಾವ ಕಾಲದಲ್ಲಿತ್ತು? ಯಾವ ದಲ್ಲಿಯೂ ಇರಲಿಲ್ಲ. ಇದ್ದದ್ದು ನೂರಾರು -ಮಹಾರಾಜರುಗಳ ಸಂಸ್ಥಾನಗಳು. ಅವರೂ ಪರಸ್ಪರ ದ್ಧ ನಿರತರಾಗಿದ್ದರು. ನಾವೇ ಎಲ್ಲಾ ಸಂಸ್ಥಾನಗಳನ್ನು ಮಗೂಡಿಸಿ, ಹಿಂದು-ಮುಸ್ಲಿಮ-ಸಿಖ್-ಕ್ರೈಸ್ತ ಎಲ್ಲರನ್ನೂ ದುಗೂಡಿಸಿ ಭಾರತವನ್ನು ಒಂದು ರಾಷ್ಟ್ರವನ್ನಾಗಿ ಡಿದವರು' ಹೀಗಿತ್ತು ಅವರ ವಾದದ ವೈಖರಿ. ಈ ವೈಖರಿಗೆ ಮರುಳಾದ ನಮ್ಮ ಜನರು ಅದನ್ನೇ ವೆಂದು ನಂಬಿದರು. ಅವರ ವಾರಸುದಾರರಾದ ್ಯುಲರ್' ಬುದ್ಧಿಜೀವಿಗಳು ಈಗಲೂ ಅದನ್ನೇ ಪ್ರಚಾರ ಡುತ್ತಾರೆ.


ಆದರೆ ಒಂದೇ ಆಡಳಿತ ವ್ಯವಸ್ಥೆಗೆ ಒಳಗಾಗಿರುವುದು ತ್ರ ರಾಷ್ಟ್ರ ಎಂಬುದು ಪಾಶ್ಚಾತ್ಯರ ಕಲ್ಪನೆ. ನಿಜವಾದ ್ಟ್ರೀಯತೆ ಅದಲ್ಲ, ಸಾಂಸ್ಕೃತಿಕ ಐಕ್ಯತೆಯೇ ರಾಷ್ಟ್ರೀಯತೆ. ೀತು ಹಿಮಾಚಲ ವ್ಯಾಪಿಸಿರುವುದು ಒಂದೇ ಸಂಸ್ಕೃತಿ, ಹಿಂದೂ ಸಂಸ್ಕೃತಿ. ವೇದಗಳು, ರಾಮಾಯಣ, ಹಾಭಾರತ, ಪುರಾಣಗಳು, ಆಗಮಗಳು, ಚಾರ್ವಾಕರಿಂದ ದು ವೇದಾಂತದವರೆಗಿನ ದರ್ಶನಗಳು. ಇವೆಲ್ಲವೂ ಲ್ಲಾ ಭಾರತೀಯರಿಗೆ ಸಮಾನವಾದ ಸಾಂಸ್ಕೃತಿಕ ಪರಂಪರೆ. ಷ್ಠ ಮುಂತಾದ ಋಷಿಮುನಿಗಳು, ವ್ಯಾಸ ಮುಂತಾದ ು ಪರಂಪರೆ, ಶ್ರೀರಾಮ, ಶ್ರೀಕೃಷ್ಣ ಮುಂತಾದ ಹಾಪುರುಷರು ಎಲ್ಲಾ ಭಾರತೀಯರಿಗೂ ಸಮಾನವಾದ ರ್ವಜರು. ಅಂತಹ ಸಾಂಸ್ಕೃತಿಕ ಐಕ್ಯತೆ ಭಾರತದಲ್ಲಿ ಲ್ಲಾ ಕಾಲದಲ್ಲಿ ಇತ್ತು, ಅಂತಹ ಸಾಂಸ್ಕೃತಿಕ ಐಕ್ಯತೆಯಿಂದ ದುಕೊಂಡಿದ್ದ ಭಾರತ ಪ್ರಾಚೀನಕಾಲದಿಂದಲೂ ಒಂದು ಷ್ಟ್ರವಾಗಿಯೇ ಇತ್ತು, ಈಗಲೂ ಇದೆ. ಅಂತಹ ್ಟ್ರೀಯತೆಯನ್ನು ತಿಳಿಯಲು ನಮ್ಮ ಪ್ರಾಚೀನ ವೈದಿಕ ಹಿತ್ಯ ಒಂದು ಪ್ರಬಲವಾದ ಆಧಾರ. ವೈದಿಕ ಸಾಹಿತ್ಯದಲ್ಲಿ ರತವು ಒಂದು ರಾಷ್ಟ್ರವಾಗಿತ್ತು ಎಂಬುದರ ಕಲ್ಪನೆ ್ರವಾಗಿ ಮೂಡಿಬರುತ್ತದೆ...." ಎಂದು ಬರೆಯುತ್ತಾ ದದಲ್ಲಿ ರಾಷ್ಟ್ರದ ಬಗ್ಗೆ ಹೀಗೊಂದು ಉಲ್ಲೇಖವಿದೆ..."

... ಎಂದು ಲೇಖನವು ಮುಂದುವರಿಯುತ್ತದೆ.

ಒಬ್ಬ ಅಪ್ರಬುದ್ಧ ಹಿಂದೂರಾಷ್ಟ್ರವಾದಿಯೊಬ್ಬ ಯುವ ರೀತಿಯಲ್ಲಿ ಕಾಣುವ ಇಡೀ ಲೇಖನವು ಾಗಿಯೂ ಸಿದ್ಧಗಂಗೆಯ ಶಿವಕುಮಾರ ಸ್ವಾಮಿಯವರು ದಿರುವ ಲೇಖನವೇ ಅಥವಾ ಬೇರೆ ಡಾ. ಶಿವಕುಮಾರಸ್ವಾಮಿ ಇದ್ದಾರೆಯೇ ಅಥವಾ ಶಿವಕುಮಾರ ಮಿಯವರ ಹೆಸರಿನಲ್ಲಿ ಬೇರೆ ಯಾರಾದರೂ ದಿರುವುದೇ ಎಂಬ ಅನುಮಾನಗಳು ಮೂಡುವಷ್ಟು ನವು ಸಂಕುಚಿತ ಭಾವದಲ್ಲಿ ಜಗ್ಗಿಹೋಗಿದೆ.

ಆದರಲ್ಲಿ ವೈದಿಕ ಸಂಸ್ಕೃತಿಯನ್ನು ಸಾರಾಸಗಟಾಗಿ ತಿರಸ್ಕರಿಸಿದ ಬಸವಾದಿ ಶರಣರನ್ನು ಸಂಪೂರ್ಣವಾಗಿ ಉಪೇಕ್ಷಿಸಿದಂತೆ ಕಾಣುತ್ತದೆ. ಯಾವ ವೇದಗಳನ್ನು ಪೊಳ್ಳು ಎಂದು ನಿರಾಕರಿಸಿದ ಶರಣ ಮತ್ತು ವಚನ ಚಳವಳಿಯ ಪರಂಪರೆಯ ಭಾಗವಾಗಿರಬೇಕಾದ ಲಿಂಗಾಯತರ ಪ್ರತಿನಿಧಿಯಾಗಿರುವವರು ಈ ಮಟ್ಟಕ್ಕೆ ವೇದಗಳನ್ನೇ ಆಧಾರವೆಂದು ಹೇಳುತ್ತಾ ಉಳಿದವನ್ನು ಬಿಟ್ಟಿರುವುದು ಅತ್ಯಂತ ಆಶ್ಚರ್ಯವೂ ಆಗಿರುತ್ತದೆ. ಜೊತೆಗೆ ಇಡೀ ಲೇಖನದಲ್ಲಿ ಎಲ್ಲೂ ಶರಣರ ಪ್ರಸ್ತಾಪವೇ ಇಲ್ಲ, ಲೇಖನದ ಕೊನೆಗೆ ಬಸವಣ್ಣ ಮತ್ತು ಇತರ ಶರಣರು ಕಟ್ಟ ಬಯಸಿದ್ದ ಕಲ್ಯಾಣ ರಾಜ್ಯದ ಕನಸುವಿಕೆಯಿಲ್ಲದೇ "ಮಹರ್ಷಿ ಅರವಿಂದರು ಮುಂತಾದವರು ಕಂಡ ಅಖಂಡ ಭಾರತ ರಾಷ್ಟ್ರದ ಕನಸು ನನಸಾದೀತೇ?" ಎಂದು ಪ್ರಶ್ನಿಸುತ್ತಾರೆ.

ಶಿವಕುಮಾರ ಸ್ವಾಮಿಗಳು ನಿಸ್ಸಂದೇಹವಾಗಿ ವಿದ್ವಾಂಸರು. ಅಂತವರು ಭಾರತದ ಮೂಲ ಇತಿಹಾಸವನ್ನು ಮರೆತು ಅಥವಾ ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿ ಬರಿಯ ವೈದಿಕ ಪರಂಪರೆಯನ್ನು, ಅವರು ತಮ್ಮ ಸುಪರ್ದಿಗೆ



ತೆಗೆದುಕೊಂಡಿರುವ ಹಿಂದೂ ಪರಿಕಲ್ಪನೆಗೆ ಗಂಭೀರವಾಗಿ ಇಷ್ಟು ಮಹತ್ವ ಕೊಡುತ್ತಾರೆಂದರೆ ಅದೊಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಘಾತ ಎಂದು ನಾನು ಭಾವಿಸುತ್ತೇನೆ.

ಭಾರತವೆಂಬ ಮಾತೃಭೂಮಿ

ಭೂ ಸೂಕ್ತದ 41ನೇ ಶ್ಲೋಕದ ವಿವರವನ್ನು ನೀಡುತ್ತಾ "ಈ ಮಾತೃಭೂಮಿಯಲ್ಲಿ ಜನರು ಆನಂದದಿಂದ ಹಾಡುತ್ತಾರೆ. ನರ್ತನ ಮಾಡುತ್ತಾರೆ. ವೀರರು ಯುದ್ಧ ಮಾಡುವರು. ಆಗ ಆಕ್ರಂದನ ಮಾಡುತ್ತಾರೆ. ಡೋಲಿನ ಶಬ್ದ ಕೇಳಿಬರುತ್ತದೆ. ಆ ನಮ್ಮ ಭೂಮಿಯು ಶತ್ರುಗಳಿಂದ ಮುಕ್ತಗೊಳಿಸುವಳು."

"ರಾಷ್ಟ್ರದಲ್ಲಿ ಸಮೃದ್ಧಿಯ ಕಾರಣ ಸುಖ-ಸಮಾಧಾನಗಳು ನೆಲೆಸಿವೆ. ಹಾಗಿದ್ದಾಗ ಜನರು ಆನಂದದಿಂದ ಹಾಡುತ್ತಾರೆ. ಕುಣಿಯುತ್ತಾರೆ. ಅದರಲ್ಲೂ ಅವರ ಸೌಹಾರ್ದವು ವ್ಯಕ್ತವಾಗುತ್ತದೆ. ವೈರಿಗಳ ಆಕ್ರಮಣವನ್ನು ಮುಕ್ತಗೊಳಿಸಲು ವೀರರ ಯುದ್ಧ. ಅದೂ ಉಂಟೆಂಬುದು ಇಲ್ಲಿ ಸ್ಪಷ್ಟ. ಇದು ವಿವಿಧತೆಯ ಸಂಕೇತ. ಶಾಂತಿ-ಸಮಾಧಾನದ ಸಮಯದಲ್ಲಿ ಆನಂದದಿಂದ ಹಾಡುವುದು, ನರ್ತನ ಮಾಡುವುದು ಮುಂತಾದ ಚಟುವಟಿಕೆಗಳಲ್ಲಿ ನಿರತರಾದ ಜನರು ಯುದ್ಧಕಾಲದಲ್ಲಿ ಶತ್ರುಗಳನ್ನು ಓಡಿಸಲು ಮತ್ತು ನಾಶಮಾಡಲು ಸಿದ್ಧ ಎಂಬುದು ಇಲ್ಲಿ ಸೂಚಿತವಾಗುತ್ತದೆ."

ಹೀಗೆ ಇಡೀ ಲೇಖನದಲ್ಲಿ ಗೊಂದಲದ ಮತ್ತು ಅಪಕ್ವವಾದ ನಿರೂಪಣೆಗಳೇ ತುಂಬಿವೆ. ಅನೇಕ ಕಡೆ ಭಾರತವೆಂಬ' ಮಾತೃಭೂಮಿ ಪ್ರಸ್ತಾಪ ಮಾಡುತ್ತಾ ಹೋಗುತ್ತಾರೆ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಇರುವ ಭಾರತವೆಂಬ ಮಾತೃಭೂಮಿ ಎಂಬ ಚಿತ್ರಣ ನೀಡುತ್ತಾರೆ.

ಇಲ್ಲಿ ನನ್ನ ಪ್ರಶ್ನೆಯೆಂದರೆ, ಮಾತೃಭೂಮಿಯೆಂದರೆ 'ಮದರ್ ಅರ್ಥ್' ಎಂದೋ ಅಥವಾ 'ಮದರ್ ಲ್ಯಾಂಡ್' ಎಂದೋ? ವಸುಧೆ, ಭೂಮಿ, ಅವನಿ, ವಸುಂಧರೆ, ಧರಣಿ ಇತ್ಯಾದಿ ಹೆಸರುಗಳು ಇಡೀ ಭೂ ತಾಯಿಗೆ ಸಲ್ಲುತ್ತದೆಯೇ ಹೊರತು, ಭಾರತವೆಂಬ ರಾಷ್ಟ್ರಕ್ಕೆ ಅಲ್ಲ. ಸರಿ, ಇನ್ನೂ ಮುಂದುವರೆದು ವಿಚಾರ ಮಾಡಿದರೆ, ರಾಷ್ಟ್ರೀಯತೆಯ ಸೀಮಿತ ಪರಿಧಿಯೊಳಗೆ ಗುರುತಿಸಿಕೊಂಡಿರುವ ಜನ ಅಥವಾ ಜನಸಮೂಹಕ್ಕೆ ಶತ್ರುಗಳೆಂದು ಅಥವಾ ಶತ್ರು ರಾಷ್ಟ್ರಗಳೆಂದು ಇರಲು ಸಾಧ್ಯವೇ ಹೊರತು, ಭೂಮಿ ತಾಯಿಯು ಯಾವ ದೇಶದವರನ್ನು ತನ್ನ ಮಕ್ಕಳು ಅಥವಾ ಯಾವ ದೇಶದವರನ್ನು ಶತ್ರುಗಳೆಂದು ನೋಡಲು ಸಾಧ್ಯ?

ಅವರ ಲೇಖನದ ವೈಖರಿ ಮುಂದೆ ನೋಡಿ: "ಭೂಮಿಗೂ ಜನರಿಗೂ ತಾಯಿ-ಮಕ್ಕಳ ಸಂಬಂಧ: ಮೇಲ್ಕಂಡ ಲಕ್ಷಣಗಳಿಂದ ಶೋಭಿತಳಾದ ಭಾರತ ಭೂಮಿಗೂ ಭಾರತೀಯರಿಗೂ ಇರುವ, ಇರಬೇಕಾದ ಸಂಬಂಧವು ತಾಯಿ - ಮಕ್ಕಳ ಸಂಬಂಧವೆಂಬುದು ಇಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ."

ಇದೇ ಲೇಖನದಲ್ಲಿ ಆಸೇತು ಹಿಮಾಚಲ ವ್ಯಾಪಿಸಿರುವುದು ಒಂದೇ ಸಂಸ್ಕೃತಿ ಎಂದು ಹೇಳುತ್ತಾ ಲೇಖಕರು ಮುಗ್ಗರಿಸಿದ್ದಾರೆ. ಅದರಲ್ಲೂ ಒಂದೇ ಸಂಸ್ಕೃತಿಯೆಂದರೆ, ಅದು ಹಿಂದೂ ಸಂಸ್ಕೃತಿ, ವೈದಿಕ ಸಂಸ್ಕೃತಿಯೇ ಹಿಂದೂ ಸಂಸ್ಕೃತಿ ಎಂದೂ ಹೇಳುವರು. ಮತ್ತೊಂದು ಕಡೆ ವಿವಿಧತೆಯಲ್ಲಿ ಏಕತೆ ಎಂಬುದನ್ನು ರಾಷ್ಟ್ರೀಯ ಭಾವನೆಯಲ್ಲಿ ಹೇಳುವ ಪ್ರಯತ್ನವನ್ನೂ ಮಾಡುವರು.

ವೈದಿಕ ರಾಷ್ಟ್ರಗೀತೆ

ಭೂ ಸೂಕ್ತ 43ನೇ ಶ್ಲೋಕವನ್ನು ವಿವರಿಸುತ್ತಾ "ಯಾವ ಪುರಗಳು (ನಗರಗಳು) ದೇವತೆಗಳಿಂದ ನಿರ್ಮಿತವಾಗಿವೆಯೋ, ಯಾರ ಕ್ಷೇತ್ರಗಳಲ್ಲಿ ಜನರು ಕೃಷಿ ಮುಂತಾಗಿ ವಿವಿಧ ಕಾರ್ಯಗಳಲ್ಲಿ ಮಗ್ನರಾಗಿರುವರೋ ಮತ್ತು ಯಾರು ತನ್ನ ಗರ್ಭದಲ್ಲಿ ಎಲ್ಲಾ ತರಹದ ಸಂಪತ್ತನ್ನು ಧರಿಸಿರುವಳೋ ಅಂತಹ ನಮ್ಮ ಮಾತೃಭೂಮಿಯನ್ನು ಪ್ರಜಾಪತಿಯು ದಿಕ್ಕು ದಿಕ್ಕುಗಳಲ್ಲಿ ರಮಣೀಯವಾಗಿರುವಂತೆ ಮಾಡಲಿ." ಶ್ರೀಕೃಷ್ಣನ ದ್ವಾರಕೆ, ಶ್ರೀರಾಮಚಂದ್ರನ ಅಯೋಧ್ಯೆ, ಹರನ ಹರದ್ವಾರ, ಬದ್ರೀನಾಥನ ಬದ್ರಿ, ಕೇದಾರನಾಥನ ಕೇದಾರ, ಕಾಳೀಮಾತೆಯ ಕಲಕತ್ತಾ, ಶ್ರೀರಾಮನಿಂದ ಪೂಜಿಸಲ್ಪಟ್ಟ ರಾಮೇಶ್ವರಲಿಂಗವಿರುವ ರಾಮೇಶ್ವರ, ಮುಂತಾದವು ಸುಪ್ರಸಿದ್ಧ (ದೈವನಿರ್ಮಿತ) ನಗರಗಳು (ಸಾತವಳೇಕರ್; ವೈದಿಕ ರಾಷ್ಟ್ರಗೀತೆ ಪು.3)" ಎಂದು ಉಲ್ಲೇಖಿಸುತ್ತಾರೆ.

ವೈದಿಕ ರಾಷ್ಟ್ರಗೀತೆಯೆಂದರೆ ಏನು? ವೈದಿಕವಾಗಿರುವುದು ನಮ್ಮ ರಾಷ್ಟ್ರಗೀತೆಯಾಗುವ ಪರಿ ಎಂತು? ವೈದಿಕವೇ ನಮ್ಮ ಭಾರತದ ಸಂಸ್ಕೃತಿಯೇ? ವೈದಿಕವಲ್ಲದ ಸಂಸ್ಕೃತಿ ನಮ್ಮ ಭಾರತದಲ್ಲಿ ಇಲ್ಲವೇ? ವೈದಿಕನೆಲೆಯ ಯಾರೋ ಒಬ್ಬರು ಇಡೀ ಭಾರತವನ್ನು ತಮ್ಮ ತೆಕ್ಕೆಗೆ ಎಳೆದುಕೊಳ್ಳಲು ನೋಡಿದರೆ, ಉಳಿದ ಸಂಸ್ಕೃತಿಗಳು ಎತ್ತ ಹೋಗಬೇಕು? ಇತ್ಯಾದಿಗಳ ಕನಿಷ್ಠ ಪ್ರಶ್ನೆಗಳನ್ನೂ ಮನಸ್ಸಿಗೆ ತಂದುಕೊಳ್ಳದೇ ಸಾತವಾಳೇಕರ್‌ರವರ ವೈದಿಕ ರಾಷ್ಟ್ರಗೀತೆಯನ್ನು ಕೊಂಡಾಡಲಾಗಿದೆ.

ಇಲ್ಲಿ ಸ್ಪಷ್ಟವಾಗಿ ತಿಳಿಯಬೇಕಾಗಿರುವುದೇನೆಂದರೆ, ಮಾತೃಭೂಮಿಯೆಂದರೆ ಏನೆಂದು. ಅದು ಮದರ್ ಲ್ಯಾಂಡ್ ಆದರೆ ವಿಷಯದ ನಿರೂಪಣೆಯು ಬೇರೊಂದು ದಾರಿ ಹಿಡಿಯುತ್ತದೆ. ಮದರ್ ಅರ್ಥ್ ಆದರೆ ವಿಷಯವು ಗಹನವೂ, ಆಳವೂ ಮತ್ತು ವಿಸ್ತಾರವೂ ಆಗುತ್ತದೆ. ವಿಶಾಲಾರ್ಥದಲ್ಲಿ, ವಿಸ್ತಾರ ಪರಿಕಲ್ಪನೆಯಲ್ಲಿ ಹೇಳುವಂತೆ ತಮ್ಮ ಸಂಕುಚಿತ ಭಾವವನ್ನು ಹೇರುವುದು ಅನೇಕ ವೈದಿಕ ವಿಚಾರಗಳ ಮತ್ತು ಪರಿಕಲ್ಪನೆಗಳ ಸಾಮಾನ್ಯ ಲಕ್ಷಣ ಇಲ್ಲಿಯೂ ಕಾಣುತ್ತದೆ.

ಇಲ್ಲಿ ಮಾತೃಭೂಮಿಯೆಂದರೆ ಮದರ್ ಲ್ಯಾಂಡ್ ಎಂಬ ಅರ್ಥವೇ ಹೊರತು, ಭೂಮಿ ತಾಯಿ ಎಂದಲ್ಲ. ನಮ್ಮಲ್ಲಿ ಸೀಮಿತ ಪರಿಧಿಯುಳ್ಳ ಭೂ ಭಾಗಕ್ಕೂ ಭೂಮಿ ಎಂದು ಪದವನ್ನು ಉಪಯೋಗಿಸುವುದು ಬಳಕೆಯಲ್ಲಿದ್ದೆ. ಉದಾಹರಣೆಗೆ: ಆಂಧ್ರಭೂಮಿ. ಆದರೆ, ಭೂಸೂಕ್ತದಲ್ಲಿ ಪೃಥ್ವಿ ಎಂಬ ಅರ್ಥವನ್ನು ರಾಷ್ಟ್ರೀಯತೆಯ ಸೀಮಿತ ಮತ್ತು ಸಂಕುಚಿತ ಅರ್ಥದಲ್ಲಿ ಬಳಸುವುದು ಸೂಕ್ತವಾಗದು. ಹಾಗೆ ನೋಡಲು ಹೋದರೆ ಭೂ ಸೂಕ್ತದಲ್ಲಿಯೇ ಇಂತಹ ಗೊಂದಲಗಳಿವೆ. ಇಡೀ ಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ ಹಾಗೆ ಕಂಡರೂ ಅವರು ಇಡೀ ಭೂಮಿಯನ್ನು ಗ್ರಹಿಸುವುದಕ್ಕಿಂತ ತಾವು ಕಂಡ ಭೂ ಭಾಗವನ್ನು ವರ್ಣಿಸುವರು. ಅದು ಭೂಗೋಳದ ಯಾವುದೇ ಭೂಭಾಗಕ್ಕೂ ಅನ್ವಯವಾಗಲು ಸಾಧ್ಯ. ಭೂಮಿಯ ಪೋಷಣಾ ಮತ್ತು ಧಾರಣಾಗುಣವನ್ನು ಎಲ್ಲಿಯಾದರೂ ನಿಂತು ಹೇಳಲು ಸಾಧ್ಯ


ಹಾಗೆ ಇಡೀ ಭೂಮಿಯನ್ನು ದೃಷ್ಟಿಯಲ್ಲಿರಿಸಿಕೊಂಡಿದ್ದ ಆದಲ್ಲಿ ದಸ್ಯುಗಳೊಂದಿಗೆ ನಡೆದ ಯುದ್ಧಗಳನ್ನು ಹೇಳುವ ಅಗತ್ಯವಿರಲಿಲ್ಲ, ನನ್ನನ್ನು ರಕ್ಷಿಸು, ಶತ್ರುಗಳನ್ನು ಓಡಿಸು ಎಂದು ಕೇಳುವಷ್ಟಿರಲಿಲ್ಲ. ಅಂದರೆ ಅವರಿಗೆ ವಿಶಾಲ ಭೂ ಭಾಗದ ಪರಿಕಲ್ಪನೆ ಇರಲಿಲ್ಲ, ಅವರಿಗೆ ರಾಷ್ಟ್ರೀಯತೆಯ ಕಲ್ಪನೆಯೂ ಇರಲಿಲ್ಲ, ಅವರಿಗೆ ರಾಷ್ಟ್ರೀಯತೆಯ ಕಲ್ಪನೆ ಇದ್ದದ್ದೇ ಆದಲ್ಲಿ ಭೂ ಭಾಗವನ್ನು ಹೆಸರಿನಿಂದ ಗುರುತಿಸುತ್ತಿದ್ದರು. ವಲಸೆಗಾರರಾಗಿ ಬಂದವರು ತಾವು ಕಂಡ ಭೂಭಾಗವನ್ನು ನೋಡಿ, ಅದರ ಔನ್ನತ್ಯ ಮತ್ತು ಶ್ರೇಷ್ಠತೆಯನ್ನು ಗುರುತಿಸಿದ್ದಾರೆ ಮತ್ತು ಅದರ ಫಲಾನುಭವಿಗಳಾಗಿರಲು ಅಪೇಕ್ಷಿತರಾಗಿದ್ದಾರೆ.

ಹಾಗಾಗಿ ಭೂಮಿ ತಾಯಿ ಎಂಬ ಪರಿಕಲ್ಪನೆಯನ್ನೂ ಮತ್ತು ಮಾತೃಭೂಮಿ ಎಂಬ ಸೀಮಿತ ಚೌಕಟ್ಟನ್ನು ಕಲಸುವುದು ಬೇಡ.

ಆದರೆ, ಹೊರನೋಟಕ್ಕೆ ಭೂ-ಸೂಕ್ತವು ಇಡೀ ಭೂ ಮಂಡಲವನ್ನೇ ವ್ಯಾಪ್ತಿಯಲ್ಲಿ ಒಳಗೊಳ್ಳುತ್ತದೆ ಎಂದು ಅನಿಸುತ್ತದೆ. ಆದರೆ ಅದು ಹಾಗೇನೂ ಇಲ್ಲ. ಆದರೆ, ವೈದಿಕ ಪುರಾಣಗಳನ್ನೂ ಸೇರಿದಂತೆ ವಿಶ್ವದ ಅನೇಕ ಮಿಥಿಕಗಳಲ್ಲಿ ಭೂಮಿಯ ಬಗ್ಗೆ ನಾನಾ ರೀತಿಯಲ್ಲಿ ಕಲ್ಪನೆಗಳನ್ನು ಹೊಂದಿದ್ದರು.

ಅವು ದೇಶದಿಂದ ದೇಶಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ ವ್ಯತ್ಯಾಸಗಳನ್ನು ಕಾಣುವುದಾದರೂ ಅಧ್ಯಯನ ಮಾಡಲು ಬಹು ಕೌತುಕ ಎನಿಸುತ್ತದೆ. ರಾಜಕೀಯ ಆಕ್ರಮಣಕಾರಿ ಮನೋಭಾವದಿಂದ ಹೊರತಾದ ಅದರ ಮೂಲ ಭಾವವಾದ ಜೀವ ಸೆಲೆಯ ಅಂತರ್ಯವನ್ನು ಗುರುತಿಸಲು ಸಂತೋಷವೂ, ಅಚ್ಚರಿಯೂ ಎನಿಸುತ್ತದೆ.





ಹುಲಿ ಎಂದೆಂದಿಗೂ ಹುಲಿಯೇ ಅಲ್ಲವೇ

ಚುನಾವಣೆಗಳಲ್ಲಿ ಬಹುಮತ ಗಳಿಸಿ ಮೊದಲ ಬಾರಿ ಸಂಸದ್‌ಭವನದೊಳಗೆ ಪ್ರವೇಶಿಸುವ ಸಂದರ್ಭದಲ್ಲಿ ತಲೆಬಾಗಿ ನಮಸ್ಕರಿಸಿದ ನರೇಂದ್ರ ಮೋದಿಯ ಅದ್ಭುತ ಅಭಿನಯಕ್ಕೆ ತಲೆದೂಗಲೇಬೇಡವೇ! ತರುವಾಯದ ಆತನ ಭಾಷಣ ವಂತೂ ಭಾವುಕರ ಕಣ್ಣು ಮೂಗುಗಳನ್ನು ಒದ್ದೆಯಾಗಿಸಿ ಬಿಟ್ಟಿತಲ್ಲವೇ. ಮುಂದೆ ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಯವರು ಈ ಸರ್ಕಾರ ಅಭಿವೃದ್ಧಿ ಸಾಧಿಸಲಿದೆ. ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಶ್ರಮಿಸಲಿದೆ, ಕೋಮು ಹಿಂಸಾಚಾರವನ್ನು ತಡೆಗಟ್ಟಲಿದೆ ಎಂಬಿತ್ಯಾದಿ ಭರವಸೆಗಳ ಮಳೆಗರೆದರಲ್ಲವೇ. ಇವೆಲ್ಲದರಿಂದ ಪ್ರಭಾವಿತರಾಗಿರುವ ಕೆಲವೊಂದು ಪ್ರಗತಿಪರರಿಗೆ ಈ ಸರ್ಕಾರ ಉಗ್ರ ಹಿಂದೂತ್ವದ ನೀತಿಗಳನ್ನು ಕೈಬಿಟ್ಟಿದೆ; ಅದೀಗ 'ಸೌಮ್ಯಮಾರ್ಗ'ವನ್ನು ಅನುಸರಿಸಲಿದೆ; ಪ್ರಧಾನಿ ಮೋದಿ ಈಗ ಹಿಂದಿನ ಮೋದಿ ಅಲ್ಲ; ಆತ ಮೋದಿ 2.0 ಆಗಿ ಬದಲಾಗಿದ್ದಾನೆಂದು ಅನಿಸತೊಡಗಿದೆಯಂತಲ್ಲವೇ. ಮೋದಿಯ ಅತ್ಯದ್ಭುತ ಪ್ರಚಾರಯಂತ್ರದ ಕಾರ್ಯತಂತ್ರವೇ ಅಂಥಾದ್ದಲ್ಲವೇ. ಅದರ ವೈಖರಿಗೆ ಮನಸೋತು ಕೊಚ್ಚಿಹೋಗದವರು ಕಮ್ಮಿ ಅಲ್ಲವೇ.

ಒಂದು ಸತ್ಯವನ್ನು ನಾವು ತಿಳಿದಿರಲೇಬೇಕಲ್ಲವೇ. ನಮ್ಮ ಚುನಾವಣಾ ಕಾಲದ ಆಕರ್ಷಕ ಘೋಷಣೆಗಳೆಲ್ಲ ನೀರ ಮೇಲಿನ ಗುಳ್ಳೆಗಳಂತೆ ಎಂಬ ಮಾತಿದೆಯಲ್ಲವೇ. "ಒಳ್ಳೆಯ ದಿನಗಳು ಬರಲಿವೆ"ಯಂತೆ. ಓಕೆ. ಆದರೆ ಯಾರ ಪಾಲಿಗೆ? ಬರಲಿರುವ "ಒಳ್ಳೆಯ ದಿನಗಳು" ಬಡವರ ಪಾಲಿಗಲ್ಲ, ಕಾರ್ಪೊರೇಟ್ ಧಣಿಗಳಿಗೆ ಎಂಬ ಕಹಿಸತ್ಯವನ್ನರಿಯಲು ಹೆಚ್ಚು ಕಾಲ ಬೇಕೇ. ಗುಜರಾತಿನ ಮುಖ್ಯಮಂತ್ರಿಯಾಗಿದ್ದ 12 ವರ್ಷಗಳ ಅವಧಿಯಲ್ಲಿ ಮೋದಿ ಮಾಡಿರುವುದೇನು? ಉದ್ಯಮಪತಿಗಳಿಗೆ ಅತಿ ಅಗ್ಗ ದರಗಳಲ್ಲಿ ಜಮೀನು, ವಿದ್ಯುತ್ತು, ನೀರು ಇತ್ಯಾದಿ ಸವಲತ್ತು, ಸೌಕರ್ಯಗಳನ್ನು ಬೇಕಾಬಿಟ್ಟಿಯಾಗಿ ಒದಗಿಸಿ ಕೋಟಿ, ಕೋಟಿ ಲಾಭ ಬಾಚಿಕೊಳ್ಳಲು ಅನುವು ಮಾಡಿಕೊಡಲಿಲ್ಲವೇ. ಅವರು ಋಣ ತೀರಿಸಿಕೊಳ್ಳಲೆಂದು ಆತನನ್ನು ಜನಾಭಿವೃದ್ಧಿ ಸಾಧಿಸಲು ಪಣತೊಟ್ಟಿರುವ ಮಹಾನ್ ನಾಯಕನೆಂಬಂತೆ ರಾಜ್ಯಾದ್ಯಂತ ಹುಸಿಪ್ರಚಾರ ಮಾಡಲು ಸಹಾಯ ಮಾಡಲಿಲ್ಲವೇ. ಕೊನೆಗೆ ಆತನ "ಅಭಿವೃದ್ಧಿಯ ಕಾರ್ಯಕ್ಷಮತೆ"ಗೆ ಮೆಚ್ಚಿ ಇಂತಹ ವ್ಯಕ್ತಿಯೇ ಕೇಂದ್ರದಲ್ಲೂ ಬೇಕಾಗಿದೆಯೆಂದು ನಿರ್ಧರಿಸಿ ವಿಶ್ವದಲ್ಲೆಲ್ಲೂ ಇದುವರೆಗೆ ಆಗಿರದಂಥಾ ಅಗಾಧ ಪ್ರಚಾರಕ್ಕೆ ಸಕಲ ನೆರವು ನೀಡಿ ಆತನನ್ನು "ಅಭಿವೃದ್ಧಿಯ ಹರಿಕಾರ" ಎಂದು ಬಿಂಬಿಸಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವಂತೆ ನೋಡಿಕೊಳ್ಳಲಿಲ್ಲವೇ. ಮುಂಬರುವ ದಿನಗಳಲ್ಲಿ ಕಾರ್ಪೊರೇಟುಗಳು ಪರಿಸರದ ಕಾಳಜಿಯಿಲ್ಲದೆ ಅವಿರೋಧವಾಗಿ ಉದ್ಯಮಗಳನ್ನು ಸ್ಥಾಪಿಸುತ್ತಾ ಹೋದರೆ, ಅತ್ತ ಸರ್ಕಾರ ಬಡವರನ್ನು, ಅಲ್ಪಸಂಖ್ಯಾತರನ್ನು ಶೋಷಿಸುತ್ತಾ ದಮನಿಸುತ್ತಾ ಹೋದರೆ ಅಂತಿಮವಾಗಿ ದೇಶದ ಗತಿಯೇನೆಂದು ಯೋಚಿಸಬೇಡವೇ. ಇನ್ನು ಪ್ರತಿವರ್ಷ ಉದ್ಯೋಗ ಮಾರುಕಟ್ಟೆಗೆ ಸೇರ್ಪಡೆಯಾಗುವ 1.2 ಕೋಟಿ ಜನರಿಗೆ ಉದ್ಯೋಗ ಒದಗಿಸುವುದು ಭಾಷಣ ಮಾಡಿದಷ್ಟು ಸುಲಭವೇ?

ಹಿಂದೂತ್ವದ ಅಜೆಂಡಾ ಇಲ್ಲವೇ


ಅಲ್ಪಸಂಖ್ಯಾತರ ಕಲ್ಯಾಣ ಸಾಧಿಸುವ ಭರವಸೆಯನ್ನು ಹಿಂದಿನ ಸರ್ಕಾರ ಕೂಡ ನೀಡಿತ್ತಲ್ಲವೇ. 2005ರಲ್ಲಿ 15 ಅಂಶಗಳ ಕಾರ್ಯಕ್ರಮವೊಂದನ್ನು ಘೋಷಿಸಿ ಆ ನಿಟ್ಟಿನಲ್ಲಿ ಒಂದಿಷ್ಟು ಪ್ರಯತ್ನ ಮಾಡಿದ ಹಾಗೆ ತೋರಿಸಿಕೊಂಡಿತ್ತಲ್ಲವೇ. ಆದರೆ ಪ್ರಸಕ್ತ ಸರ್ಕಾರದ ಬಳಿ ಬರೀ ಘೋಷಣೆ ಹೊರತು ಯಾವುದೇ ನಿಶ್ಚಿತ ಕಾರ್ಯಕ್ರಮ ಇಲ್ಲದಿರುವುದನ್ನು ಗಮನಿಸಬೇಡವೇ. ಪ್ರತಿಯೊಬ್ಬ ಕೇಂದ್ರಸಚಿವನ ಕಚೇರಿಯಲ್ಲಿ ಓರ್ವ ಆರೆಸ್ಸೆಸ್ ಪದಾಧಿಕಾರಿ ಮತ್ತು ಮೋದಿಯ ಆಪ್ತ ಅಧಿಕಾರಿಯೊಬ್ಬನನ್ನು ನಿಯೋಜಿಸಿದ ಉದ್ದೇಶವೇನೆಂದು ತಿಳಿಯಬೇಡವೇ. ಎಲ್ಲ ಮಂತ್ರಿಗಳ ಕಾರ್ಯದರ್ಶಿಗಳನ್ನು ಮೋದಿಯೇ ನೇಮಿಸುವುದರ ಮರ್ಮವೇನೆಂದು ಅರ್ಥಮಾಡಿಕೊಳ್ಳಬೇಡವೇ. ಆಡಳಿತ ನಿಧಾನಕ್ಕೆ ಏಕವ್ಯಕ್ತಿ ಕೇಂದ್ರಿತವಾಗುತ್ತಿರುವುದನ್ನು ಕಡೆಗಣಿಸಬಹುದೇ. ಕಳೆದ ತಿಂಗಳು ಪುಣೆಯಲ್ಲಿ ಹಿಂದೂತ್ವವಾದಿಗಳ ಗುಂಪೊಂದು ಮುಸ್ಲಿಂ ಟೆಕ್ಕಿಯೊಬ್ಬನನ್ನು ಕೊಂದುಹಾಕಿ ಅಟ್ಟಹಾಸ ನಡೆಸಿದ ಘಟನೆಯ ಕುರಿತು ಮಾಧ್ಯಮಗಳಲ್ಲಿ ವ್ಯಾಪಕ ಟೀಕೆಗಳು ಕೇಳಿಬಂದ ನಂತರವೆ ಮೋದಿ (ಮನಸ್ಸಿಲ್ಲದ ಮನಸ್ಸಿನಿಂದ) ತನ್ನ ಸುದೀರ್ಘ ಮೌನ ಮುರಿದನೆಂಬ ವಿಚಾರವನ್ನು ತಳ್ಳಿಹಾಕಲು ಸಾಧ್ಯವೇ.

2002ರ ಗೋಧ್ರೋತ್ತರ ಗಲಭೆಗಳ ಬಗ್ಗೆ ಮೋದಿಯ ನಿಲುವು ಇವತ್ತಿಗೂ ಬದಲಾಗಿದೆಯೇ. ಹಲವಾರು ವಾರಗಳ ಕಾಲ ನಡೆದ ಆ ನರಮೇಧಕ್ಕೆ ಆತ ಇದುವರೆಗೂ ಪಶ್ಚಾತ್ತಾಪ ವ್ಯಕ್ತಪಡಿಸಿದ್ದಾನೆಯೇ. ಹೀಗಿರುವಾಗ ಅಲ್ಪಸಂಖ್ಯಾತರ ಬಗ್ಗೆ, ಕೋಮು ಹಿಂಸಾಚಾರದ ಬಗ್ಗೆ ಇಂದು ಆತನ ಧೋರಣೆ ಬದಲಾಗಿದೆ ಎಂದು ಊಹಿಸುವುದಾದರೂ ಹೇಗೆ? ಹುಲಿ ತನ್ನ ಪಟ್ಟೆಗಳನ್ನು ಬದಲಿಸಬಲ್ಲುದೇ? ಗುಜರಾತಿನ ನ್ಯಾಯಾಂಗ ವ್ಯವಸ್ಥೆ ಮೇಲೆ ಭರವಸೆ ಇರದ ಕಾರಣಕ್ಕೆ ಸರ್ವೋಚ್ಚ ನ್ಯಾಯಾಲಯ ಅನೇಕ ಪ್ರಕರಣಗಳನ್ನು ಇತರ ರಾಜ್ಯಗಳಿಗೆ ವರ್ಗಾಯಿಸಿದೆ ಮತ್ತು ಅಲ್ಲಿ ವಿಚಾರಣೆ ನಡೆಯುತ್ತಿದೆ ಎಂಬುದನ್ನು ನಾವು ನೆನಪಿನಲ್ಲಿಡಬೇಡವೇ.

ನರೋದಾ ಪಾಟಿಯಾ ಪ್ರಕರಣದಲ್ಲಿ ಮೋದಿಯ ಮಾಜಿ ಸಚಿವೆ ಮಾಯಾ ಕೊಡ್ನಾನಿ ಮತ್ತು ಬಾಬು ಬಜರಂಗಿ ಮತ್ತಿತರರು ಈಗಾಗಲೆ ಜೀವಾವಧಿ ಶಿಕ್ಷೆಗೊಳಗಾಗಿಲ್ಲವೇ. ಸರ್ವೋಚ್ಚ ನ್ಯಾಯಾಲಯದ ವಿಶೇಷ ತನಿಖಾ ತಂಡ ಮೋದಿ ಆಳ್ವಿಕೆಯ ಕಾಲದಲ್ಲಿ ಹತ್ತುಹಲವು ನಕಲಿ ಎನ್ಕೌಂಟರ್‌ಗಳು ನಡೆದಿರುವುದನ್ನು ಕಂಡುಕೊಂಡಿದ್ದು ಆ ಕುರಿತ ವಿಚಾರಣೆ ಇನ್ನೂ ಬಾಕಿಯಿದೆಯಲ್ಲವೇ? "ಗುಜರಾತ್ ಹೊತ್ತಿ ಉರಿಯುತ್ತಿದ್ದಾಗ ಆಧುನಿಕ ನೀರೋಗಳು ಪಿಟೀಲ್ ಬಾರಿಸುತ್ತಿದ್ದರು" ಎಂಬ ಸರ್ವೋಚ್ಚ ನ್ಯಾಯಾಲಯದ ಟೀಕೆಗಳಿಂದ ಆತನಿಗಿನ್ನೂ ಪಾಪವಿಮೋಚನೆಯಾಗಿದೆಯೇ. 2002ರ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ಜಾಕಿಯಾ ಜಾಫ್ರಿ ದಾಖಲಿಸಿರುವ ಪ್ರಕರಣ ಇನ್ನೂ ಇತ್ಯರ್ಥವಾಗಿದೆಯೇ. ಇಂಥಾ ಪ್ರಕರಣಗಳಿಗೆ ಸಮಯ ಮಿತಿ ಎಂಬುದಿದೆಯೇ.

ಈ ಸಂದರ್ಭದಲ್ಲಿ ಕೊಂಚ ಹಿಂದಕ್ಕೆ ತಿರುಗಿ ಇತಿಹಾಸವನ್ನು ವೀಕ್ಷಿಸುವ ಅಗತ್ಯವಿಲ್ಲವೇ. ಚಿಲಿ ದೇಶದಲ್ಲಿ ಅಧ್ಯಕ್ಷ ಸಾಲ್ವದೋರ್ ಅಯೆಂಡೆಯನ್ನು ಹತ್ಯೆಗೈದು ಅಧಿಕಾರಕ್ಕೆ ಬಂದ ಪಿನೋಷೆಟ್ 25 ವರ್ಷಗಳ ತರುವಾಯ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಲೇಬೇಕಾಗಲಿಲ್ಲವೇ. ಶಿಕ್ಷೆ ಅನುಭವಿಸುವುದಕ್ಕೆ ಮೊದಲೇ ಆತ ಸತ್ತುಹೋದನೆಂಬುದು ಬೇರೆ ವಿಷಯ.

ಮೋದಿ ದೊಡ್ಡ ಹೀರೋ ಎಂದು ಗುಣಗಾನ ಮಾಡುವವರು ಜರ್ಮನಿ, ಇಟಲಿಗಳ ಜನರನ್ನು ಅನುಕರಿಸುತ್ತಿಲ್ಲವೇ. ಮುಸೋಲಿನಿ, ಹಿಟ್ಲರ್‌ಗಳು ಎಂತಹದ್ದೇ ಪಾಪಕೃತ್ಯಗಳನ್ನೂ ಮಾಡಿದರೂ, ಎಷ್ಟೇ ವಿರೋಧಿಗಳನ್ನು, ಎಷ್ಟೇ ಯಹೂದಿಗಳನ್ನು ಕೊಂದುಹಾಕಿದರೂ ಅಭಿಮಾನಿಗಳು ಕಂಡೂಕಾಣದಂತೆ ಇದ್ದವರಲ್ಲವೇ. ಅಂಧಾಭಿಮಾನಿಗಳು ಹೀಗೆ ನರಹತ್ಯೆ ಕುರಿತು ಎಳ್ಳಷ್ಟೂ ಪಶ್ಚಾತ್ತಾಪ ಪಡದಿರುವುದಕ್ಕೆ ಅವರು ತಮ್ಮ ಭಾವನೆಗಳನ್ನು



ಹೊರಹಾಕದಿರುವುದು ಮತ್ತು ಅವರಲ್ಲಿ ಸಂವೇದನಾಶೀಲ ಜಡವಾಗುವುದೆ ಮುಖ್ಯ ಕಾರಣವಲ್ಲವೇ.

ಮುಂದೆ 1970ರಲ್ಲಿ ಜರ್ಮನಿಯ ಅಧ್ಯಕ್ಷ ವಿಲ್ ಬ್ರಾಂಟ್, ತನ್ನ ದೇಶ ಹಿಂದೆ ಪೋಲೆಂಡ್ ಪ್ರಜೆಗಳಿ ಕೊಟ್ಟಿದ್ದ ಸಂಕಷ್ಟಕ್ಕೆ ಮೊಳಕಾಲೂರಿ ವಿಷಾದ ವ್ಯಕ್ತಪಡಿಸಿ ನಂತರ ಜರ್ಮನಿಯ ಪ್ರಜೆಗಳೂ ಬದಲಾಗಲಿಲ್ಲವೇ. ಬದಲಾವಣೆಯ ಹಿಂದೆ ನೊಬೆಲ್ ಪ್ರಶಸ್ತಿ ವಿಜೇತ ಲೇಖ ಹೆನ್ರಿಕ್ ಬೋಲ್‌ನ ಅಪಾರ ಕೊಡುಗೆ ಇರಲಿಲ್ಲವೇ.

ಇಂಥಾದ್ದೆ ಪ್ರಕ್ರಿಯೆ ಗುಜರಾತಿನಲ್ಲೂ ದೇಶದಲ್ಲ ನಡೆಯಬೇಡವೇ. ಏಕೆಂದರೆ ಜರ್ಮನಿ, ಇಟಲಿಗಳಂ ಇಲ್ಲಿಯೂ ಕೋಮುವಾದ, ಕದನಶೀಲ ದೇಶಪ್ರೇಮಗಳ ಅತಿರೇಕದ ಮಟ್ಟ ತಲುಪುತ್ತಿಲ್ಲವೇ. ಭಯೋತ್ಪಾದ ಮತಾಂತರ ಕುರಿತಂತೆ ಅಲ್ಪಸಂಖ್ಯಾತ ಸಮುದಾಯವ ಗುರಿಯಾಗಿಸಿ ದ್ವಿತೀಯ ದರ್ಜೆಗಿಳಿಸುವ ವ್ಯವಸ್ಥಿ ಕಾರ್ಯಾಚರಣೆ ನಡೆಯುತ್ತಿಲ್ಲವೇ.

ಕೇವಲ ಗುಜರಾತ್ 2002 ಒಂದೇ ಅಲ್ಲ, ನೆಲ್ಲಿ ಭಾಗಲ್ಪುರ, ಭೀವಂಡಿ, ದೆಹಲಿ, ಮುಂಬಯಿ ಮುಜಾಫರ್‌ನಗರ ಮುಂತಾದ ಹಲವಾರು ಕೋಮು ದಂಗೆಗಳ ಅಪರಾಧಿಗಳಿಗೆ ಸಮೇತ ಶಿಕ್ಷೆಯಾಗಬೇಡವೇ ಇವರಿಗೆಲ್ಲ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ಎ ಪ್ರಗತಿಪರರ, ಎಲ್ಲ ಪ್ರಜ್ಞಾವಂತರ ಕರ್ತವ್ಯವೂ ಆಗಿದೆಯಲ್ಲವೇ ವಿಶ್ವಸಂಸ್ಥೆಯ 1948ರ ಜನಾಂಗಹತ್ಯೆ ಕುರಿತ ಒಡಂಬಡಿಕೆ ಭಾರತ ಕೂಡಾ ಸಹಿ ಮಾಡಿದೆ ಎಂಬುದನ್ನು ಯಾರು ಮರೆಯಬಾರದಲ್ಲವೇ.

(ಆಧಾರ: *Punishing Communa*
Violence, ಪ್ರಫುಲ್ ಬಿದ್ವಾಯಿ


ಬಿಜೆಪಿ ಕಾಂಗ್ರೆಸ್‌ಗಿಂತ ಭಿನ್ನವೇನಲ್ಲ!

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತದ ಮಹಾಜನತೆ ಕಾಂಗ್ರೆಸ್ ನೇತೃತ್ವದ ಯುಪಿಎ ಮೈತ್ರಿಕೂಟವನ್ನು ಶೋಚನೀಯವಾಗಿ ಸೋಲಿಸಿದ್ದಕ್ಕೆ ಕಾರಣ ಬಿಜೆಪಿಯ ಕೋಮುವಾದ ಮತ್ತು ಮೋದಿಯ ಜನಪ್ರಿಯತೆ ಅಲ್ಲ, ಬದಲಿಗೆ ಜನರಲ್ಲಿದ್ದ ಹೊಸ ರೀತಿಯ ನಿರೀಕ್ಷೆಗಳು ಮತ್ತು ಏಕತಾನತೆಯ ರಾಜಕಾರಣವನ್ನು ಬದಲಿಸಿ ನೋಡುವ ಇರಾದೆ. ಇದಕ್ಕಾಗಿ ಸಾರಾಸಗಟಾಗಿ ಮತದಾರರು ಬಿಜೆಪಿಗೆ ಮತ ಹಾಕಿದ್ದರು. ಮೈತ್ರಿಕೂಟಗಳ ಗೊಡವೆಯೇ ಬೇಡವೆಂದು ಬಿಜೆಪಿಗೆ ಸ್ಪಷ್ಟ ಬಹುಮತ ದೊರಕಿಸಿ ಕೊಡುವಲ್ಲಿಯೂ ಒಂದು ಬದಲಾದ ರಾಜಕಾರಣವನ್ನು ನೋಡುವ ಕುತೂಹಲ ಜನರಿಗಿತ್ತು. ಹಾಗಾದರೆ ಜನತೆ ಇಂತಹ ಬದಲಾವಣೆಯನ್ನು ಯಾಕೆ ಬಯಸಿದರು?

ಕಾರಣ ಸ್ಪಷ್ಟ: ಮೊದಲಿಗೆ, ಕಾಂಗ್ರೆಸ್‌ಗಿಂತ ವಿಭಿನ್ನವಾದ ಆಡಳಿತವನ್ನು ಬಿಜೆಪಿ ನೀಡಬಹುದೆಂಬ ಆಶಯ ಮತ್ತು ನಿರೀಕ್ಷೆ. ಎರಡನೆಯದಾಗಿ, ಮೈತ್ರಿಕೂಟಗಳಿದ್ದರೆ ರಾಜಕೀಯ ಸ್ಥಿರತೆಯಿಲ್ಲದೆ ತಾವು ನಿರೀಕ್ಷಿಸಿದ ಬದಲಾವಣೆಯ ರಾಜಕಾರಣ ನಡೆಯಲಾರದೆಂಬ ಆತಂಕ. ಈ ಎರಡು ಕಾರಣಗಳಿಂದಾಗಿ ಜನರು ಬಿಜೆಪಿಯ ಕೋಮುವಾದದ ಚಾರಿತ್ರ್ಯವನ್ನು, ಅದರ ಬಲಪಂಥೀಯ ಧೋರಣೆಗಳನ್ನು ಮರೆತು ಅದಕ್ಕೆ ಮತ ಹಾಕಿದ್ದರು. ಜನತೆಯ ಈ ನಿರೀಕ್ಷೆ ಎಷ್ಟರಮಟ್ಟಿಗೆ ನಿಜವಾಗಿದೆ ಅಥವಾ ಹುಸಿಯಾಗಿದೆ ಎಂಬುದನ್ನು ಇಷ್ಟು ಬೇಗ ತಿಳಿಯಲು ಸಾಧ್ಯವಿಲ್ಲವೆಂಬುದು ರಾಜಕೀಯ ಪಂಡಿತರ ಮಾತಾಗಿದೆ. ಅವರು ಇದನ್ನು 'ಹನಿಮೂನ್ ಪೀರಿಯಡ್-ಮಧುಚಂದ್ರದ ಅವಧಿ' ಎಂದು ಕರೆಯುತ್ತಾರೆ. ಆದರೆ ನಾನಿದನ್ನು ಒಪ್ಪಲಾರೆ. ಯಾಕೆಂದರೆ ಸರಕಾರವೊಂದು ಮುಂದಿನ ದಿನಗಳಲ್ಲಿ ನಡೆಸಬಹುದಾದ ಹಾದಿಯ ದಿಕ್ಸೂಚಿಯನ್ನಾದರೂ ಅದರ ಒಂದು ತಿಂಗಳ ಅವಧಿಯ ಕೆಲವು ನಡೆಗಳು ತೋರಿಸುತ್ತವೆಂಬುದು ನನ್ನ ನಂಬಿಕೆ. ಅಂತಹ ಒಂದೆರಡು ನಡೆಗಳ ಬಗ್ಗೆ ನಾನಿಲ್ಲಿ ಹೇಳಬಯಸುತ್ತೇನೆ.

ಮೊದಲನೆಯದಾಗಿ, ಸಂಸತ್ತಿನಲ್ಲಿ ವಿರೋಧ ಪಕ್ಷದ ಸ್ಥಾನವನ್ನು ನೀಡುವ ಬಗ್ಗೆ ಬಿಜೆಪಿ ತೆಗೆದುಕೊಂಡ ನಿರ್ಣಯವನ್ನೇ ನೋಡಿ. ಸಂವಿಧಾನದ ಪ್ರಕಾರ ಅಧಿಕೃತ ವಿರೋಧ ಪಕ್ಷದ ಸ್ಥಾನ ಪಡೆಯಲು ಪಕ್ಷವೊಂದು ಸಂಸತ್ತಿನ ಒಟ್ಟು ಸ್ಥಾನಗಳ ಪೈಕಿ ಶೇಕಡಾ ಹತ್ತರಷ್ಟನ್ನಾದರು ಪಡೆದಿರಬೇಕಾಗುತ್ತದೆ. ಆ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಐವತ್ತೈದು ಸ್ಥಾನಗಳನ್ನು ಪಡೆಯಬೇಕಾಗಿತ್ತು, ಆದರೆ ಅದೀಗ ಪಡೆದಿರುವುದು ಕೇವಲ ನಲವತ್ತನಾಲ್ಕು ಸ್ಥಾನಗಳನ್ನು ಮಾತ್ರ. ಇಂತಹ ಸನ್ನಿವೇಶದಲ್ಲಿ ನಿಯಮಗಳನುಸಾರ ಕಾಂಗ್ರೆಸ್ ಅಧಿಕೃತ ವಿರೋಧಪಕ್ಷದ ಸ್ಥಾನವನ್ನು ಪಟ್ಟು ಹಿಡಿದು ಕೇಳುವ ಸ್ಥಿತಿಯಲ್ಲಿಲ್ಲ. ಹಾಗೆಂದು ವಿರೋಧ ಪಕ್ಷವೇ ಇಲ್ಲದಂತಹ ಒಂದು ಸಂಸತ್ತನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವೇ? ಹಾಗೆ ವಿರೋಧ ಪಕ್ಷವೇ ಇರದ ಸಂಸತ್ತಿನಲ್ಲಿ ಎಷ್ಟರಮಟ್ಟಿಗೆ ರಾಷ್ಟ್ರೀಯ ವಿಚಾರಗಳು ಚರ್ಚೆಯಾಗಬಹುದು ಮತ್ತು ಸರಕಾರದ ಕಾರ್ಯವೈಖರಿ ಹೇಗಿರಬಹುದೆಂಬುದನ್ನು ನಾವು ಊಹಿಸಿಕೊಳ್ಳುವುದೇ ಕಷ್ಟವಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಿಜೆಪಿಗೆ ನಿಜವಾಗಿಯೂ ವಿಶ್ವಾಸವಿದ್ದದ್ದೇ ಆಗಿದ್ದಲ್ಲಿ ಅದು ಕಾಂಗ್ರೆಸ್‌ಗೆ ಯಾವುದೇ ಚರ್ಚೆ ಇರದೆ ವಿರೋಧ ಪಕ್ಷದ ಸ್ಥಾನವನ್ನು ನೀಡಬಹುದಾಗಿತ್ತು, ಆದರೆ ಬಿಜೆಪಿ ಈ ವಿಚಾರದಲ್ಲಿ ತಾನೇನೂ ನಿರ್ಧಾರ ತೆಗೆದುಕೊಳ್ಳುವುದಿಲ್ಲವೆಂದು ಹೇಳಿ ವಿಷಯವನ್ನು ಸಂಸತ್ತಿನ ಸ್ಪೀಕರ್ ವಿವೇಚನೆಗೆ ಬಿಟ್ಟಿತು. ಸ್ಪೀಕರ್ ಅವರು ಪಕ್ಷ ರಾಜಕಾರಣಕ್ಕೆ ಅತೀತರೆಂದು ನಾವೆಷ್ಟೇ ಹೇಳಿಕೊಂಡರೂ ಬಿಜೆಪಿಯ ಹಿರಿಯರ ಮಾತಿಗೆ ವಿರುದ್ಧವಾಗಿ ಸ್ಪೀಕರ್ ಅವರು ಕಾಂಗ್ರೆಸ್‌ಗೆ ವಿರೋಧ ಪಕ್ಷದ ಸ್ಥಾನವನ್ನು ನೀಡುವುದು ಅನುಮಾನದ ಮಾತು.





ಕಾಂಗ್ರೆಸ್‌ಗೆ ಅಧಿಕೃತ ವಿರೋಧ ಪಕ್ಷದ ಸ್ಥಾನ ನೀಡುವಲ್ಲಿ ಬಿಜೆಪಿಯ ನಿರ್ಣಯ ತಾಂತ್ರಿಕವಾಗಿ ಸರಿ ಇರಬಹುದು. ಆದರೆ ನೈತಿಕವಾಗಿ ಎಷ್ಟು ಸರಿ? ನೈತಿಕತೆಯ ಬಗ್ಗೆ ಮಾತಾಡುತ್ತಲೇ ಬಂದ ಬಿಜೆಪಿ ಈ ವಿಷಯದಲ್ಲಿ ತನ್ನ ನೈತಿಕ ದಿವಾಳಿತನವನ್ನು ತೋರಿಸುತ್ತಿರುವುದಕ್ಕೆ ಕಾರಣಗಳಿವೆ: ಬರುವ ದಿನಗಳಲ್ಲಿ ಕೇಂದ್ರ ಸರಕಾರ ಹಲವು ಸಾಂವಿಧಾನಿಕ ಹುದ್ದೆಗಳಿಗೆ ನೇಮಕಗಳನ್ನು ಮಾಡಬೇಕಾಗಿದೆ. ಇಂತಹ ನೇಮಕಾತಿ ಸಮಿತಿಗಳಲ್ಲಿ ಪ್ರಧಾನಿ ಮತ್ತವರ ಸಂಪುಟದ ಸಚಿವರ ಜೊತೆಗೆ ಅಧಿಕೃತ ವಿರೋಧ ಪಕ್ಷದ ನಾಯಕರೂ ಇರಬೇಕಾಗುತ್ತದೆ. ಸಾಂವಿಧಾನಿಕ ಹುದ್ದೆಗಳ ಆಯ್ಕೆಯ ಪ್ರಶ್ನೆ ಬಂದಾಗ ಇವರೆಲ್ಲ ಹೆಚ್ಚು ವಿವಾದಗಳಿಲ್ಲದೆ ಉತ್ತಮ ವ್ಯಕ್ತಿಯನ್ನು ನೇಮಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಾರೆ. ಆದರೀಗ ಅಂತಹ ಯಾವುದೇ ಮಿತಿಗಳಿಲ್ಲ, ಅಧಿಕೃತ ವಿರೋಧ ಪಕ್ಷದ ನಾಯಕನೇ ಇಲ್ಲದಿರುವುದರಿಂದ ಹುದ್ದೆಗಳ ನೇಮಕಾತಿಗಳಲ್ಲಿ ಚರ್ಚೆ ನಡೆಸಿ ತೀರ್ಮಾನಕ್ಕೆ ಬರಬೇಕಾದ ಯಾವ ಅಗತ್ಯವೂ ಬಿಜೆಪಿಗೆ ಇಲ್ಲ, ಅದು ಏಕಮುಖವಾಗಿ ತನಗಿಷ್ಟಬಂದ ರೀತಿಯಲ್ಲಿ ನೇಮಕಾತಿಗಳನ್ನು ಮಾಡಿಕೊಳ್ಳಬಹುದಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಕ್ರಮೇಣ ಸರ್ವಾಧಿಕಾರಕ್ಕೆಡೆ ಮಾಡಿಕೊಡುವುದು ಖಚಿತ. ಈಗಾಗಲೇ ಮುಖ್ಯ ನ್ಯಾಯಮೂರ್ತಿಗಳ ನೇಮಕಾತಿ ವಿಚಾರದಲ್ಲಿ ಇಂತಹ ವ್ಯತಿರಿಕ್ತ ಬೆಳವಣಿಗೆಗಳು ನಡೆಯುತ್ತಿವೆ. ಬಿಜೆಪಿ ಇದಕ್ಕೆ ನೀಡುತ್ತಿರುವ ಸಬೂಬುಗಳೆಂದರೆ ಎಪ್ಪತ್ತರ ದಶಕದಲ್ಲಿ ಕಾಂಗ್ರೆಸ್ ಕೂಡ ಬೇರ್ಯಾವುದೇ ವಿರೋಧ ಪಕ್ಷಗಳಿಗೂ ಅಧಿಕೃತ ಮಾನ್ಯತೆ ನೀಡಿರಲಿಲ್ಲವೆಂಬುದು. ಇರಬಹುದು, ಆದರೆ ಹಿಂದೆ ಕಾಂಗ್ರೆಸ್ ಮಾಡಿದ ತಪ್ಪನ್ನು ಇವತ್ತಿನ ಮತದಾರರು ಸರಿಯೆಂದು ಹೇಳುತ್ತಿಲ್ಲ ಮತ್ತು ಇತಿಹಾಸವನ್ನು ಪುನರಾವರ್ತಿಸಿ ಎಂದು ಸಹ ಕೇಳುತ್ತಿಲ್ಲ, ಬಹಳ ಹಿಂದೆ ಕಾಂಗ್ರೆಸ್ ಮಾಡಿದ ತಪ್ಪನ್ನೇ ಬಿಜೆಪಿಯೂ ಮಾಡುವುದಾದಲ್ಲಿ ಅದಕ್ಕೂ ಕಾಂಗ್ರೆಸ್‌ಗೂ ವ್ಯತ್ಯಾಸವೇನು ಎಂಬುದು ಜನತೆಯ ಪ್ರಶ್ನೆಯಾಗಿದೆ. ಜನತೆ ಬಿಜೆಪಿಯನ್ನು ಆರಿಸಿರುವುದೆ ಕಾಂಗ್ರೆಸ್‌ನ ತಪ್ಪುಗಳಿಗೆ ಪಾಠ ಕಲಿಸಲು ಮತ್ತು ಬಿಜೆಪಿ ಅಂತಹ ತಪ್ಪುಗಳನ್ನು ಮಾಡಲಾರದೆಂಬ ನಂಬಿಕೆಯಿಂದ ಅನ್ನುವುದನ್ನು ಬಿಜೆಪಿ ಕೇವಲ ಒಂದು ತಿಂಗಳಿಗೆ ಮರೆತಂತಿದೆ. ಇದು ಅಪಾಯಕಾರಿಯಾದ ಬೆಳವಣಿಗೆಯಾಗಿದೆ.

ಮತ್ತೊಂದು ವಿಷಯದಲ್ಲಿಯೂ ಬಿಜೆಪಿ ಕಾಂಗ್ರೆಸ್‌ಅನ್ನು ಅನುಸರಿಸಲು ಹೊರಟಂತಿದೆ ಕೇಂದ್ರದಲ್ಲಿ ಪ್ರತಿಬಾರಿಯೂ ಹೊ ಸರಕಾರವೊಂದು ಅಧಿಕಾರ ವಹಿ ಕೊಂಡಾಗ ಅದು ಹಿಂದಿನ ಸರಕಾ ನೇಮಿಸಿದ್ದ ರಾಜ್ಯಪಾಲರುಗಳನ್ನು ವಾಪಸ್ ಕರೆಸಿಕೊಳ್ಳುತ್ತದೆ. ಈ ಹಿಂದೆ 2004ರ ಯುಪಿಎ ಸರಕಾರ ಅಧಿಕಾರ ವಹಿಸಿಕೊಂಡಾಗ ಹಿಂದಿ ಎನ್‌ಡಿಎ ಸರಕಾರ ನೇಮಿಸಿದ್ದ ರಾಜ್ಯಪಾಲರುಗಳನ್ನು ವಾಪಸ್ ಕರೆಸಿಕೊಂಡು ಕೆಟ್ಟ ಸಂಪ್ರದಾಯವನ್ನು ಮುಂದುವರೆಸಿತು ಇದೀಗ ತಾನೇನು ಕಡಿಮೆಯಿಲ್ಲ ಅನ್ನುವ ಹಾ ಬಿಜೆಪಿಯೂ ಬಹಳಷ್ಟು ರಾಜ್ಯಪಾಲರುಗಳನ್ನು ವಾಪಸ್ ಕರೆಸಿಕೊಳ್ಳುವ ದಾರಿಯಲ್ಲಿ ನಡೆಯುತ್ತಿದೆ. ಹಾಗೆ ನೋಡಿದ ರಾಜ್ಯಪಾಲರುಗಳನ್ನು ವಾಪಾಸು ಕರೆಸಿಕೊಂಡು ತನ್ನ ಪಕ್ಷ ನಾಯಕರುಗಳಿಗೆ ಪುನರ್ವಸತಿ ಕಲ್ಪಿಸಿಕೊಡುವ ಅನಿ ಸಂಪ್ರದಾಯಕ್ಕೆ ನಾಂದಿ ಹಾಡಿದ್ದೇ 1977ರ ಜನತಾ ಪಕ್ಷ ಕೇಂದ್ರ ಸರಕಾರ. ಇವತ್ತಿನ ಬಿಜೆಪಿ ಅವತ್ತಿನ ಜನಸಂಘವಾ ಅದೇ ಜನತಾ ಪಕ್ಷದೊಳಗಿತ್ತೆಂಬುದನ್ನು ನಾವ ಮರೆಯಬಾರದು. ತಾನು ಹುಟ್ಟು ಹಾಕಿದ್ದ ಸಂಪ್ರದಾಯವನ ಕಾಂಗ್ರೆಸ್ ಮುಂದುವರೆಸಿದರೆ ತಪ್ಪು, ತಾನು ಮಾಡಿದ ಸರಿಯೆನ್ನುವ ಬಿಜೆಪಿಯ ವಾದವನ್ನು ಯಾರೂ ಒಪ್ಪಲ ಸಾಧ್ಯವಿಲ್ಲ. ಬಿಜೆಪಿಯ ನಾಯಕರುಗಳಿಂದ ಮತ್ತವೆ ಮಾತುಗಳು ಕೇಳಿಬರುತ್ತಿವೆ: ಕಾಂಗ್ರೆಸ್ ಮಾಡಿದ್ದನ್ನೇ ನಾವು ಮಾಡುತ್ತಿದ್ದೇವೆ ಎಂದು.


ಇದರ ಜೊತೆಗೆ ಬಜೆಟ್ಟಿಗಿಂತ ಮುಂಚ ಬೆಲೆಯೇರಿಸುವುದು ಇತ್ಯಾದಿ ನಡವಳಿಕೆಗಳಲ್ಲೂ ಸ ಬಿಜೆಪಿ ಕಾಂಗ್ರೆಸ್ ಅನ್ನು ಅನುಸರಿಸುವಂತೆ ಕಾಣುತ್ತಿದೆ.

ಜನತೆ ಬಿಜೆಪಿಯನ್ನು ಆರಿಸಿರುವುದೇ ಅದ ಕಾಂಗ್ರೆಸ್‌ಗಿಂತ ಭಿನ್ನವಾಗಿ ಆಡಳಿತ ನಡೆಸಬಲ್ಲದೆಂಬ ನಂಬಿಕೆಯಿಂದ. ಮತ್ತು ಕಾಂಗ್ರೆಸ್‌ಗಿಂತ ತಾನು ವಿಭಿನ್ನವಾ ರಾಜಕಾರಣ ಮಾಡುತ್ತೇನೆಂದು ಅದು ನೀಡಿದ ಭರವಸೆಯ ಮೇಲಿಟ್ಟ ನಂಬಿಕೆಯಿಂದ.

ಹಾಗಾಗಿ ಈಗ ಜನತೆ ಕೇಳುತ್ತಿರುವ ಪ್ರಶ್ನೆಯೆಂದರ ನೀವು ಕಾಂಗ್ರೆಸ್ ಮಾಡಿದ್ದನ್ನೇ ಮಾಡುವುದಾದಲ್ಲಿ ನಾವ ನಿಮ್ಮನ್ನಾಕೆ ಆಯ್ಕೆ ಮಾಡಿ ಅಧಿಕಾರ ಕೊಡಬೇಕಾಗಿತು ಮೆಲುದನಿಯಲ್ಲಿರುವ ಈ ಪ್ರಶ್ನೆಯ ಹಿಂದಿರುವ ಜನತೆಯ ಆಶಯವನ್ನು ಬಿಜೆಪಿ ಈಗಲೇ ಅರ್ಥಮಾಡಿಕೊಂಡ ಆಡಳಿತ ನಡೆಸದೇ ಹೋದರೆ ಇವತ್ತು ಕಾಂಗ್ರೆಸ್‌ಗೆ ಆಗಿರು ಗತಿಯೇ ಅದಕ್ಕೂ ಆಗುತ್ತದೆಯೆಂಬುದನ್ನು ಮರೆ ಬಾರದು.

- ಅನಿತಾ ಕು.ಸ.ಮಧುಸೂದನ

ಟಾಮ್ ಹಾಂಕ್ಸ್ ವಿಶ್ವ ಕಂಡ ವಿಸ್ಮಯ



ಟಾಮ್ ಹಾಂಕ್ಸ್ ಕ್ಯಾಲಿಫೋರ್ನಿಯಾದ ಪ್ರತಿಭಾವಂತ. ಈತ ಜನಿಸಿದ್ದು 1956ರಲ್ಲಿ, ಆವರೆಗೆ ಹಾಲಿವುಡ್ ಕಂಡರಿಯದ ವಿಶಿಷ್ಟ ನಟ ಎನಿಸಿಕೊಂಡ. ಅದನ್ನು ಬಿಡಿಸಿ ಹೇಳಬೇಕಿಲ್ಲ. ಆತನ ಬದುಕು ನಿಜಕ್ಕೂ ರೋಮಾಂಚಕ. ಟಾಮ್ ಹಾಂಕ್ಸ್ ಅಡುಗೆಭಟ್ಟನೊಬ್ಬನ ಮಗ; ಜೊತೆಗೆ ರೆಸ್ಟೋರೆಂಟ್ ಮ್ಯಾನೇಜರಾಗಿಯೂ ಕೆಲಸ ಮಾಡುತ್ತಿದ್ದಾತ. ಬರಹಗಾರನಾಗಬಯಸಿದ್ದ ಟಾಮ್ ತಂದೆ ಅಡುಗೆಭಟ್ಟನಾಗಿ ಬದುಕು ಸವೆಸಿದರೂ ಸಾಯುವ ಮುನ್ನ ತನ್ನ ಅಪ್ರಕಟಿತ ಆತ್ಮಚರಿತ್ರೆ ಬರೆದಿದ್ದ. ಟಾಮ್‌ನ ತಾಯಿ ಆಸ್ಪತ್ರೆಯೊಂದರಲ್ಲಿ ಕೆಲಸಕ್ಕಿದ್ದವಳು. ಹೀಗಿರಲು ಟಾಮ್ ಹಾಂಕ್ಸ್‌ಗೆ ಅಚ್ಚರಿ ಕಾದಿತ್ತು. ಬೆಸೆದ ಹಸ್ತಗಳಂತಿದ್ದ ತನ್ನ ಕುಟುಂಬದಲ್ಲಿನ ಬದುಕು ಆತನನ್ನು ಆಘಾತಗೊಳಿಸಿತು. ಟಾಮ್‌ಗೆ ನಾಲ್ಕು ವರ್ಷ ವಯಸ್ಸಾಗಿದ್ದಾಗ ಆತನ ತಾಯಿ ತನ್ನ ಗಂಡನಿಗೆ ವಿವಾಹ ವಿಚ್ಛೇದನ ಕೊಟ್ಟು ಹೊರಟುಹೋದಳು. ಆ ಘಟನೆ ಟಾಮ್‌ನ ಮನಸ್ಸಿನ ಮೇಲೆ ಭೀಕರ ಪರಿಣಾಮ ಬೀರಿತು. ಆತನೇ ಹೇಳಿಕೊಳ್ಳುವಂತೆ ಅದೊಂದು 'ಅನಾಥನಾಮಯ' ಅಥವಾ 'ಒಂಟಿತನ' ತಂದೊಡ್ಡಿದ ಘಟನೆ. ಆ ದುಃಖದಿಂದ ಹೊರಬರಲು ಟಾಮ್ ಚರ್ಚಿನ ಮೊರೆ ಹೋದ. ತಾಸುಗಟ್ಟಲೆ ಚರ್ಚಿನಲ್ಲಿ ಒಬ್ಬನೇ ಕೂತು ಬಂದ. ಸ್ತೋತ್ರ-ಶುಶ್ರೂಷೆ ತರಹದ ಹಾದಿಗಳ ಮೂಲಕ ಮನಸನ್ನು ಸಮಾಧಾನಪಡಿಸಿಕೊಳ್ಳಲು ಯತ್ನಿಸಿದ.

ಇದೆಲ್ಲದರಿಂದ ಟಾಮ್ ಸುಧಾರಿಸಿಕೊಳ್ಳುವ ಮುನ್ನ ಇನ್ನೊಂದು ಘಟನೆ ಜರುಗಿತು. ಅಪ್ಪ ಕೆಲಸದ ಮೇಲೆ ಕುಟುಂಬ ಸಮೇತ ಊರೂರು ತಿರುಗಲಾರಂಭಿಸಿದ. ಪ್ರತಿ ಆರು ತಿಂಗಳಿಗೊಂದು ಊರು. ಕಡೆಗೆ ಟಾಮ್ ಹೈಸ್ಕೂಲು ಶಿಕ್ಷಣ ಮುಗಿಸುವಷ್ಟರಲ್ಲಿ ಕ್ಯಾಲಿಫೋರ್ನಿಯಾದ ಓಕ್‌ಲ್ಯಾಂಡಿನಲ್ಲಿ ಕುಟುಂಬ ಬೀಡುಬಿಟ್ಟಿತು. ಅಲ್ಲಿ ಓದಿನ ಜೊತೆಗೆ ಟಾಮ್ ಕಡಲೆಬೀಜ ಮಾರುವುದು, ಸೋಡಾ ಮಾರುವುದು, ಹೋಟೆಲಿನಲ್ಲಿ ಬೆಲ್ ಮ್ಯಾನ್ ಆಗಿ ಕೆಲಸ ಮಾಡುವುದು - ಹೀಗೆ ಪಾರ್ಟ್ ಟೈಮಿನಲ್ಲಿ ಕೆಲಸ ಮಾಡ ತೊಡಗಿದ. ತನ್ನ ಶಾಲಾದಿನಗಳ ಬಗ್ಗೆ ಆತ ಹೇಳಿಕೊಳ್ಳುವುದು ಹೀಗೆ: "ನಾನು ಶಾಲೆಯನ್ನು ಇಷ್ಟಪಡುತ್ತಿದ್ದೆ. ಅದೆಷ್ಟೋ ಮಕ್ಕಳು ಶಾಲೆಗೆ ಗುಡ್‌ಬೈ ಹೇಳುತ್ತಿದ್ದ ಆ ದಿನಗಳಲ್ಲಿ ಶಾಲೆ ನನ್ನ ಪಾಲಿಗೆ ಅದ್ಭುತ ಜಾಗವಾಗಿತ್ತು. ಅಲ್ಲಿ ಏನೋ ನಡೆಯುತ್ತಿದೆ, ಆ ಮೂಲಕ ನಾನೇನನ್ನೋ ಪಡೆದುಕೊಳ್ಳುತ್ತಿದ್ದೇನೆ ಎನಿಸುತ್ತಿತ್ತು. ನನ್ನ ಹೈಸ್ಕೂಲು ದಿನಗಳಲ್ಲಂತೂ ತಮಾಷೆ ಮಾಡುವ ಮೂಲಕ, ಜೋಕ್ಸ್ ಹೇಳುವ ಮೂಲಕ, ನಾಟಕಗಳಲ್ಲಿ ಪಾತ್ರ ಮಾಡುವ ಮೂಲಕ ವಿದ್ಯಾರ್ಥಿಗಳನ್ನು ರಂಜಿಸುತ್ತಿದ್ದೆ."

ನೇಪಥ್ಯದಲ್ಲೂ ಕೆಲಸ ಮಾಡುತ್ತಿದ್ದ ಟಾಮ್ ಒಬ್ಬ ಒಳ್ಳೆಯ ಸ್ಟೇಜ್ ಮ್ಯಾನೇಜರಾಗಿದ್ದ. ಆ ಮೂಲಕ ಎಲ್ಲೆಲ್ಲಿ ಏನೇನು ಸಾಧ್ಯವೋ ಎಲ್ಲವನ್ನೂ ಕಲಿಯುವ ತುಡಿತ ಹೊಂದಿದ್ದ. ಕಲೆಯ ಬಲೆಗೆ ನಿಧನಿಧಾನವಾಗಿ ಸಿಲುಕತೊಡಗಿದ ಟಾಮ್ ತನ್ನ ಓದನ್ನು ಅರ್ಧಕ್ಕೆ ಬಿಟ್ಟು 1977ರಲ್ಲಿ ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿಯ ಥಿಯೇಟರ್ ಮೇಜರ್ ಆಗಿ ನೇಮಕವಾದ. ಮೂರ್ನಾಲ್ಕು ವರ್ಷಗಳ ಕಾಲ ಅಲ್ಲಿ ಪಳಗಿದ ಟಾಮ್ "ಅದೇ ನನ್ನ ಶಾಲೆ. ನಾನೇನಾದರು ಕಲಿತಿದ್ದರೆ ಅಲ್ಲೇ ಕಲಿತಿದ್ದು. ಜೊತೆಗೆ ಕೆಲಸ ಮಾಡುವ ರೀತಿ ರಿವಾಜುಗಳನ್ನೂ..." ಎಂದು ಹೇಳುತ್ತಾನೆ. ಆ ದಿನಗಳಲ್ಲಿ ಆತ ನಟಿಸಿ ಸೈ ಎನಿಸಿಕೊಂಡ, ಪ್ರಶಸ್ತಿ ಪುರಸ್ಕಾರ ಪಡೆದುಕೊಂಡ ಅನೇಕ ನಾಟಕಗಳ ಪೈಕಿ 'ಟೇಮಿಂಗ್ ಆಫ್ ದಿ ಶ್ರೂ', 'ದಿ ಟು ಜೆಂಟಲ್‌ಮೆನ್ ಆಫ್ ವೆರೋನ' ಪ್ರಮುಖವಾದಂಥವು. ಅನಂತರವೇ ಟಾಮ್‌ಗೆ ನಟಿ ಸಮಂತ ಲೆವೀಸ್ ಪರಿಚಯವಾದದ್ದು. ಆಮೇಲೆ ಅವರಿಬ್ಬರೂ ನ್ಯೂಯಾರ್ಕಿಗೆ ಹೋಗಿ ಒಟ್ಟಿಗೆ ಜೀವಿಸಿದರು, ಮೂರು ವರ್ಷಗಳ ನಂತರ ಇಬ್ಬರೂ ಮದುವೆಯಾಗಿ ಮೂರು ಮಕ್ಕಳಿಗೆ ಜನ್ಮವಿತ್ತು ಆಮೇಲೆ ವಿಚ್ಛೇದನ ಪಡೆದರು.

ಟಾಮ್ ನ್ಯೂಯಾರ್ಕಿನಲ್ಲಿದ್ದ ದಿನಗಳಲ್ಲಿ ಶೇಕ್ಸ್‌ಪಿಯರ್ ಪ್ರೊಡಕ್ಷನ್ನಿನ ಅನೇಕ ನಾಟಕಗಳಲ್ಲಿ ನಟಿಸಿದ. ಆ ದಿನಗಳಲ್ಲೇ 'ಹೀ ನೋಸ್ ಯೂ ಆಲ್ ಅಲೋನ್' ಎಂಬ ಲೋ ಬಜೆಟ್ಟಿನ ಹಾರರ್ ಸಿನಿಮಾದಲ್ಲಿ ಚೊಚ್ಚಲ ಬಾರಿಗೆ ಕ್ಯಾಮೆರಾ ಎದುರು ನಿಂತು ಪುಟ್ಟದೊಂದು ಪಾತ್ರದಲ್ಲಿ ನಟಿಸಿದ. ಹಾಗೆ ನೋಡಿದರೆ ಆ ಚಿತ್ರದಲ್ಲಿ ಟಾಮ್ ನಿರ್ವಹಿಸಿದ್ದ ಪಾತ್ರ ಕೊಲೆಗೀಡಾಗಬೇಕಿತ್ತಂತೆ. ಆದರೆ ಎಡಿಟಿಂಗ್ ವೇಳೆ ಟಾಮ್‌ನ ಅದ್ಭುತ ಪರ್ಫಾರ್ಮೆನ್ಸ್ ನೋಡಿದ ನಿರ್ದೇಶಕ ಟಾಮ್ ಮಾಡಿದ್ದ ಪಾತ್ರ ಮರ್ಡರ್ ಆಗುವ ದೃಶ್ಯವನ್ನು ಕಟ್ ಮಾಡಿದನಂತೆ! ನಂತರದ ದಿನಗಳಲ್ಲಿ ಲಾಸ್‌ಏಂಜಲೀಸ್‌ಗೆ ತೆರಳಿ 'ದಿ ಲವ್ ಬೋಟ್', 'ಬಾಸಮ್ ಬುಡ್ಡೀಸ್', 'ಟ್ಯಾಕ್ಸಿ', 'ಹ್ಯಾಪಿ ಡೇಸ್', 'ಫ್ಯಾಮಿಲಿ ಟೈಸ್' ತರಹದ ಸೀರಿಯಲ್‌ಗಳಲ್ಲಿ ನಟಿಸಿ ಜನಪ್ರಿಯನಾದ. ಈ ನಡುವೆ ಟಾಮ್ 'ಮೇಜಸ್ ಅಂಡ್ ಮೋನ್‌ಸ್ಟರ್ಸ್' ಎಂಬ ಕಿರುತೆರೆಚಿತ್ರದಲ್ಲಿ ಮೇಜರ್ ರೋಲ್‌ನಲ್ಲಿ ನಟಿಸಿದ್ದರೂ ಆತನಿಗೆ ಹೆಸರು ತಂದು ಕೊಟ್ಟಿದ್ದು 'ಸ್ಪಾಶ್'. ಹಿರಿತೆರೆಯ ಈ ಚಿತ್ರ ಬಾಕ್ಸಾಫೀಸಿನಲ್ಲೂ ಭರ್ಜರಿ ಗೆಲುವು ಸಾಧಿಸಿತು. ಅದರ ಎಫೆಕ್ಟ್ ಎಂಬಂತೆ 'ಬ್ಯಾಚುಲರ್ ಪಾರ್ಟಿ', 'ದಿ ಮ್ಯಾನ್ ವಿತ್ ಒನ್ ರೆಡ್ ಶೂ', 'ವಾಲಂಟೀರ್ಸ್' ಬಗೆಯ ಸಿನಿಮಾಗಳು ಟಾಮ್‌ನನ್ನು ಹುಡುಕಿಕೊಂಡು ಬಂದವು. 'ವಾಲಂಟೀರ್ಸ್' ಚಿತ್ರ ಗಣನೀಯಮಟ್ಟದಲ್ಲಿ ಟಾಮ್‌ಗೆ ಸಕ್ಸಸ್ ತಂದುಕೊಡದಿದ್ದರೂ ರೀಟಾ ವಿಲ್ಸನ್ ಎಂಬ ಸಹನಟಿಯನ್ನು ಖಂಡಿತಾ ಕೊಟ್ಟಿತ್ತು. ಟಾಮ್ ರೀಟಾಳನ್ನು ಹಚ್ಚಿಕೊಂಡ. ಸಂಬಂಧವಿಟ್ಟುಕೊಂಡ. ಇನ್ನೇನು ಇವರಿಬ್ಬರು ಮದುವೆಯೇ ಆಗಿಬಿಟ್ಟರು ಅನ್ನುವಷ್ಟರಲ್ಲಿ "ರೀಟಾ ಮತ್ತು ನಾನು ಜಸ್ಟ್ ಒಬ್ಬರಿಗೊಬ್ಬರು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಂಡೆವು. ಬೇಕಿದ್ದರೆ ಮದುವೆಯನ್ನೂ ಆಗಬಹುದಿತ್ತು. ಆ ಮದುವೆಯಿಂದ ಸಲಬ್ರೇಟ್ ಮಾಡುವಂಥಾದ್ದೇನೂ ಇರಲಿಲ್ಲ; ಆದರೆ ರಿಯಾಲಿಟಿ ಎಂದರೆ ಅದು ನಿಜಕ್ಕೂ ಕಷ್ಟದ ಮದುವೆ. ವಿಶೇಷವಾಗಿ ನನಗಿಬ್ಬರು ಮಕ್ಕಳಿದ್ದರು. ಪ್ರೀತಿಯ ಮಕ್ಕಳು" ಎಂದು ಹೇಳುವ ಮೂಲಕ ಟಾಮ್ ಆ ಮದುವೆ ವಿಷಯಕ್ಕೆ ತೆರೆ ಎಳೆದ. ಆಮೇಲೆ 1988ರಲ್ಲಿ ಇದೇ ರೀಟಾಳನ್ನು ಅಧಿಕೃತವಾಗಿ ಮದುವೆಯಾಗಿದ್ದು ಬೇರೆ ವಿಚಾರ.

1988ರಲ್ಲಿ ಬಿಡುಗಡೆಯಾದ 'ಬಿಗ್' ನಿಜಕ್ಕೂ ಟಾಮ್‌ಗೆ ದೊಡ್ಡದೊಂದು ಬ್ರೇಕ್ ಕೊಟ್ಟಂಥ ಸಿನಿಮಾ. ಈ ಸಿನಿಮಾ ಬಾಕ್ಸಾಫೀಸಿನಲ್ಲಿ ಸೂಪರ್ ಹಿಟ್ ಆಗುವುದರ ಜೊತೆಗೆ ಟಾಮ್ ಒಬ್ಬ ಗಿಫ್ಟೆಡ್ ಆಕ್ಟರ್ ಎಂಬುದನ್ನು ಜಗತ್ತಿಗೆ ತೋರಿತು. 'ಬಿಗ್' ಮೂಲಕ ಟಾಮ್ ಮೊದಲ ಬಾರಿಗೆ ಆಸ್ಕರ್ ಪ್ರಶಸ್ತಿಗೆ ನೇಮಕಗೊಂಡ. ಆ ಸಕ್ಸಸ್‌ನೊಂದಿಗೆ 'ದಿ ಬರ್ಬ್ಸ್', 'ಟರ್ನರ್ ಅಂಡ್ ಹೂಚ್', 'ರೇಡಿಯೋ ಫ್ಲೈಯರ್', 'ದಿ ಲೀಗ್ ಆಫ್ ದೇರ್ ಓನ್', 'ಸ್ಲೀಪ್‌ಲೆಸ್ ಇನ್ ಸೀಟೆಲ್' ತರಹದ ಸಿನಿಮಾಗಳಲ್ಲಿ ನಟಿಸಿದ. 1993ರಲ್ಲಿ ತೆರೆಗೆ ಬಂದ 'ಫಿಲಾಡೆಲ್ಫಿಯಾ' ಟಾಮ್ ಹಾಂಕ್ಸ್‌ಗೆ ಮೊದಲಸಲ ಆಸ್ಕರ್ ಅವಾರ್ಡ್ ತಂದುಕೊಟ್ಟ ಸಿನಿಮಾ. ಆ ಚಿತ್ರ ಹಾಗೂ ಪ್ರಶಸ್ತಿ ಟಾಮ್‌ನ ವೃತ್ತಿಬದುಕಿಗೆ ಹೊಸ ತಿರುವು ನೀಡಿದ್ದರಲ್ಲಿ ಅಚ್ಚರಿ ಪಡಬೇಕಿಲ್ಲ. ಆವರೆಗೆ ಟಾಮ್ ಬಗೆಗಿದ್ದ ಭರವಸೆ, ನಿರೀಕ್ಷೆ ವಿಶ್ವದೆಲ್ಲೆಡೆ ದ್ವಿಗುಣವಾಗತೊಡಗಿದವು. ಟಾಮ್ ರಾತ್ರೋರಾತ್ರಿ ಲೆಜೆಂಡ್ ಆಗತೊಡಗಿದ. ಒಂದು ಪ್ರತಿಷ್ಠಿತ ಪ್ರಶಸ್ತಿ ಒಬ್ಬ ವ್ಯಕ್ತಿಯ ಇಮೇಜನ್ನು ಹೇಗೆ ಬದಲಿಸಬಲ್ಲದು ಎಂಬುದನ್ನು ಆ ಪ್ರಶಸ್ತಿ ಟಾಮ್ ಮೂಲಕ ಮತ್ತೊಮ್ಮೆ ಜಗತ್ತಿಗೆ ಸಾರಿ ಹೇಳಿತ್ತು; ಅಂದಹಾಗೆ, ಪ್ರಶಸ್ತಿ ವಿಜೇತ ಟಾಮ್‌ನ ಸಂತಸದ ಮಾತುಗಳಿವು: "ನಾನಿವತ್ತು ಈ ಮಟ್ಟಕ್ಕೆ ಬೆಳೆದಿರುವುದಕ್ಕೆ ಕಾರಣಕರ್ತರಾಗಿರುವ ಈವರೆಗೆ ನನ್ನೊಂದಿಗೆ ಸ್ಕ್ರೀನ್ ಹಂಚಿಕೊಂಡು ನನ್ನನ್ನು ಒಬ್ಬ ನಟನನ್ನಾಗಿಸಿದ ಎಲ್ಲರನ್ನೂ ಸ್ಮರಿಸುತ್ತೇನೆ. ಹಾಗೇನೆ ಪ್ರತಿ ದಿನ, ಪ್ರತಿಕ್ಷಣ ನನಗೆ ಪ್ರೀತಿಯುಣಿಸಿ, ನನ್ನ ಗೆಲುವನ್ನು ಆಶಿಸುತ್ತಿರುವ ಮಡದಿ ರೀಟಾಳನ್ನೂ ನೆನೆಯುತ್ತೇನೆ." 'ಫಾರೆಸ್ಟ್ ಗಂಪ್' ಎನ್ನುವ ರೊಮ್ಯಾಂಟಿಕ್ ಕಾಮಿಡಿ ಚಿತ್ರದಲ್ಲಿನ ಅಭಿನಯಕ್ಕಾಗಿ ಸತತವಾಗಿ ಮಾರನೇ ವರ್ಷವೂ ಟಾಮ್ ಆಸ್ಕರ್ ಅವಾರ್ಡ್ ಗೆದ್ದುಕೊಂಡು ದಾಖಲೆ ಬರೆದದ್ದು ಈಗ ಇತಿಹಾಸ ಎನ್ನುವುದು ಬೇರೆ ಮಾತು.

ಬಾಲ್ಯದಿಂದಲೂ ಖಗೋಳಶಾಸ್ತ್ರದ ಬಗ್ಗೆ ಆಸಕ್ತನಾಗಿದ್ದ ಟಾಮ್ ಮುಂದೊಂದು ದಿನ 'ಅಪೋಲೋ-13' ಎಂಬ ಚಿತ್ರದಲ್ಲಿ ಗಗನಯಾತ್ರಿ ಜಿಮ್ ಲೋವೆಲ್‌ನ ಪಾತ್ರ ಮಾಡಿದ್ದು ಅಚ್ಚರಿಗಳಲ್ಲೊಂದು. 'ಅಪೋಲೋ-13' ಜೀರೋ ಗ್ರಾವಿಟಿಯಲ್ಲಿ ತಯಾರಿಸಿದ ಮೊದಲಚಿತ್ರ. ಈ ಚಿತ್ರಕ್ಕಾಗಿ 'ನಾಸಾ' ಸಂಸ್ಥೆ ಕೆಸಿ-135 ಎಂಬ ಏರ್ ಕ್ರಾಫ್ಟ್ ನೀಡಿದ್ದನ್ನೂ ಇಲ್ಲಿ ನೆನೆಯಬಹುದು. ಅಲ್ಲಿಂದಾಚೆಗೆ ಟಾಮ್ ಜೋಳಿಗೆಗೆ 'ಟಾಯ್ ಸ್ಟೋರಿ', 'ದಿ ಗ್ರೀನ್ ಮೈಲ್', 'ಸೇವಿಂಗ್ ಪ್ರೈವೇಟ್ ರ್ಯಾನ್', 'ಯೂ ಹ್ಯಾವ್ ಮೇಲ್' ತರಹದ ಸಿನಿಮಾಗಳು ಸೇರಿದವು. ಮನುಷ್ಯನೊಬ್ಬ ಒಂದು ವಿಮಾನ ಅಪಘಾತದಿಂದಾಗಿ ದ್ವೀಪವೊಂದರಲ್ಲಿ ಏಕಾಂಗಿಯಾಗಿ ಹಲವು ವರ್ಷಗಳನ್ನು ಕಳೆಯಬೇಕಾದ ಸ್ಥಿತಿಯನ್ನು ಬಿಂಬಿಸುವ 'ಕಾಸ್ಟ್ ಅವೇ' ಟಾಮ್ ವೃತ್ತಿ ಬದುಕಿನಲ್ಲಿ ಮತ್ತೊಂದು ಕ್ಲಾಸ್ ಸಿನಿಮಾ. ಸ್ವತಃ ಟಾಮ್ ಹಾಂಕ್ಸ್ ಮೊಟ್ಟಮೊದಲಬಾರಿಗೆ ನಿರ್ಮಿಸಿದ ಈ ಚಿತ್ರ ಜಗತ್ತೇ ಬೆರಗಾಗುವಂತೆ ಮಾಡಿತ್ತು, ಕೆಲವೇ ಡೈಲಾಗ್ಸ್ ಇರುವ, ವಿಚಿತ್ರ ಪ್ರಯೋಗಾತ್ಮಕ ಚಿತ್ರ ಇದಾಗಿದ್ದು ಹೀಗೂ ಸಿನಿಮಾ ಮಾಡಬಹುದಾ? ಅಂತ ಎಲ್ಲರೂ ಬಾಯಿ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದ್ದು ಸುಳ್ಳಲ್ಲ. ಇಂತಹ ಅಪರೂಪದ ಚಿತ್ರದ ಬಗ್ಗೆ ಟಾಮ್ ಹೇಳುವುದಿಷ್ಟು: 'ಕಾಸ್ಟ್‌ಅವೇ' ಚಿತ್ರದ ಮೇಲೆ ಕೆಲಸ ಮಾಡಲು ಶುರು ಮಾಡುತ್ತಿದ್ದಂತೆಯೇ ನನಗೆ ಫನ್ನಿ ಅನ್ನಿಸಲು ಶುರುವಾಗಿತ್ತು, ಮನುಷ್ಯನೊಬ್ಬ ಬರೋಬ್ಬರಿ ನಾಲ್ಕು ವರ್ಷಗಳ ಕಾಲ ದ್ವೀಪವೊಂದರಲ್ಲಿ ಏಕಾಂಗಿಯಾಗಿ ಕಾಲ ಕಳೆಯುವ ಕಾನ್ಸೆಪ್ಟ್ ಎಂಥ ತಮಾಷೆಯದು ಅನ್ನಿಸದೆ ಇರಲಿಲ್ಲ, ನಾಲ್ಕು ಮಕ್ಕಳು, ಒಬ್ಬ ಹೆಂಡತಿಯುಳ್ಳ ನನಗೆ ಆ ಚಿತ್ರವು ಒಂದು ಪರೀಕ್ಷೆಯೇ ಆಗಿತ್ತು."

ಈ ನಡುವೆ ಸ್ಟೀವನ್ ಸ್ಪಿಲ್‌ಬರ್ಗ್ ಜೊತೆ ಪಾಲುದಾರಿಕೆಯಲ್ಲಿ ಎಚ್.ಬಿ.ಓ. ಚಾನೆಲ್ಲಿಗಾಗಿ 'ಬ್ಯಾಂಡ್ ಆಫ್ ಬ್ರದರ್ಸ್' ಎಂಬ ಮಿನಿ ಸೀರೀಸ್ ನಿರ್ಮಾಣಕ್ಕೆ ಕೈಹಾಕಿ ಅಲ್ಲಿಯೂ ಜಯ ದಾಖಲಿಸಿದ ಟಾಮ್ ಹಾಂಕ್ಸ್ 'ರೋಡ್ ಟು ಪರ್ಡಿಶನ್', 'ಕ್ಯಾಚ್ ಮಿ ಇಫ್ ಯೂ ಕೆನ್', 'ದಿ ಲೇಡಿ ಕಿಲ್ಲರ್ಸ್', 'ದಿ ಟರ್ಮಿನಲ್', 'ದಿ ಪೋಲಾರ್ ಎಕ್ಸ್‌ಪ್ರೆಸ್' ಬಗೆಯ ಸಿನಿಮಾಗಳ ಮುಖೇನ ತನ್ನೊಳಗಿನ ಎಂತಹ ಪಾತ್ರಕ್ಕೂ ಒಗ್ಗುವ, ಒಪ್ಪುವ ಕಲಾವಿದನನ್ನು ಜಗತ್ತಿನೆದುರು ತೆರೆದಿಟ್ಟ. ಹೀಗೆ ತನ್ನೊಳಗಿನ ಪ್ರತಿಭೆಯಿಂದ ಆಗಾಗ ಪವಾಡಗಳನ್ನು ಮಾಡುವ ಟಾಮ್ 2006ರಲ್ಲಿ ಹೊಸದೊಂದು ಪವಾಡ ಮಾಡಿದ್ದನ್ನು ಜ್ಞಾಪಿಸಿಕೊಳ್ಳದಿದ್ದರೆ ಹೇಗೆ? ಆ ಪವಾಡವೇ ವಿವಾದಾತ್ಮಕ ಸಿನಿಮಾ 'ದಿ ಡ ವಿಂಚಿ ಕೋಡ್'. ಡಾನ್ ಬ್ರೌನ್ ಬರೆದ ಪುಸ್ತಕವನ್ನು ಆಧರಿಸಿದ್ದ ಈ ಚಿತ್ರ ಎಲ್ಲೆಡೆ ವಿವಾದ ಉಂಟುಮಾಡಿತ್ತು, ಕಟುವಿಮರ್ಶೆಗೂ ಗುರಿಯಾಗಿತ್ತು. ಅದೇ ರೀತಿ ಗಲ್ಲಾಪೆಟ್ಟಿಗೆಯನ್ನೂ ತುಂಬಿಸಿದ್ದು ಮತ್ತೂ ವಿಶೇಷ. 2007ರಲ್ಲಿ ಟಾಮ್ ಮಾಡಿದ ಮತ್ತೊಂದು ವಿವಾದಾತ್ಮಕ ಸಿನಿಮಾ ಎಂದರೆ 'ಚಾರ್ಲಿ ವಿಲ್ಸನ್ಸ್ ವಾರ್'. ಬರಹಗಾರ ಜಾರ್ಜ್ ಕ್ರೈಲನ ಕೃತಿ ಆಧಾರಿತ ಈ ಚಿತ್ರದಲ್ಲಿ ಟಾಮ್ ಹಾಂಕ್ಸ್ ಮಾಡಿದ್ದು ಅಮೆರಿಕದ ರಾಜಕಾರಣಿ ಚಾರ್ಲಿ ವಿಲ್ಸನ್‌ನ ಪಾತ್ರ. ರಾಜಕೀಯ ವಸ್ತುವುಳ್ಳ ಈ ಚಿತ್ರದಲ್ಲಿ ಟಾಮ್ ಮತ್ತೊಮ್ಮೆ ಅದ್ಭುತ ಪರ್ಫಾರ್ಮೆನ್ಸ್ ನೀಡಿದ್ದನ್ನು ಯಾರೂ ಮರೆಯುವಂತಿಲ್ಲ.

ನಟನೆಯ ಜೊತೆಜೊತೆಗೆ ನಿರ್ಮಾಣದಲ್ಲಿಯೂ ತನ್ನನ್ನು ಮತ್ತಷ್ಟು ಗಂಭೀರವಾಗಿ ತೊಡಗಿಕೊಂಡ ಟಾಮ್ ತನ್ನ ಮಗ ಕಾಲಿನ್ ಹಾಂಕ್ಸ್‌ಗಾಗಿ 'ದಿ ಗ್ರೇಟ್ ಬಕ್ ಹೊವಾರ್ಡ್' ಎಂಬ ಚಿತ್ರವನ್ನು ಮಡದಿ ರೀಟಾ ಒಡಗೂಡಿ ನಿರ್ಮಿಸುವುದರ ಜೊತೆಗೆ ಅತಿಥಿ ನಟನಾಗಿ ಒಂದು ಪುಟ್ಟ ಪಾತ್ರದಲ್ಲಿ ಕಾಣಿಸಿಕೊಂಡಿದ್ದ. ಈತನಿಗಿದ್ದ ನಿರ್ಮಾಣದ ಆಸಕ್ತಿ ಹಾಗೇ ಮುಂದುವರಿದು 'ಜಾನ್ ಆಡಮ್ಸ್' ಎಂಬ ಮಿನಿಸೀರೀಸ್ ಅನ್ನು ಎಚ್.ಬಿ.ಓ. ಚಾನೆಲ್ಲಿಗೆ ನಿರ್ಮಿಸಿದ. ಪ್ರಖ್ಯಾತ ಲೇಖಕ ಡೇವಿಡ್ ಮೆಕ್ಕುಲೋ ಬರೆದಿರುವ ಅಮೆರಿಕದ ದ್ವಿತೀಯ ಅಧ್ಯಕ್ಷ ಜಾನ್ ಆಡಮ್ಸ್ ಜೀವನಾಧಾರಿತ ಕೃತಿಯಿದು. ಈ ಬಾರಿಯೂ ಟಾಮ್ ಹಾಂಕ್ಸ್ ಪ್ರಶಂಸೆಗೆ ಒಳಗಾಗಿದ್ದಲ್ಲದೆ ಅನೇಕ ಪ್ರಶಸ್ತಿಗಳನ್ನೂ ಗಳಿಸಿದ. ಟಾಮ್ ಮತ್ತೊಮ್ಮೆ ಡಾನ್ ಬ್ರೌನ್ ಕಾದಂಬರಿಯಾಧಾರಿತ ಸಿನಿಮಾದಲ್ಲಿ ನಟಿಸಿದ್ದು 'ಏಂಜಲ್ಸ್ ಅಂಡ್ ಡೆಮೋನ್ಸ್' ಎಂಬ ಚಿತ್ರದಲ್ಲಿ. ನಂತರದ ದಿನಗಳಲ್ಲಿ ಆತ ನಟಿಸಿದ ಎಲ್ಲಾ ಚಿತ್ರಗಳಲ್ಲೂ ಆತ ತನ್ನದೇ ಆದ ಛಾಪನ್ನು ಮೂಡಿಸುತ್ತಾ ಬಂದ. ಈ ಪಾತ್ರಕ್ಕೆ ಈತನೇ ಕರೆಕ್ಟ್ ಅನ್ನಿಸುವಂತೆ ನಟಿಸಿ, ಭೇಷ್ ಎನಿಸಿಕೊಂಡ.

ಇಂತಹ ಅಪರೂಪದ ಕಲಾವಿದ ಟಾಮ್‌ನ ಮುಂದಿನ ಚಿತ್ರ 'ಎ ಹಾಲೋಗ್ರಾಮ್ ಫಾರ್ ದಿ ಕಿಂಗ್'. ಇದು 2015 ರಲ್ಲಿ ಬಿಡುಗಡೆಯಾಗಲಿದೆ.

ಇಷ್ಟೆಲ್ಲಾ ಬರೆದ ನಂತರವೂ ಟಾಮ್ ಹಾಂಕ್ಸ್ ಪೂರ್ತಿ ದಕ್ಕಿದಂತಾಗುವುದಿಲ್ಲ. ಬೆಣ್ಣೆಯ ಮುದ್ದೆಯಂತಿರುವ, ಅಷ್ಟಟಿ ಕಲಾವಿದನಂತಿರುವ ಈ ಕ್ರಿಯಾಶೀಲಜೀವಿಯ ಅಪರೂಪದ ಸೆಳೆತದ ರಹಸ್ಯವೇನು? ಇಡೀ ಲೋಕದ ಸಿನಿಪ್ರಿಯರು "ಟಾಮ್ ಥರದ, ಟಾಮ್ ಮಾತ್ರ ಮಾಡಬಹುದಾದ ಪಾತ್ರಗಳನ್ನು ಮಾಡಬಲ್ಲ ಮತ್ತೊಬ್ಬ ನಟನನ್ನು ಈತನ ಜಾಗದಲ್ಲಿ ಕಲ್ಪಿಸಿಕೊಳ್ಳುವುದು ಕಷ್ಟ" ಎಂದು ಉಚ್ಚರಿಸುವುದು ಯಾಕಿರಬಹುದು? ಈತನಿಗೆ ತಾನು ಮಾಡುವ ಕೆಲಸದ ಮೇಲಿರುವ ತೃಷ್ಣೆ, ಪ್ರಾಮಾಣಿಕತೆ, ಸಿದ್ಧತೆ, ಪಕ್ವತೆಯೇ ಇದಕ್ಕೆಲ್ಲ ಕಾರಣವಿರಬಹುದು. ಈತನ ಬದುಕಿನ ಹಿಂದೆ ಸ್ಫೂರ್ತಿಯಾಗಿ ನಿಂತ ಮಡದಿ ರೀಟಾ, ಮಕ್ಕಳ ಪ್ರೀತಿ, ಆದಮ್ಯ ಜೀವನಪ್ರೇಮ- ಕ್ಯಾಲ್ಮ ನಿಲುವು, ಸಹಜ ರೂಪ, ಅಂಗ ಸೌಷ್ಟವ- ಈತನಿಗೆ ಒಲಿದಿದೆ. ಹಾಲಿವುಡ್‌ನಲ್ಲಿ ನಟರಿಗೇನೂ ಬರವಿಲ್ಲ, ಆದರೆ ಎಲ್ಲರೂ ಟಾಮ್ ಹಾಂಕ್ಸ್ ಆಗಲು ಸಾಧ್ಯವಿಲ!!

● ಹೃದಯಶಿವ

ಅಂಬಲಪಾಡಿಯ ಭಲೇ ಬಳ್ಳಾಲರಾಯ

ಅಂಬಲಪಾಡಿಯ ಬಲ್ಲಾಳರ ಬಗ್ಗೆ ಸಾರಾಸಗಟಾಗಿ ಮಾತಾಡಲಾಗದು. ಅಣ್ಣಾಜಿ ಬಲ್ಲಾಳರು ಸಜ್ಜನಿಕೆಯ ವ್ಯಕ್ತಿ. ಅವರ ಮಗ ದಿವಂಗತ ನಿ.ಮುರಾರಿ ಬಳ್ಳಾಲರು ನಿಜವಾದ ಆಧ್ಯಾತ್ಮಿಕ ಜೀವಿಯಾಗಿದ್ದರಲ್ಲದೇ ಅತ್ಯಂತ ಮಾನವೀಯ ಕಳಕಳಿಯನ್ನು ಹೊಂದಿದ್ದರು. ಅವರು ಸದಾ ಜನಪರ ವಿಷಯಗಳಿಗೆ ಸ್ಪಂದಿಸುವಂತಹ ಗುಣವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಆದರೆ ಅವರ ಸೋದರ ವಿಜಯ ಬಳ್ಳಾಲ ಕೊಲ್ಲೂರಿನ ಅಡ್ಯಂತಾಯನಂತೆ ಪಕ್ಕಾ ಆರೆಸ್ಸೆಸ್ ಆಸಾಮಿ. ಆತನಿಗೆ ಆಧ್ಯಾತ್ಮವೂ ಗೊತ್ತಿಲ್ಲ, ಭಕ್ತಿ ಸಂಪ್ರದಾಯಗಳೂ ಗೊತ್ತಿಲ್ಲ. ದುಡ್ಡು-ಖ್ಯಾತಿ ಇಂಥವುಗಳನ್ನು ಬಿಟ್ಟು ಬೇರಿನ್ನಾವುದೂ ಬೇಕಾಗಿಯೂ ಇಲ್ಲ.

ವಿಕಿಪೀಡಿಯಾದಲ್ಲಿ ದುರುದ್ದೇಶಪೂರಿತ ತಪ್ಪು ಮಾಹಿತಿಯನ್ನು ಕೊಟ್ಟ ಮಾತ್ರಕ್ಕೆ ಅದೇ ಸರಿ ಎಂದೆನಿಸುವುದಿಲ್ಲ. ಹೇಗೂ ಈ ವೈದಿಕರು ತಮಗೆ ಬೇಕಾದಂತೆ ಕಥೆ ಕಟ್ಟಿ ಜನರನ್ನು ಯಾಮಾರಿಸುವಲ್ಲಿ ಪಳಗಿದವರು. ಇದರಲ್ಲಿ ಹೊಸದೇನೂ ಇಲ್ಲ. ಮಹಾಕಾಳಿ ದೇವಿಯನ್ನು ಸೂಚಿಸುವ 'ಅಮ್ಮನಹಾಡಿ'ಯೇ ನಂತರ ಅಂಬಲಪಾಡಿ ಆಗಿದ್ದು ಎನ್ನಲಾಗುತ್ತದೆ. ಈ ಅಮ್ಮನ ಹಾಡಿಯಲ್ಲಿ ಯಾರದ್ದೋ ಕುಲದೈವ ಜನಾರ್ದನನನ್ನು ನಂತರ ಸೇರಿಸಲಾಯಿತಾದರೂ (ಜನಾರ್ದನ ದೇಗುಲವನ್ನು ಪಾಂಡವರು ಕಟ್ಟಿದ್ದಂತೆ) ಊರ ಪರಊರವರ ಭಕ್ತಿ ಸಲ್ಲುವುದು ಮಹಾಕಾಳಿಗೇನೆ. ಇಲ್ಲಿ ದೇವಿಗೆ ದಾಖಲೆ ಸಂಖ್ಯೆಯಲ್ಲಿ ಸೀರೆಯ ಹರಕೆ ಸಲ್ಲುವುದೇ ಇದಕ್ಕೆ ಸಾಕ್ಷಿ (ಲೋಡ್‌ಗಟ್ಟಲೆ ಹರಕೆ ಸೀರೆ ಪ್ರತಿವರ್ಷ ಇಲ್ಲಿ ಹರಾಜಾಗುತ್ತದೆ).

ಕರಾವಳಿ ಜಿಲ್ಲೆಯಲ್ಲಿ ದೇಗುಲಗಳ ಹಾವಳಿಗೇನೂ ಕೊರತೆಯಿಲ್ಲ. ಇಲ್ಲಿನ ಅಲಿಖಿತ ಸಂಪ್ರದಾಯದಂತೆ ಸಾಹಿತ್ಯ ಸಮ್ಮೇಳನಗಳೆಲ್ಲವೂ ನಡೆಯುವುದು ಇಂತಹ ದೇಗುಲಗಳ ಆವರಣದಲ್ಲೇ. ಉಡುಪಿಯ ಸಾಹಿತ್ಯ ಸಮ್ಮೇಳನವೊಂದು ಇದೇ ಅಂಬಲಪಾಡಿಯಲ್ಲೂ ನಡೆದಿತ್ತು. ಈ ನಡಾವಳಿಯ ಹಿಂದೆ ಅನೇಕ ಉದ್ದೇಶಗಳಿವೆ. ಅನ್ಯ ಧರ್ಮಗಳಲ್ಲೂ ಸಾಹಿತಿಗಳಿದ್ದಾರೆ. ಇದೇರೀತಿ ಮಸೀದಿಯಲ್ಲೋ ಚರ್ಚ್‌ನಲ್ಲೋ ಸಾಹಿತ್ಯ ಸಮ್ಮೇಳನ ನಡೆಸುವ ಇಚ್ಛೆಯಂತೂ [illegible], ತಾವೇ ಸಾಹಿತಿಗಳು, ದೇಗುಲದ ಪ್ರಚಾರ [illegible] (ಇಂತಹ ಉದ್ದೇಶಕ್ಕೆ, ಸ್ವಾಗತ ಕಮಾನುಗಳೆಲ್ಲ [illegible] ಕಮಾನೂರಿಲು) ತಮ್ಮವರೇ ಒಟ್ಟು ಸೇರಿ [illegible] ಸರಕಾರಿ ಹಣವನ್ನು ಹುಡಿಹಾರಿಸ ಬೇಕೆನ್ನುವುದು [illegible] ಲೆಕ್ಕಾಚಾರವಿರಬಹುದು.

ಮಹಾಕಾಳಿ ಮೂಲತಃ ಸ್ಥಳೀಯರು ಪೂಜಿಸುತ್ತಿದ್ದ ಮಾರಮ್ಮನಂತಹ ಶಕ್ತಿಯಾಗಿದ್ದಿರಬಹುದು. ಕರಾವಳಿಯಲ್ಲಿ ಜನಮನದಲ್ಲಿ ಹಾಸುಹೊಕ್ಕಾಗಿ ಜನಪದೀಯವಾದಿ ಆರಾಧಿಸುತ್ತಿದ್ದ ದೈವ ಭೂತಗಳನ್ನೆಲ್ಲ ಇಲ್ಲಿಗೆ ಬಂದ ವೈದಿಕರು ಸುಲಭದಲ್ಲಿ ತಿರಸ್ಕರಿಸಲಾಗದೇ ಶಿವನ ಗಣಗಳೆಂದು ಕರೆದರಲ್ಲದೇ ಇನ್ನು ಕೆಲ ಶಕ್ತಿಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಪರಿವರ್ತಿಸಿಕೊಂಡಂತಹ ಅನೇಕ ಉದಾಹರಣೆಗಳಿವೆ. ಈಗ ಶೂದ್ರರ ಭೂತಾರಾಧನೆ, ದೈವಸ್ಥಾನಗಳೆಲ್ಲ ವೈದಿಕಮಯವಾಗಿ, ಓಂ ಹಾಗು ಕೇಸರಿ ಬಣ್ಣಗಳಲ್ಲೇ ಅವು ಮುಳುಗಿಬಿಟ್ಟಿವೆ. ಕಲ್ಲಡ್ಕ ಭಟ್ಟ- ಪೇಜಾವರರಂತಹ ನಾಯಕರುಗಳು ಈ ಧಾರ್ಮಿಕ ಸ್ಥಾನಗಳ ನಿಯಂತ್ರಣದ



ಮೂಲಕ ತಮ್ಮ ಕಾರ್ಯಸಾಧನೆಯನ್ನು ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇಂತಹ ಸ್ಥಾನಗಳು ಇವರ ಸಂಪತ್ತಿಗೂ ಮೂಲಾಧಾರ. ಅದೇ ರೀತಿ ಶೂದ್ರರ ಗುಲಾಮೀ ಹಿಡಿತಕ್ಕೂ ಸುಲಭದ ಮಾಧ್ಯಮ. ಈ ಕಾರಣಕ್ಕಾಗಿ ಬಂಟ ಬಿಲ್ಲವಾದಿ ಶೂದ್ರವರ್ಗ ಈ ಹಿಡಿತದಿಂದ ಮೊದಲು ಹೊರಬಂದರೆ ಮುಕ್ಕಾಲುವಾಸಿ ಸಾಮರಸ್ಯದ ಸಮಸ್ಯೆಗಳಿಗೆ ಪರಿಹಾರ ಸಿಕ್ಕಂತೆಯೇ. ಇದೀಗ ನ್ಯಾಯಮೂರ್ತಿ ನಾಗಜ್ಯೋತಿಯವರು ಇಲ್ಲಿನ ಮಹಾಕಾಳಿಯ ಶಕ್ತಿಯನ್ನು ಆಹ್ವಾನಿಸಿಕೊಂಡಿರಬೇಕು. ಇಲ್ಲವಾದರೆ ರಾಜಕಾರಣಿಗಳ ಸಾಂಗತ್ಯದ ಇಲ್ಲಿನ ಬಲಾಢ್ಯ ವ್ಯಕ್ತಿಗಳನ್ನು ಎದುರು ಹಾಕಿಕೊಳ್ಳುವುದು ಸುಲಭದ ಮಾತಲ್ಲ. ಅಂಬಲಪಾಡಿಯ ವಿಷಯದಲ್ಲಿ ಇದೇ ರೀತಿಯ ಜನಪರವಾದ ದಿಟ್ಟ ಅಂತಿಮ ತೀರ್ಪು ನ್ಯಾಯಾಲಯದಿಂದ ಮುಂದೆಯೂ ಹೊರಬರುವಂತಾಗಲಿ ಎನ್ನುವುದು ಜನರ ನಿರೀಕ್ಷೆಯಾಗಿದೆ. ಅದು ಹುಸಿಯಾಗದಿರಲಿ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly



ಕರ್ನಾಟಕದ 'ರೋಜ್' ಆಸ್ಟ್ರೇಲಿಯದಲ್ಲಿ

'ಸಾಜನ್' ಎಂಬ ಹಿಂದಿಯ ಸಿನಿಮಾದ ಎಳೆ ಇಟ್ಟುಕೊಂಡು ತಯಾರಾದ 'ಎಕ್ಸ್ ಕ್ಯೂಸ್ ಮಿ' ಎಂಬ ಸಿನಿಮಾದಲ್ಲಿ ನಟಿಸಿ ಗುರ್ತಿಸಿಕೊಂಡ ಅಜಯ್ ರಾವ್ ಆನಂತರ ಅದೇಕೋ ಮೂಲೆ ಸೇರಿದರು. ಆಮೇಲೆ ಕೆಟ್ಟ ಚಿತ್ರಗಳೂ ಒಮ್ಮೊಮ್ಮೆ ಹಿಟ್ ಆಗುತ್ತವೆ ಎಂಬುದಕ್ಕೆ ಸಾಕ್ಷಿಯಂತಿದ್ದ 'ತಾಜ್ ಮಹಲ್' ಮೂಲಕ ಮತ್ತೆ ಗಾಂಧಿನಗರದಲ್ಲಿ ಕಾಣಿಸಿಕೊಂಡರು. ಯಾವಾಗ 'ತಾಜ್ ಮಹಲ್' ಸುಮಾರಾಗಿ ಓಡಿತೋ ಅಜಯ್‌ಗೂ ಅದೃಷ್ಟ ಖುಲಾಯಿಸಿತು.

ಆ ಸಿನಿಮಾದ ಭರದಲ್ಲಿ ಒಂದಿಷ್ಟು ಚಿತ್ರಗಳಲ್ಲಿ ಕಾಣಿಸಿಕೊಂಡ ಅಜಯ್ ಮತ್ತೆ ಅದೇಕೋ ಸೋಲುಂಡರು. 'ಕೃಷ್ಣನ್ ಲವ್ ಸ್ಟೋರಿ' ಎಂಬ ಚಿತ್ರ 'ಸಂತೆಯಲ್ಲಿ ನಿಂತರೂನು' ಹಾಡಿನ ಕೃಪೆಯಿಂದ ಒಂದು ರೇಂಜಿಗೆ ಕಲೆಕ್ಷನ್ ಮಾಡುತ್ತಿದ್ದಂತೆಯೇ ಗಾಂಧಿನಗರದ ಮಂದಿ ಮತ್ತೆ ಅಜಯ್ ಕಡೆ ಕಣ್ಣು ನೆಟ್ಟರು. ಕೃಷ್ಣಾರ್ಪಣ 'ಮಸ್ತ್' ಅಂತ ಕೃಷ್ಣಲೀಲೆಯಲ್ಲಿ ಇನ್ನೊಂದಿಷ್ಟು ಕಾಸು ದೋಚಿಕೊಳ್ಳಬಹುದು ಅಂತ ಭ್ರಮಿಸಿ 'ಕೃಷ್ಣನ್ ಮ್ಯಾರೇಜ್ ಸ್ಟೋರಿ' ಅಂತೇನೋ ಮಾಡಲು ಹೋಗಿ ಮುಖಭಂಗ ಅನುಭವಿಸಿದರು. ಅದೇಕೋ ಆನಂತರದ ಅಜಯ್ ನಟಿಸಿದ ಸಿನಿಮಾಗಳು ಮತ್ತೆ ಮಕಾಡೆ ಮಲಗಲು ಶುರು ಮಾಡಿಕೊಂಡವು. ಇಂತಹ ಬರಗಾಲದಲ್ಲಿ 'ರೋಜ್' ಎಂಬ ಹಳಸಲು ಟೈಟಲ್ ಇರುವ ಸಿನಿಮಾ ಮೇಲೆ ಅಜಯ್ ಭರವಸೆ ಇಟ್ಟುಕೊಂಡಿರುವುದು ಸುಳ್ಳಲ್ಲ. ಅಂದಹಾಗೆ ಈ ಚಿತ್ರ ಏಕಕಾಲಕ್ಕೆ ಕರ್ನಾಟಕ ಹಾಗೂ ಆಸ್ಟ್ರೇಲಿಯಗಳಲ್ಲಿ ಬಿಡುಗಡೆಯಾಗುತ್ತದಂತಪ್ಪಾ...

ಮಂಜು ಮಾಂಡವ್ಯ ನಿರ್ದೇಶನಕ್ಕೆ




ಕಳೆದ ಒಂದು ದಶಕದಿಂದ ಸಿನಿಮಾಗಳಿಗೆ ಸಂಭಾಷಣೆ ಬರೆಯುತ್ತಾ ಬಂದಿರುವ ಮಂಜು ಮಾಂಡವ್ಯ ಅವರು ನಟ ಯಶ್ ಅಭಿನಯದ ಒಂದು ಸಿನಿಮಾವನ್ನು ನಿರ್ದೇಶಿಸಲು ತಯಾರಿ ನಡೆಸಿಕೊಳ್ಳುವ ಮೂಲಕ ನಿರ್ದೇಶಕನಾಗಿ ಬಡ್ತಿ ಪಡೆಯುವ ತಮ್ಮ ಬಹುದಿನದ ಕನಸನ್ನು ಕಡೆಗೂ ನನಸಾಗಿಸಿಕೊಳ್ಳುತ್ತಿದ್ದಾರೆ. ಹೊಂಬಾಳೆ ಫಿಲಂಸ್ ಬ್ಯಾನರಿನಡಿ ವಿಜಯ್ ಕುಮಾರ್ ಕಿರಗಂದೂರ್ ಎಂಬುವವರು ಇದನ್ನು ನಿರ್ಮಿಸಲಿದ್ದಾರೆ.



ಸದ್ಯಕ್ಕೆ ಯಶ್ ಬ್ಯುಸಿಯಾಗಿರುವ 'ಮಿಸ್ಟರ್ ಅಂಡ್ ಮಿಸ್ಟ್ರೆಸ್' ಚಿತ್ರ ಪೂರ್ತಿಯಾದ ನಂತರವಷ್ಟೇ ಈ ಸಿನಿಮಾ ಶುರುವಾಗಲಿದೆಯಂತೆ. ಈ ಮೊದಲು ಮಂಜು ಮಾಂಡವ್ಯ ಅವರು ಯಶ್ ಅಭಿನಯದ ಹಿಟ್ ಸಿನಿಮಾ 'ರಾಜಾಹುಲಿ'ಗೆ ಮಾತು ಬರೆದಿದ್ದರು. ಯಶ್-ಮಂಜು ನಡುವಿನ ಆ ಪರಿಚಯ ಈಗ ಸಿನಿಮಾ ಆಗುವತ್ತ ಸಾಗಿದೆ. ಮಂಜು ಬರೆದಿದ್ದ ಕಥೆಯನ್ನು ಕೇಳಿದ ಯಶ್ ಒಪ್ಪಿಕೊಂಡಿದ್ದಾರೆ. ಎಲ್ಲವೂ ಭಾವಿಸಿದಂತೆ ನಡೆದರೆ ಮಂಜು ಮಾಂಡವ್ಯ ಕಥೆ, ಚಿತ್ರಕತೆ, ಸಂಭಾಷಣೆ ಬರೆದು ಯಶ್ ಸಿನಿಮಾ ಮಾಡುವುದು ಖಚಿತ.

ಏಯ್...ನಾನ್ ಭೀಷ್ಮ ಕಣೋ!



ನಟ ಕಿಶೋರ್ 'ಕರ್ಣ' ಆಗುತ್ತಾರೆ ಎಂದು ಹಿಂದೊಮ್ಮೆ ಸುದ್ದಿಯಾದದ್ದು ನಿಮಗೆಲ್ಲ ಗೊತ್ತಿದೆ. ಈಗ 'ಕರ್ಣ'ನ ಜಾಗದಲ್ಲಿ 'ಭೀಷ್ಮ' ಬಂದಿದ್ದಾನೆ. ಇದೇನಪಾ ಇದು ಮಹಾಭಾರತದ ಪಾತ್ರಗಳನ್ನೂ ಈ ರೀತಿ ತಮಗೆ ಇಷ್ಟ ಬಂದ ಹಾಗೆಲ್ಲಾ ಬಳಸಿಕೊಳ್ಳುತ್ತಿದ್ದಾರಲ್ಲಾ ಅಂತ ಬೇಜಾರು ಮಾಡಿಕೊಳ್ಳಬೇಡಿ. ಅಲ್ಲಿಯ ಪಾತ್ರಗಳೇ ಬೇರೆ... ಇಲ್ಲಿಯ ಪಾತ್ರಗಳೇ ಬೇರೆ.

ಅಂದಹಾಗೆ 'ಭೀಷ್ಮ'ನಿಗೆ ಈಗಾಗಲೇ ಶೂಟಿಂಗ್ ಶುರುವಾಗಿದ್ದು, ಕಿಶೋರ್ ಜೋಡಿಯಾಗಿ ಹರ್ದಿಕಾ ಶೆಟ್ಟಿ ನಟಿಸುತ್ತಿದ್ದಾರೆ. ಉಳಿದಂತೆ ಸಹಪಾತ್ರಧಾರಿಗಳಾಗಿ ಶೋಭರಾಜ್, ಪದ್ಮಾ ವಾಸಂತಿ, ಬುಲೆಟ್ ಪ್ರಕಾಶ್ ಕೂಡ ಇದ್ದಾರೆ. ಈ 'ಭೀಷ್ಮ'ನಿಗೆ ಜಿ.ರಾಮಚಂದ್ರನ್ ಎಂಬುವವರು ಹಣ ಹೂಡಿದ್ದಾರೆ. ಇವರು ಈ ಮುಂಚೆ 'ಹೆಂಡ್ತೀರ ದರ್ಬಾರ್', 'ಸೂಪರ್ ಶಾಸ್ತ್ರಿ' ಎಂಬ ಸೂಪರ್ ಫ್ಲಾಪ್ ಸಿನಿಮಾಗಳನ್ನು ನಿರ್ಮಿಸಿದ್ದರು. ಇವರ ಬ್ಯಾನರ್ ಹೆಸರು ಜಿ.ಆರ್.ಗೋಲ್ಡ್ ಫಿಲಂಸ್ ಅಂ

ಈ ಚಿತ್ರದ ಕತೆ ಬರೆದು ಅದನ್ನು ನಿರ್ದೇಶಿಸುತ್ತಿರುವವರ ಹೆಸ ರವಿರಾಜ್. ಇಷ್ಟಕ್ಕೂ ವಿಷ್ಣುವರ್ಧನ್ 'ಕರ್ಣ' ಆಗಿ ಗೆದ್ದಿದ್ದರೆ, ದೇವರಾ 'ಏಯ್ ನಾನ್ ಭೀಷ್ಮ ಕಣೋ' ಅನ್ನಲು ಹೋಗಿ ಸೋತಿದ್ದರು. ಈ ಚಿತ್ರ ಗತಿ ಏನಾಗುತ್ತೋ ನೋಡಬೇಕು.





ನಮೋ ತಿರುಮಲೇಶ...



ಸುಮಂತ್ ಶೈಲೇಂದ್ರ ಅಭಿನಯಿಸಿರುವ 'ತಿರುಪತಿ ಎಕ್ಸ್‌ಪ್ರೆಸ್' ಚಿತ್ರದ ಹಾಡುಗಳ ಧ್ವನಿಸುರುಳಿಯನ್ನು ಸುದೀಪ್ ಇತ್ತೀಚೆಗಷ್ಟೇ ಕೆ.ಎಸ್.ಸಿ.ಎ. ಸಭಾಂಗಣದಲ್ಲಿ ಬಿಡುಗಡೆ ಮಾಡಿದ್ದಾರೆ. ಚಿತ್ರರಂಗದ ಅನೇಕ ಗಣ್ಯರು ಕಾರ್ಯಕ್ರಮಕ್ಕೆ ಬಂದು ನಿರ್ಮಾಪಕ ಶೈಲೇಂದ್ರ ಬಾಬು ಅವರ ಮಗ ಸುಮಂತ್ ಶೈಲೇಂದ್ರನ ಚಿತ್ರದ ಹಾಡುಗಳು ಹಿಟ್ ಆಗಲಿ, ಸಿನಿಮಾ ಕೂಡ ಓಡಲಿ ಅಂತ ಹಾರೈಸಿದ್ದಾರೆ. ಆ ಪೈಕಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಎಚ್.ಡಿ.ಗಂಗರಾಜು, ಸಾಧು ಕೋ... ಆನಂದ್ ಆಡಿಯೋ ಸಂಸ್ಥೆಯ ಮೋಹನ್ ಪ್ರಮುಖರು. ಪಿ.ಕುಮಾರ್ ಎಂಬುವವರು ನಿರ್ದೇಶಿಸಿರುವ ಈ ಚಿತ್ರಕ್ಕೆ ಸ್ವತಃ ಚಿತ್ರದ ಹೀರೋ ಸುಮೇಂದ್ರನ ಫಾದರ್ ಶೈಲೇಂದ್ರ ಬಾಬು ಹಣ ಹಾಕಿದ್ದಾರೆ. ಯಶ್ ಜೊತೆ 'ಗೂಗ್ಲಿ'ಯಲ್ಲಿ ಸೊಂಟ ಬಳುಕಿಸಿ ನುಲಿದಿದ್ದ ಕೃತಿ ಕರಬಂಧ ಈ ಚಿತ್ರದ ನಾಯಕಿ. ಮೈಸೂರು, ಬೆಂಗಳೂರು, ತಿರುಪತಿ ಸೇರಿದಂತೆ ಇನ್ನೂ ಅನೇಕ ಕಡೆ ಚಿತ್ರೀಕರಣ ಮುಗಿಸಿಕೊಂಡು ಬಂದಿರುವ ಈ ಚಿತ್ರದಲ್ಲಿ ಪ್ರೀತಿ, ಪ್ರೇಮ, ಕಾಮಿಡಿ ಎಲ್ಲವೂ ಇದೆಯಂತೆ. ಸುಮಂತ್ ಗೆಲ್ಲಲೇ ಬೇಕು; ಇಲ್ಲದೇ ಹೋದಲ್ಲಿ ಶೈಲೇಂದ್ರಬಾಬು ಅವರು ತಮ್ಮ ಮಗನನ್ನು ಹೀರೋ ಮಾಡುವ ಗುರಿ ಸಾಧಿಸಿದಂತಾ ಗುವುದಿಲ್ಲ, ಪುತ್ರ ಪ್ರೇಮಕ್ಕೆ ಆಲ್ ದಿ ಬೆಸ್ಟ್ ಎನ್ನೋಣವೇ?!

ಸೆಕ್ಸ್ ಪಿಕ್ಚರಿಗೊಂದು ಪುಕ್ಸಟ್ಟೆ ಪ್ರಚಾ

ದೆಹಲಿಯಲ್ಲಿ ಹೆಣ್ಣುಮಗಳೊಬ್ಬಳ ಮೇಲೆ ಅಮಾನುಷವಾಗಿ ನ ಸಾಮೂಹಿಕ ಅತ್ಯಾಚಾರದ ಪ್ರಕರಣ ಇಡೀ ದೇಶವೇ ಬೆಚ್ಚಿ ಬೀಳುವ ಮಾಡಿದ್ದು ನಿಮಗೆಲ್ಲ ಗೊತ್ತಿರುವಂಥದ್ದೇ. ಈಗ ಆ ನೈಜ ಘಟನೆಯ ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ಒಂದು ಸಿನಿಮಾ ಆಗುತ್ತಿದೆ ಎ ಸುದ್ದಿ ಕೇಳಿಬರುತ್ತಿದೆ. ಆ ಚಿತ್ರದ ಹೆಸರು 'ಜಾಸ್ಮಿನ್-5' ಅಂತ.

ದೌರ್ಜನ್ಯಕ್ಕೆ ಒಳಗಾದ ಅಮಾಯಕ ಹೆಣ್ಣುಮಗಳ ಪಾತ್ರದಲ್ಲಿ ಎಂಬಾಕೆ ನಟಿಸುತ್ತಿದ್ದು ಕೃಷ್ಣ ಎನ್ನುವ ವ್ಯಕ್ತಿ ಈ ಚಿತ್ರದ ನಿರ್ದೇಶಕ. ಮೋ ಕುಮಾರ್ ಎಂಬುವವರು ಈ ಚಿತ್ರಕ್ಕೆ ಕಾಸು ಹಾಕುವುದರ ಜೊತೆಗೆ ಚಿತ್ರದ ಹೀರೋ ಕೂಡ. ಈಗಾಗಲೇ ಸೆನ್ಸಾರ್ ಆಗಿದ್ದು 'ಎ' ಸರ್ಟಿಫಿಕೆ ಪಡೆದುಕೊಂಡಿರುವ 'ಜಾಸ್ಮಿನ್- 5' ಯಾವುದೋ ಒಂದು ಕಳಪೆ ಮ ಸೆಕ್ಸ್ ಸಿನಿಮಾ ಆಗಿರುವ ಬಗ್ಗೆ ಯಾವ ಸಂದೇಹಗಳೂ ಇಲ್ಲ.

ಈ ಚಿತ್ರದ ತಂಡ ದೆಹಲಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾ ದುರ್ಘಟನೆಯನ್ನು ತಮ್ಮ ಚಿತ್ರದ ಬಿಟ್ಟಿ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದಾಗಿ ಅಲ್ಲಲ್ಲಿ ಮಾತುಗಳು ಕೇಳಿಬರುತ್ತಿವೆ. ಹೆಣ್ಣುಮಕ್ಕಳ ಮಾನ ಈ ಸಿನಿಮಾ ಮಾಡುವಲ್ಲಿಯೂ ಮಾರಾಟದ ವಸ್ತುವಾಗುತ್ತದೆ ಎಂಬ ಆಘಾತಕಾರಿ ಅಂಶವಲ್ಲವೇ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4.
Fax : 26604536